# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ವಿಕಾಸ್ ಷಡಾಕ್ಷರಪ್ಪ ಮಳ್ಳೇಕಟ್ಟೆ

ದಾವಣಗೆರೆ ಭಾನುವಾರ, ಜನವರಿ 10, 2021

ಸಂಪುಟ : 47 ಸಂಚಿಕೆ : 251 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 8 ರೂ : 4.00 www.janathavani.com janathavani@mac.com


# ಅಮೃತ ಮಹೋತ್ಸವ ಸಂಭ್ರಮದಲ್ಲಿ ಸಂತ ಪೌಲರ ಶಿಕ್ಷಣ ಸಂಸ್ಥೆ

ಯಾವುದೇ ಒಂದು ಸಂಸ್ಥೆ ಯಶಸ್ವಿ 75 ಸಂವತ್ಸರಗಳನ್ನು ಕಳೆದು ಮುನ್ನಡೆಯುವುದು ಒಂದು ಸಾಧನೆಯೇ ಸರಿ. ಇಂತಹ ಒಂದು ಇತಿಹಾಸ ನಿರ್ಮಿಸುವಲ್ಲಿ ದಾವಣಗೆರೆಯ ಸಂತ ಪೌಲರ ಶಿಕ್ಷಣ ಸಂಸ್ಥೆ ಪ್ರಸ್ತುತ ವರ್ಷ ಅಮೃತ ಮಹೋತ್ಸವದತ್ತ ದಾಪುಗಾಲು ಇಟ್ಟಿದೆ.




Website : CBSE : www.stpaulshps.com HS : www.spcplatinumjubileedvg.com PUC : www.stpaulspucollegedvg.in - CBSE : 99643 77313 Alumni Association : 94839 94653 PUC : 94495 67350

## 1946 - 2021

### ಮೈಲಿಗಲ್ಲುಗಳು :

1. 1946 ದಾವಣಗೆರೆಗೆ ಕನ್ಯಾಭಗಿನಿಯರ ಆಗಮನ »
2. 1946 ಅಕ್ಟೋಬರ್ 10 ರಂದು ದಾವಣಗೆರೆಯಲ್ಲಿ ನರ್ಸರಿ ಶಾಲೆ
3. 1947 ಕನ್ನಡ ಮಾಧ್ಯಮ ಪ್ರಾಥಮಿಕ ಶಾಲೆ ಆರಂಭ »
4. 1949 ಆಂಗ್ಲ ಮಾಧ್ಯಮ ಪ್ರೌಢಶಾಲೆ ಆರಂಭ
5. 1963 ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲೆ ಕಾರ್ಯಾರಂಭ »
6. 1971 ರಜತ ಮಹೋತ್ಸವ ಸಂಭ್ರಮ
7. 1971 ಹೆಣ್ಣು ಮಕ್ಕಳ ಶಾಲೆಯಾಗಿ ಬದಲಾವಣೆ. »
8. 1986 ಕನ್ನಡ ಮಾಧ್ಯಮ ಪ್ರೌಢಶಾಲೆಗೆ ಅನುಮತಿ
9. 1987 ಕನ್ನಡ ಮಾಧ್ಯಮ ಪ್ರೌಢಶಾಲೆ ಆರಂಭ »
10. 1996 ಸುವರ್ಣ ಮಹೋತ್ಸವ ಸಂಭ್ರಮ
11. 2012 ಪದವಿ ಪೂರ್ವ ಕಾಲೇಜು ಆರಂಭ »
12. 2019 ಸಿಬಿಎಸ್‌ಇ ಶಾಲೆ ಆರಂಭ

## ಮೌಲ್ಯಾಧಾರಿತ ಶಿಕ್ಷಣ ಸಂಸ್ಥೆಯ ಹಿರಿಮೆ

ದೇಶದ ಶಿಕ್ಷಣ ಕ್ಷೇತ್ರಕ್ಕೆ ಕ್ರೈಸ್ತ ಮಿಷನರಿಗಳ ಕೊಡುಗೆ ಅನನ್ಯ. ಸ್ವಾತಂತ್ರ್ಯ ಪೂರ್ವದಲ್ಲಿ ಪ್ರತಿಕೂಲ ಪರಿಸ್ಥಿತಿಯಲ್ಲೂ ತಮ್ಮ ವೈಯಕ್ತಿಕ ಜೀವನದ ಆಸೆ, ಆಕಾಂಕ್ಷೆಗಳನ್ನು ತೊರೆದು, ಪರರ ಒಳಿತಿನಲ್ಲಿಯೇ ಪರಮಾತ್ಮನನ್ನು ಕಾಣಬಯಸುವ ಕಾಯಕವನ್ನು ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸುವ ಮೂಲಕ ಮಾಡಿದ್ದು ಕ್ರೈಸ್ತ ಮಿಷನರಿಗಳು.


ದಾವಣಗೆರೆಯಲ್ಲಿ ಹೆಣ್ಣು ಮಕ್ಕಳ ಸರ್ವತೋಮುಖ ಬೆಳವಣಿಗೆಗಾಗಿ ನಿಸ್ವಾರ್ಥ ಮನಸ್ಸಿನಿಂದ "ಸಿಎಸ್‌ಎಸ್‌ಟಿ" ಸಂಸ್ಥೆಯ ಧರ್ಮಭಗಿನಿಯರು ಬಿತ್ತಿದ ಜ್ಞಾನದ ಚಿಕ್ಕ ಬೀಜ ಮಣ್ಣಲ್ಲಿ ಮೊಳಕೆಯೊಡೆದು, ಗಿಡವಾಗಿ, ಮರವಾಗಿ ಇಂದು ಹೆಮ್ಮರವಾಗಿ ಸಂತ ಪೌಲರ ಶಿಕ್ಷಣ ಸಂಸ್ಥೆಯ ಹೆಸರಿನಲ್ಲಿ ತನ್ನ ರೆಂಬೆಕೊಂಬೆಗಳನ್ನು ಚಾಚಿ ಸಾವಿರಾರು ಮಕ್ಕಳ ಭವಿಷ್ಯ ರೂಪಿಸುತ್ತಿದೆ.

"ಪ್ರಾರ್ಥನೆ, ಪ್ರೀತಿ, ಕೆಲಸ" ಗಳೆಂಬ ತ್ರೈಮಾಣಿಕ್ಯಗಳನ್ನು ತನ್ನ ಧ್ಯೇಯವನ್ನಾಗಿಸಿಕೊಂಡ ಸಂತ ಪೌಲರ ಶಿಕ್ಷಣ ಸಂಸ್ಥೆ ದಾವಣಗೆರೆಯ ಶಿಕ್ಷಣ ಸಂಸ್ಥೆಗಳ ಇತಿಹಾಸದಲ್ಲಿಯೇ ವಿಶಿಷ್ಟ ಛಾಪು ಮೂಡಿಸಿದ್ದು, ಶಿಸ್ತು, ಶುಚಿತ್ವ, ಸಂಸ್ಕೃತಿ, ಸಂಸ್ಕಾರಗಳೊಂದಿಗೆ ಮೌಲ್ಯಾಧಾರಿತ ಶಿಕ್ಷಣವನ್ನು ನೀಡುವುದರ ಮೂಲಕ ಭವಿಷ್ಯದ ಪ್ರಜೆಗಳನ್ನು ರೂಪಿಸಿ, ಜನಮಾನಸದಲ್ಲಿ ತನ್ನದೇ ಆದ ಹಿರಿಮೆ, ಗರಿಮೆ ಗಳಿಸಿದೆ.

ಸಂಸ್ಥೆಯ ಸಾವಿರಾರು ವಿದ್ಯಾರ್ಥಿನಿಯರು ತಮ್ಮ ಪ್ರತಿಭೆಯನ್ನು ಶಿಕ್ಷಣ, ಕ್ರೀಡೆ, ಎನ್‌ಸಿಸಿ, ಗೈಡ್ಸ್, ಐಟಿ, ವಿಜ್ಞಾನ, ಸಮಾಜಸೇವೆ, ಕರಕುಶಲ, ನಾಟ್ಯ ಮತ್ತು ಸಂಗೀತ ಸೇರಿದಂತೆ ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಿ, ಹತ್ತು ಹಲವು ಸಾಧನೆಗಳನ್ನು ರಾಜ್ಯ, ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿದ್ದಾರೆ.

ಸಂಸ್ಥೆಯಲ್ಲಿ ಶಿಕ್ಷಣ ಪಡೆದವರು ಐಎಎಸ್, ಐಪಿಎಸ್, ಐಆರ್‌ಎಸ್‌ಗಳಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ವಿಶ್ವದಾದ್ಯಂತ ಶಿಕ್ಷಕರು, ವೈದ್ಯರು, ಇಂಜಿನಿಯರ್‌ಗಳು, ನರ್ಸ್‌ಗಳು, ನ್ಯಾಯವಾದಿಗಳಾಗಿದ್ದಾರೆ. ಈ ಎಲ್ಲರೂ ಸಂಸ್ಥೆಯ ಮುಕುಟ ಪ್ರಾಯಗಳು.

## ಪಾಲಕ ಸಂತ ಪೌಲರ ಜೀವನ ಮನಃ ಪರಿವರ್ತನೆಗೆ ಸಾಧನ...



ಸಂತ ಪೌಲರು ನಮ್ಮ ಶಾಲೆಯ ಪಾಲಕರು, ಇವರ ಮೊದಲ ಹೆಸರು ಸೌಲ. ಇವರು ತಾರ್ಸ ನಗರದಲ್ಲಿ ಜನಿಸಿದರು. ಅದ್ವಿತೀಯ ಯೋಧ, ಪರಾಕ್ರಮಿ, ವಿದ್ವಾಂಸ, ಧರ್ಮ ಪಾಂಡಿತ್ಯ, ತೀಕ್ಷ್ಣ ಚುರುಕು ಬುದ್ಧಿಮತ್ತೆ ಹೊಂದಿದವರು. ಇವರಿಗೆ ಕ್ರಿಸ್ತ ಮತ್ತು ಕ್ರಿಸ್ತರ ಅನುಯಾಯಿಗಳನ್ನು ಕಂಡರೆ ಆಗುತ್ತಿರಲಿಲ್ಲ. ಇವರೊಬ್ಬ ಕ್ರೈಸ್ತಧರ್ಮದ ಪ್ರಬಲ ವಿರೋಧಿಯಾಗಿದ್ದು, ಅವರನ್ನು ಸದೆಬಡಿಯಲು ರಾಜರಿಂದ ಅನುಮತಿಯನ್ನು ಪಡೆದಿದ್ದರು. ಯೇಸುವಿನ ಹಿಂಬಾಲಕರನ್ನು ನಿರ್ದಯತೆಯಿಂದ ತನ್ನ ಖಡ್ಗದಿಂದ ಹೆಂಗಸರು, ಮಕ್ಕಳು, ವೃದ್ಧರೆನ್ನದೆ ಎಲ್ಲರನ್ನೂ ಸಂಹರಿಸುತ್ತಿದ್ದರು.

ಒಮ್ಮೆ ಕ್ರೈಸ್ತರನ್ನು ಸದೆಬಡಿಯಲು ದಮಾಸ್ಕಸ್‌ಗೆ ತೆರಳುತ್ತಿರುವಾಗ ಮಾರ್ಗಮಧ್ಯದಲ್ಲಿ ಕ್ರಿಸ್ತನ ಅಶರೀರವಾಣಿಯಿಂದ ಮನಃ ಪರಿವರ್ತನೆಗೊಂಡರು. ದೃಷ್ಟಿಹೀನನಾಗಿದ್ದ ಸೌಲ ಕ್ರಿಸ್ತನ ಅಶರೀರವಾಣಿಯಂತೆ ಅನನೀಯನ ಪ್ರಾರ್ಥನೆಯಿಂದ ಮರಳಿ ದೃಷ್ಟಿ ಪಡೆದರು. ಈ ಘಟನೆಯಿಂದ ಅವರಲ್ಲಾದ ಅಂತರಂಗದ ಪರಿವರ್ತನೆಯ ಫಲವಾಗಿ ಸೌಲನಾಗಿದ್ದವರು, "ಪೌಲ" ಎಂಬ ಹೆಸರನ್ನು ಪಡೆದರು. ಸಂತ ಪೌಲರು "ದೇವರೇ ಆಯ್ದುಕೊಂಡ ಸಾಧನ" ವಾಗಿದ್ದಾರೆ. ದುಷ್ಟನಾಗಿದ್ದ ಸೌಲ ಶಿಷ್ಯರಾದರು. ಕ್ರೈಸ್ತ ವಿರೋಧಿಯಾಗಿದ್ದವರು ಕ್ರಿಸ್ತನ ಅನುಯಾಯಿಯಾದರು. ಕ್ರಿಸ್ತನಿಗಾಗಿ ಬಾಳುತ್ತ, ಬೋಧನೆಗಳನ್ನು ಮಾಡುತ್ತ ಕ್ರಿಸ್ತನ ಸಂದೇಶವನ್ನು ಜಗತ್ತಿನಾದ್ಯಂತ ಸಾರುತ್ತ ಕೊನೆಗೆ ಕ್ರಿಸ್ತನಿಗಾಗಿ ರಕ್ತ ಸಾಕ್ಷಿಯಾದರು. ನಾವು ಮನಃ ಪರಿವರ್ತನೆ ಹೊಂದಿ ಉತ್ತಮ ವ್ಯಕ್ತಿಗಳಾಗಲು ಸಂತ ಪೌಲರೇ ನಮಗೆ ಪ್ರೇರಣೆ. ಪೌಲರ ಜ್ಞಾನ, ವಿವೇಕ, ವಿಶ್ವಾಸ, ನೇರ ನಡೆನುಡಿ, ದೈವಜ್ಞಾನ ಮುಂತಾದ ಸದ್ಗುಣಗಳು ಮತ್ತು ಅವರ ಆದರ್ಶಗಳು ನಮಗೆ ಮಾರ್ಗದರ್ಶನವಾಗಲಿ ಎಂದು ನಮ್ಮ ಶಾಲೆಯ ಪಾಲಕರಾದ ಸಂತ ಪೌಲರಲ್ಲಿ ಮನವಿ ಮಾಡಿಕೊಳ್ಳೋಣ.

## "ಸಿಎಸ್‌ಎಸ್‌ಟಿ" ಸಭೆಯ ಸಂಸ್ಥಾಪಕಿ ತಾಯಿ ತೆರೇಸಾ



'ಸಿಎಸ್‌ಎಸ್‌ಟಿ' ಸಭೆಯ ಕನ್ಯಾಭಗಿನಿಯರು ಸಂತ ಪೌಲರ ಶಾಲೆಯ ಸ್ಥಾಪಕರು. ಸಿಎಸ್‌ಎಸ್‌ಟಿ ಪದದ ವಿಸ್ತೃತ ರೂಪ 'ಕಾರ್ಮೆಲೈಟ್ ಸಿಸ್ಟರ್ಸ್ ಆಫ್ ಸೇಂಟ್ ಟ್ರೇಸಾ' ಎಂಬುದಾಗಿದೆ. ಈ ಸಭೆಯ ಸಂಸ್ಥಾಪಕಿ ತಾಯಿ ತೆರೇಸಾ ಅವರು.

ಮದರಾಸಿನ (ಚೆನ್ನೈ) ಪಾರ್ಚೆರಿಯಲ್ಲಿ ನೆಲೆಸಿದ ಪೋರ್ಚುಗೀಸ್ ಮೂಲದ ಪೀಟರ್ ಡಿ ಲೀಮಾ ಮತ್ತು ಮೇರಿ ಡಿ ಲೀಮಾ ಅವರ ಪುತ್ರಿ, ಮೇರಿ ಗ್ರೇಸ್ ಡಿ ಲೀಮಾ. ಇವರು ಜೂನ್ 29, 1858 ರಲ್ಲಿ ಮದರಾಸಿನ ಪಾರ್ಚೆರಿಯಲ್ಲಿ ಜನಿಸಿದರು. ಬಾಲ್ಯದಲ್ಲಿಯೇ ತಾಯಿಯನ್ನು ಕಳೆದುಕೊಂಡರು. ತಂದೆಯ ಆಶ್ರಯದಲ್ಲಿ ಸದ್ಗುಣಗಳ ಸಂಪನ್ನೆಯಾದ ಮೇರಿ ಗ್ರೇಸ್ ಡಿ ಲೀಮಾ ಮದರಾಸಿನ 'ಪ್ರೆಸೆಂಟೇಷನ್ ಆಫ್ ದ ಬ್ಲೆಸ್ಡ್ ವರ್ಜಿನ್ ಮೇರಿ ಕಾನ್ವೆಂಟ್' ನಲ್ಲಿ ಶಿಕ್ಷಣ ಪಡೆದು ಶಿಕ್ಷಕಿಯಾದರು.

ಕೇರಳ ರಾಜ್ಯದ ಅಲಪ್ಪಿಯಲ್ಲಿ ತೆರೆಯಲ್ಪಟ್ಟ ಹೆಣ್ಣು ಮಕ್ಕಳ ಶಾಲೆಗೆ ಮೇರಿ ಗ್ರೇಸ್ ಡಿ ಲೀಮಾ ಮುಖ್ಯ ಶಿಕ್ಷಕಿಯಾಗಿ ಸೇರಿದರು. 1882ರಲ್ಲಿ ಕನ್ಯಾ ತರಬೇತಿ ಪಡೆದು 1885 ರಲ್ಲಿ ಕಾರ್ಮಲೈಟ್ ಸಭೆಯ ಕನ್ಯಾಭಗಿನಿಯಾಗಿ ಕನ್ಯಾದೀಕ್ಷೆ ಸ್ವೀಕರಿಸಿ 'ಸಿಸ್ಟರ್ ತೆರೇಸಾ ಆಫ್ ಸೇಂಟ್ ರೋಸ್ ಆಫ್ ಲೀಮಾ' ಎಂಬ ನೂತನ ನಾಮಧೇಯ ಧರಿಸಿದರು.

1886 ರಲ್ಲಿ ಕೇರಳದಲ್ಲಿ ಧರ್ಮಪ್ರಾಂತ್ಯ ಮರು ವಿಂಗಡಣೆಯಾದಾಗ ತೆರೇಸಾ ಅಲಪ್ಪಿಯನ್ನು ತೊರೆದು ಎರ್ನಾಕುಲಂಗೆ ತೆರಳಿದರು. ಅಲ್ಲಿ ತಮ್ಮದೇ ಆದ 'ಸಂತ ತೆರೇಸಮ್ಮನವರ ಕಾರ್ಮೆಲೈಟ್' (ಸಿಎಸ್‌ಎಸ್‌ಟಿ) ಎಂಬ ಧಾರ್ಮಿಕ ಸಭೆ ಸ್ಥಾಪಿಸಿದರು. ಆಗ ಅವರಿಗೆ ಕೇವಲ 29 ವರ್ಷಗಳು ಮಾತ್ರ.

ಶಿಕ್ಷಣದ ಮಹತ್ವ ಅರಿತ ತೆರೇಸಾ ಹೆಣ್ಣು ಮಕ್ಕಳಿಗಾಗಿ ಸ್ಥಳೀಯ ಭಾಷೆ ಹಾಗೂ ಆಂಗ್ಲ ಮಾಧ್ಯಮದ ಹಲವಾರು ಶಾಲೆಗಳನ್ನು ತೆರೆದರು. ಪರಿತ್ಯಕ್ತ, ಶೋಷಿತ ಸ್ತ್ರೀಯರನ್ನು ಆಧಾರ ಸ್ತಂಭವಾಗಿರಿಸಲು ಅವರಿಗಾಗಿ 'ಮ್ಯಾಗ್ದಲೇನ್ ಆಶ್ರಯಧಾಮ' ಸ್ಥಾಪಿಸಿ, ಸ್ವಾವಲಂಬಿ ಬದುಕು ರೂಪಿಸಿಕೊಳ್ಳಲು ತೆಂಗಿನ ನಾರಿನ ಹಗ್ಗ ಹೊಸೆಯುವ ಗುಡಿ ಕೈಗಾರಿಕೆಯನ್ನು ಅವರಿಗಾಗಿ ಸ್ಥಾಪಿಸಿದರು. ಮಕ್ಕಳಿಗೆ ಉಚಿತ ವಿದ್ಯಾಭ್ಯಾಸ ನೀಡುವುದರೊಂದಿಗೆ 1880ರ ದಶಕದಲ್ಲಿಯೇ 'ಅಕ್ಷರ ದಾಸೋಹ' ಕಾರ್ಯಕ್ರಮ ಆರಂಭಿಸಿದ್ದರು. ನಿರ್ಗತಿಕ ವೃದ್ಧರಿಗೆ ಆಸರೆ ನೀಡಲು ವೃದ್ಧಾಶ್ರಮವನ್ನು ತೆರೆದರು.

ಅನಾಥಾಲಯದ ಮಕ್ಕಳಿಗೆ ಹಾಗೂ ವೃದ್ಧರಿಗಾಗಿ ಔಷಧಾಲಯಗಳನ್ನು ತೆರೆದರು.1897 ರಲ್ಲಿ ಕೇರಳದಲ್ಲಿ ಭೀಕರ ಬರಗಾಲ ತಲೆದೋರಿದಾಗ ಆಗಿನ ದಿವಾನರಾದ ರಾಜಗೋಪಾಲಾಚಾರಿ ಅವರಿಗೆ ಸರ್ಕಾರದ ಬರ ಪರಿಹಾರ ಕಾರ್ಯದಲ್ಲಿ ತಮ್ಮ ಸೇವಾ ಹಸ್ತ ಚಾಚಿ ನೆರವು ನೀಡಿದ್ದು ಇತಿಹಾಸ. ಹೀಗೆ ಹತ್ತು, ಹಲವು ಸ್ತರಗಳಲ್ಲಿ ತಮ್ಮ ಭಗಿನಿಯರೊಂದಿಗೆ ಸದಾ ಶ್ರಮಿಸುತ್ತಿದ್ದ ತೆರೇಸಾ ಕೇರಳದಿಂದ ಮುಂಬೈಗೆ ಪ್ರಯಾಣಿಸುತ್ತಿದ್ದಾಗ ಆಂಧ್ರ ಪ್ರದೇಶದ ಮಂಗಪಟ್ಟಣಂ ಬಳಿ ಸಂಭವಿಸಿದ ರೈಲು ಅಪಘಾತದಲ್ಲಿ 1902 ಸೆಪ್ಟೆಂಬರ್ 12 ರಂದು ದೈವಾಧೀನರಾದರು.

ತಾಯಿ ತೆರೇಸಾ ಸ್ಥಾಪಿಸಿದ ಸಿಎಸ್‌ಎಸ್‌ಟಿ ಸಂಸ್ಥೆ ಮೂಲಕ ಪ್ರಾರಂಭಿಸಿದ ಅವರ ಸೇವಾ ಕೈಂಕರ್ಯವನ್ನು ಅವರ ಸಭೆಯ ಧರ್ಮಭಗಿನಿಯರು ಮುಂದುವರೆಸಿಕೊಂಡು ಬರುತ್ತಿದ್ದಾರೆ. ಅಂದು ಕೇರಳದಲ್ಲಿ ಆರಂಭವಾದ ಸೇವಾ ಸಂಸ್ಥೆ ಇಂದು ಪ್ರಪಂಚದಾದ್ಯಂತ ಹರಡಿ ಸೇವೆಯ ಕಂಪನ್ನು ಬೀರುತ್ತಿದೆ.

## ಸಂಸ್ಥೆ ಬೆಳೆದು ಬಂದ ದಾರಿ ..



ಸಿಸ್ಟರ್ ಪಿಯೇರ್ ಸಿಸ್ಟರ್ ಕ್ಲೋಡಿಯಾ ಸಿಸ್ಟರ್ ಯುಫ್ರೇಸಿಯಾ ಸಿಸ್ಟರ್ ಕಾಮೆಲಾ ಸಿಸ್ಟರ್ ಕ್ಲೆರಿಸಾ

20ನೇ ಶತಮಾನದಲ್ಲಿದ್ದಾಗಲೂ ಭಾರತೀಯ ಸ್ತ್ರೀಯರು ಕೇವಲ ಮನೆಯ ನಾಲ್ಕು ಗೋಡೆಗಳಿಗೆ ಮಾತ್ರ ಸೀಮಿತವಾಗಿದ್ದ ಕಾಲದಲ್ಲಿ ಪರರ ಒಳಿತಿನಲ್ಲೇ ಪರಮಾತ್ಮನನ್ನು ಕಾಣಬಯಸುತ್ತಿದ್ದ ಕ್ರೈಸ್ತ ಮಿಶನರಿ ಸಂಸ್ಥೆಗಳಲ್ಲಿ ಸಿಎಸ್‌ಎಸ್‌ಟಿ ಸಭೆಯು ಒಂದು. ಸಂತ ಪೌಲರ ಕಾನ್ವೆಂಟ್ ಧರ್ಮಭಗಿ ನಿಯರು ಸಿಎಸ್‌ಎಸ್‌ಟಿ ಧಾರ್ಮಿಕ ಸಭೆಗೆ ಸೇರಿದವರು. ಸಿಎಸ್‌ಎಸ್‌ಟಿ ಸಭೆಯ ಶಿಕ್ಷಣ ಸಂಸ್ಥೆಗಳು 'ಟೆರೇಷಿಯನ್ ಕಾರ್ಮೆಲ್ ಎಜುಕೇಷನ್ ಸೊಸೈಟಿ' (ಟಿಸಿಇಎಸ್) ಅಡಿಯಲ್ಲಿ ಕಾರ್ಯವನ್ನು ನಿರ್ವಹಿಸುತ್ತಿದೆ. ಇದರ ಕೇಂದ್ರ ಸ್ಥಾನ ಮೈಸೂರಿನಲ್ಲಿದೆ.


ಸಿಎಸ್‌ಎಸ್‌ಟಿ ಸಭೆಯ ಧರ್ಮಭಗಿನಿಯರಾದ ಸಿಸ್ಟರ್ ಪಿಯೇರ್, ಸಿಸ್ಟರ್ ಯುಫ್ರೇಸಿಯಾ, ಸಿಸ್ಟರ್ ಕಾಮೆಲಾ, ಸಿಸ್ಟರ್ ಕ್ಲೆರಿಸಾ ಮತ್ತು ಸಿಸ್ಟರ್ ಕ್ಲೋಡಿಯಾ ಎಂಬ ಐವರು ಕನ್ಯಾ ಸ್ತ್ರೀಯರು 1946 ರಲ್ಲಿ ದಾವಣಗೆರೆಗೆ ಪಾದಾರ್ಪಣೆ ಮಾಡಿದರು. ಹೊಸ ಜಾಗ, ಹೊಸ ಭಾಷೆ, ಪರಿಚಯವಿಲ್ಲದ ಊರಿನಲ್ಲಿ ಬರಬಹುದಾದ ಕಷ್ಟಗಳನ್ನು ಲೆಕ್ಕಿಸದೆ ದೈವೀ ಪ್ರೇಮವನ್ನು ಸೇವೆಯ ಮೂಲಕ ಹಂಚಲು ದೃಢ ನಿರ್ಧಾರ ಮಾಡಿದರು. 'ಶಿಕ್ಷಣವೊಂದೇ ಎಲ್ಲಾ ಸಮಸ್ಯೆಗಳಿಗೆ ಪರಿಹಾರ' ಎಂದು ತಿಳಿದ ಕನ್ಯಾಭಗಿನಿಯರು ಸಮಾಜದ ಜನರಲ್ಲಿದ್ದ ಅನಕ್ಷರತೆ, ಮೌಢ್ಯತೆ ದೂರ ಮಾಡಲು ಅದರಲ್ಲೂ ವಿಶೇಷವಾಗಿ ಹೆಣ್ಣು ಮಕ್ಕಳನ್ನು ಸುಶಿಕ್ಷಿತರನ್ನಾಗಿಸಲು ಸಿಎಸ್‌ಎಸ್‌ಟಿ ಸಂಸ್ಥೆಯ ಧರ್ಮಭಗಿನಿಯರು 1946 ರಲ್ಲಿ ದಾವಣಗೆರೆಯಲ್ಲಿ ಶಾಲೆಯೊಂದನ್ನು ತೆರೆಯಲು ನಿರ್ಧರಿಸಿದರು. ಅಂದು ಕಟ್ಟಡವೇ ಇಲ್ಲದಿರುವಾಗ ಶ್ರೀಯುತ ಬಿ.ಎಂ. ಸುಬ್ಬರಾವ್ ರವರ ಹೆಂಚಿನ (7ನೇ ಮುಖ್ಯರಸ್ತೆ, ಪಿ.ಜೆ. ಬಡಾವಣೆ) ಮನೆಯೊಂದನ್ನು ಬಾಡಿಗೆಗೆ ಪಡೆದು 1946ರ ಅಕ್ಟೋಬರ್ 10 ರಂದು 'ಇನ್ಫೆಂಟ್ ಜೀಸಸ್' ನರ್ಸರಿ ಶಾಲೆಯೊಂದನ್ನು ತೆರೆದರು.

ಅಂದು ಶಾಲೆಯಲ್ಲಿದ್ದ ಮಕ್ಕಳ ಸಂಖ್ಯೆ ಕೇವಲ 6. ಆರು ಮಕ್ಕಳ ದಾಖಲಾತಿಯೊಂದಿಗೆ ಪ್ರಾರಂಭವಾದ ಶಾಲೆ ಮಾರ್ಚ್ ಅಂತ್ಯದ ವೇಳೆಗೆ 60 ವಿದ್ಯಾರ್ಥಿಗಳನ್ನು ಒಳಗೊಂಡಿತ್ತು. ಈ ಬಾಡಿಗೆ ಕಟ್ಟಡದಲ್ಲಿ 12 ವರ್ಷಗಳವರೆಗೆ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡಲಾಯಿತು.

## ಅಂದು 6 ವಿದ್ಯಾರ್ಥಿಗಳು... ಇಂದು 3,000ಕ್ಕೂ ಹೆಚ್ಚು ...

ಅಂದು ಶ್ರೀಯುತ ಬಿ.ಎಂ. ಸುಬ್ಬರಾವ್‌ರವರು ತಮ್ಮ ಮನೆಯನ್ನು 12 ವರ್ಷಗಳ ಕಾಲ ಬಾಡಿಗೆಯನ್ನು ಪಡೆಯದೇ ಉಚಿತವಾಗಿ ಶಿಕ್ಷಣಕ್ಕಾಗಿ ನೀಡಿರುವುದು ಅವರ ಉದಾರತೆಗೆ ಸಾಕ್ಷಿಯಾಗಿದೆ.

1946ರ ಅಕ್ಟೋಬರ್ 10ರಂದು 6 ವಿದ್ಯಾರ್ಥಿಗಳಿಂದ ಇನ್ಫೆಂಟ್ ಜೀಸಸ್ ನರ್ಸರಿ ಶಾಲೆಯೂ ಪ್ರಾರಂಭವಾಯಿತು. 1947 ಜೂನ್ 1ರಂದು ಸಾರ್ವಜನಿಕ ಶಿಕ್ಷಣ ಇಲಾಖೆಯ ಅನುಮತಿಯೊಂದಿಗೆ ಸಂತ ಪೌಲರ ಕನ್ನಡ ಮಾಧ್ಯಮದ ಪ್ರಾಥಮಿಕ ಶಾಲೆ ಪ್ರಾರಂಭಿಸಲಾಯಿತು. ಅಂದು ಶಾಲೆಯಲ್ಲಿ ದಾಖಲಾದ ಮಕ್ಕಳ ಸಂಖ್ಯೆ ಕೇವಲ 10 ವರ್ಷದ ಅಂತ್ಯದ ವೇಳೆಗೆ ಒಟ್ಟು 86 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದರು. ಸಿಸ್ಟರ್ ಕಾಮೆಲಾರವರು ಶಾಲೆಯ ಮೊಟ್ಟಮೊದಲ ಮುಖ್ಯೋಪಾಧ್ಯಾಯಿನಿಯಾಗಿದ್ದರು. ನೂತನ ಶಾಲಾ ಕಟ್ಟಡ ನಿರ್ಮಿಸುವ ಸಂದರ್ಭದಲ್ಲಿ ದಾವಣಗೆರೆಯ ಉದಾರ ದಾನಿಗಳೆಂದೇ ಪ್ರಖ್ಯಾತರಾದ ಧರ್ಮಪ್ರವರ್ತ ರಾಜನಹಳ್ಳಿ ಹನುಮಂತಪ್ಪನವರು ಶಾಲಾ ಕಟ್ಟಡದ ನಿರ್ಮಾಣಕ್ಕೆ ತಮ್ಮ ದಾನವನ್ನು ಸ್ವೀಕರಿಸಿ ಎಂಬ ಮನವಿಯೊಂದಿಗೆ 1950ರಲ್ಲಿ 15,000/- ರೂಪಾಯಿ ಮೊತ್ತವನ್ನು ನೀಡಿ, ನಮ್ಮ ಶಿಕ್ಷಣ ಸಂಸ್ಥೆಯ ಬೆಳವಣಿಗೆಗೆ ಧನ ಸಹಾಯವನ್ನು ನೀಡಿದ್ದು ಅವಿಸ್ಮರಣೀಯ.




ದಿ|| ಧರ್ಮಪ್ರವರ್ತ ರಾಜನಹಳ್ಳಿ ಹನುಮಂತ ರಾಯರು

1949ರ ಜೂನ್ 1ರಂದು ಪ್ರೌಢಶಾಲೆಯು ತನ್ನ ಶೈಕ್ಷಣಿಕ ವರ್ಷವನ್ನು ಪ್ರಾರಂಭಗೊಳಿಸಿತು.

1963ರಲ್ಲಿ ಸಂತ ಪೌಲರ ಆಂಗ್ಲ ಮಾಧ್ಯಮದ ಶಾಲೆಯು ಆರಂಭಗೊಂಡಿತು. ಅಂದು ಶಾಲೆಯು 99 ವಿದ್ಯಾರ್ಥಿಗಳು ಹಾಗೂ 102 ವಿದ್ಯಾರ್ಥಿನಿಯರನ್ನು ಒಳಗೊಂಡಿತ್ತು. ಪ್ರಾರಂಭದಲ್ಲಿ ಗಂಡು, ಹೆಣ್ಣು ಮಕ್ಕಳು ಒಟ್ಟಾಗಿ ಕಲಿಯುತ್ತಿದ್ದ ಶಾಲೆಯು 1971ರ ನಂತರ ಬಾಲಕಿಯರ ಶಿಕ್ಷಣ ಕೇಂದ್ರವಾಯಿತು. ದಿನದಿಂದ ದಿನಕ್ಕೆ ಪ್ರವರ್ಧಮಾನವಾಗಿ ಬೆಳೆಯುತ್ತಾ



ಹಿಂದೆ ಶಾಲೆ ಇದ್ದ ಬಾಡಿಗೆ ಕಟ್ಟಡದ ಖಾಲಿ ನಿವೇಶನ




ದಿ|| ಶ್ರೀ ಡಿ.ಎಂ. ಸುಬ್ಬರಾವ್, ದಿ|| ಶ್ರೀಮತಿ ಸರಸ್ವತಿ ಬಾಯಿ

ಶಿಕ್ಷಣ ಸಂಸ್ಥೆಯು 1971ರಲ್ಲಿ ತನ್ನ ರಜತ ಮಹೋತ್ಸವದ ಸವಿಯನ್ನುಂಡು 1996ರಲ್ಲಿ ಸುವರ್ಣ ಮಹೋತ್ಸವದ ಕಿರೀಟ ತೊಟ್ಟು, ಹೆಮ್ಮೆಯಿಂದ ದಾವಣಗೆರೆಯಲ್ಲಿ ನೆಲೆ ನಿಂತಿದೆ. ನಮ್ಮ ಶಿಕ್ಷಣ ಸಂಸ್ಥೆಯಲ್ಲಿ ಕಲಿಯುತ್ತಿರುವ ವಿದ್ಯಾರ್ಥಿನಿಯರು 7ನೇ ಮತ್ತು 10ನೇ ತರಗತಿಯ ಪಬ್ಲಿಕ್ ಪರೀಕ್ಷೆಯಲ್ಲಿ 95% ರಿಂದ 100% ಫಲಿತಾಂಶವನ್ನು ಪಡೆಯುತ್ತಿದ್ದಾರೆ. ಕೆಲವು ವಿದ್ಯಾರ್ಥಿನಿಯರು ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ರ‍್ಯಾಂಕ್ ಪಡೆದು ಶಾಲೆಯ ಕೀರ್ತಿಯನ್ನು ಹೆಚ್ಚಿಸಿದ್ದಾರೆ. ಪ್ರಸ್ತುತ ತನ್ನ 75ನೇ ವರ್ಷದತ್ತ ಸಾಗುವ ಮೂಲಕ ಅಮೃತ ಮಹೋತ್ಸವ ಸಂಭ್ರಮದಲ್ಲಿ ಸಂಸ್ಥೆ ಮೀಯುತ್ತಿದೆ. ನಮ್ಮ ಶಾಲೆಯಲ್ಲಿ 3000ಕ್ಕೂ ಅಧಿಕ ವಿದ್ಯಾರ್ಥಿನಿಯರು ಇಂದು ವಿದ್ಯಾಭ್ಯಾಸವನ್ನು ಪಡೆಯುತ್ತಿದ್ದಾರೆ. ಪ್ರಸ್ತುತ ಕನ್ನಡ ಮತ್ತು ಆಂಗ್ಲ ಮಾಧ್ಯಮದ ಪೂರ್ವ ಪ್ರಾಥಮಿಕ ತರಗತಿಗಳಿಂದ 10ನೇ ತರಗತಿಗಳವರೆಗೆ, ಪದವಿ ಪೂರ್ವ ಕಾಲೇಜು ಹಾಗೂ ಸಿಬಿಎಸ್‌ಇ ಪಠ್ಯಕ್ರಮದ ಶಾಲೆ ಹೊಂದಿದ್ದು, ಶಿಕ್ಷಣ ಸಂಸ್ಥೆಯು ಅನುದಾನಿತ ಮತ್ತು ಅನುದಾನ ರಹಿತ ಎರಡೂ ವಿಭಾಗಗಳಲ್ಲಿ ಕಾರ್ಯ ನಿರ್ವಹಿಸುತ್ತಿದೆ. 2012ರಲ್ಲಿ ಸಂತ ಪೌಲರ ಪದವಿ ಪೂರ್ವ ವಿಜ್ಞಾನ ಹಾಗೂ ವಾಣಿಜ್ಯ ಕಾಲೇಜು ಪ್ರಾರಂಭವಾಯಿತು.

ನಮ್ಮ ಶಿಕ್ಷಣ ಸಂಸ್ಥೆಯು ಸಿಬಿಎಸ್‌ಇ ಪಠ್ಯಕ್ರಮದ ಶಾಖೆಯನ್ನು 2019ರಲ್ಲಿ ಪ್ರಾರಂಭಿಸಿತು. ಪ್ರಸ್ತುತ 1 ರಿಂದ 8ನೇ ತರಗತಿವರೆಗೆ ವಿದ್ಯಾರ್ಥಿನಿಯರು ಶಿಕ್ಷಣವನ್ನು ಪಡೆಯುತ್ತಿದ್ದಾರೆ. ವಿದ್ಯಾಸಂಸ್ಥೆಯು ಕೇವಲ 6 ವಿದ್ಯಾರ್ಥಿಗಳಿಂದ ಪ್ರಾರಂಭವಾದದ್ದು, ಇಂದು 3000ಕ್ಕಿಂತ ಹೆಚ್ಚು ವಿದ್ಯಾರ್ಥಿನಿಯರು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. 75 ಸಂವತ್ಸರಗಳ ಸುದೀರ್ಘ ಶೈಕ್ಷಣಿಕ ಸೇವೆಯಲ್ಲಿ ಸಮಾಜದ ವಿವಿಧ ವರ್ಗಗಳ ವಿದ್ಯಾರ್ಥಿಗಳಿಗೆ ಶಿಕ್ಷಣದ ಜೊತೆಗೆ ಜೀವನ ಮೌಲ್ಯಗಳನ್ನು ರೂಢಿಸುತ್ತಾ ಸದೃಢ, ಸಮೃದ್ಧ ರಾಷ್ಟ್ರ ನಿರ್ಮಾಣಕ್ಕೆ ತನ್ನದೇ ಕೊಡುಗೆಯನ್ನು ನೀಡಿದೆ. ನಮ್ಮ ಶಿಕ್ಷಣ ಸಂಸ್ಥೆಯು ದೀನ-ದಲಿತರಿಗೆ, ನಿರ್ಗತಿಕರಿಗೆ, ಬಡವರಿಗೆ ಶುಲ್ಕ-ವಿನಾಯಿತಿ ನೀಡಿದ್ದು, ಕಡು ಬಡವರಿಗೆ ಉಚಿತ ಶಿಕ್ಷಣವನ್ನು ನೀಡುತ್ತಿದೆ. ಅತ್ಯುತ್ತಮ ಆಡಳಿತ ಮಂಡಳಿಯ ಸಹಕಾರ, ಮಾರ್ಗದರ್ಶನದೊಂದಿಗೆ, ನುರಿತ ಶಿಕ್ಷಕ-ಶಿಕ್ಷಕೇತರ ಸಿಬ್ಬಂದಿ ವರ್ಗ ಹಾಗೂ ಪೋಷಕರ ಸಕಾರಾತ್ಮಕ ಸಹಕಾರ, ಪ್ರೋತ್ಸಾಹದೊಂದಿಗೆ ಸಂತ ಪೌಲರ ಶಿಕ್ಷಣ ಸಂಸ್ಥೆಯು ನಿರಂತರವಾಗಿ ಪ್ರಗತಿ ಪಥದತ್ತ ಸಾಗುತ್ತಿದೆ.

## ಸಮಾಜದ ಕಣ್ಣುಗಳು ನಮ್ಮ ಶಾಲಾ ನಕ್ಷತ್ರಗಳು....



ಶ್ರೀಮತಿ ರೂಪಾ ಡಿ. ಡಿಐಜಿ (1989-1990)

ಶ್ರೀಮತಿ ಡಾ|| ಹೇಮಲತಾ ಇಸ್ರೋ ವಿಜ್ಞಾನಿ (1985)

ಶ್ರೀಮತಿ ಪುಟ್ಟಮ್ಮ, ಭಾರತ ಸ್ಕೌಟ್ಸ್ ಮತ್ತು ಗೈಡ್ ಕಮೀಷನರ್ (1959)

ಶ್ರೀ ಮುರುಘರಾಜೇಂದ್ರ ಜೆ. ಚಿಗಟೇರಿ ಸ್ಕೌಟ್ಸ್ & ಗೈಡ್ ಮು. ಆಯುಕ್ತರು (1968-69)

ಶ್ರೀ ಬಿ.ಪಿ. ಹರೀಶ್ ಹರಿಹರ ಮಾಜಿ MLA (1974)

ಶ್ರೀಮತಿ ರೇಖಾ ನಾಗರಾಜ್ ಮಾಜಿ ಮಹಾಪೌರರು (88-89)

ಶ್ರೀ ದಿನೇಶ್ ಕೆ. ಶೆಟ್ಟಿ, ಮಾಜಿ ಕಾರ್ಪೊರೇಟರ್ ದಾವಣಗೆರೆ (1972-73)



ಜಯಮ್ಮ ಹೆಚ್.ಸಿ., ಕಾರ್ಪೊರೇಟರ್ (96-97)

ಶ್ರೀಮತಿ ರಶ್ಮಿ ಎಲೆಕ್ಟ್ರೋ ಫಿಜಿಯಾಲಜಿಸ್ಟ್, (93-94)

ಶ್ರೀಮತಿ ಪ್ರೀತಿ ನಾಗರಾಜ್ ಪತ್ರಕರ್ತರು (1989-90)


ಶ್ರೀಮತಿ ಮಂಜುಶ್ರೀ ಎಂ. ಕಡಕೋಳ ಪತ್ರಕರ್ತರು, ಪ್ರಜಾವಾಣಿ (95-96)

ಡಾ|| ದೀಪ್ತಿ ಶಂಕರ್ ಮೋಟಾರ್ ಕಾರ್ ರೇಸ್ (1985)

ನಂದಿನ ರಾಮಣ್ಣ (ಭಾವನ) ಚಲನಚಿತ್ರ ನಟಿ (90-91)

ಕು|| ಪ್ರಿಯಾ ಜೆ. ಆಚಾರ್ ಕಿರುತೆರೆ ನಟಿ (2015-16)

ವಾಣಿ ಸತೀಶ್ ಸಂಗೀತ ಕ್ಷೇತ್ರ



ಸರ್ವರಿಗೂ ಹೊಸ ವರ್ಷದ ಹಾರ್ದಿಕ ಶುಭಾಶಯಗಳು...

# ಬೆಳ್ಳೂಡಿ ಸಮೀಪ ಸಿಡಿಲಿಗೆ 10 ಕುರಿ ಬಲಿ : ಹೊಸಹಳ್ಳಿ, ರಾಮತೀರ್ಥದಲ್ಲಿ ನೆಲಕಚ್ಚಿದ ಜೋಳ





ಮಲೇಬೆನ್ನೂರು, ಜ.9- ನಿನ್ನೆ ಸಂಜೆ ಸುರಿದ ಅಕಾಲಿಕ ಮಳೆ ತೋಟಗಳಿಗೆ ಮತ್ತು ಇನ್ನಿತರೆ ಕೃಷಿ ಚಟುವಟಿಕೆಗಳಿಗೆ ಅನುಕೂಲ ಮಾಡಿದ್ದರೆ, ಇಟ್ಟಿಗೆ ಬಟ್ಟಿ ಮಾಲೀಕರಿಗೆ ತೀವ್ರ ನಷ್ಟ ಮಾಡಿದೆ.

ಬೆಳ್ಳೂಡಿ ಸಮೀಪ ಹೊಲದಲ್ಲಿ ಬೀಡುಬಿಟ್ಟಿದ್ದ ಚಿಕ್ಕೋಡಿ ಮೂಲಕ ಕುರಿಗಾಹಿಗಳ 10 ಕುರಿಗಳು ಸಿಡಿಲು ಬಡಿದ ಪರಿಣಾಮ ಸಾವನ್ನಪ್ಪಿವೆ. ರಾತ್ರಿಯಿಡೀ ಸುರಿದ ಮಳೆಯಿಂದಾಗಿ ಕುರಿಗಾಹಿಗಳ ಜೀವನ ಅಸ್ತವ್ಯಸ್ತ ಆಗಿರುವುದನ್ನು ಕಣ್ಣಾರೆ ಕಂಡ ಕಾಗಿನೆಲೆ ಕನಕ ಗುರು ಪೀಠದ ಶ್ರೀ ನಿರಂಜನಾನಂದ ಪುರಿ ಸ್ವಾಮೀಜಿಯವರು ಅವರನ್ನು ಬೆಳ್ಳೂಡಿ ಮಠಕ್ಕೆ ಕರೆದುಕೊಂಡು ಹೋಗಿ ಊಟ, ಬಟ್ಟೆ ನೀಡಿ ಆಶ್ರಯ ನೀಡಿದರು.

10 ಕುರಿಗಳನ್ನು ಕಳೆದುಕೊಂಡಿರುವ ಕುರಿಗಾಹಿಗಳಿಗೆ ತಕ್ಷಣ ಪರಿಹಾರ ನೀಡುವಂತೆ ಸ್ವಾಮೀಜಿ, ತಹಶೀಲ್ದಾರ್ ಕೆ.ಬಿ.ರಾಮಚಂದ್ರಪ್ಪ ಅವರನ್ನು ಕೇಳಿಕೊಂಡರು. ದೂಡಾ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ಜಿ.ಪಂ. ಸದಸ್ಯ ಹದಡಿ ನಿಂಗಪ್ಪ, ಕುಣೆಬೆಳಕೆರೆ ದೇವೇಂದ್ರಪ್ಪ, ಚೂರಿ ಜಗದೀಶ್ ಈ ವೇಳೆ ಹಾಜರಿದ್ದು, ಕುರಿಗಾಹಿಗಳಿಗೆ ನೆರವಾದರು.

ಪಶು ಇಲಾಖೆಯ ವೈದ್ಯರು ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿದರು.

**ನೆಲಕಚ್ಚಿದ ಜೋಳ :** ಹೊಸಹಳ್ಳಿ ಮತ್ತು ರಾಮತೀರ್ಥದಲ್ಲಿ ಸುಮಾರು 50 ಎಕರೆಯಲ್ಲಿ ಬೆಳೆದು ನಿಂತಿದ್ದ ಊಟದ ಜೋಳ ನೆಲಕಚ್ಚಿದ್ದು, ನಷ್ಟ ಸಂಭವಿಸಿದೆ ಎಂದು ಸಹಾಯಕ ಕೃಷಿ ನಿರ್ದೇಶಕ ಡಾ. ಗೋವರ್ಧನ್ 'ಜನತಾವಾಣಿ'ಗೆ ತಿಳಿಸಿದ್ದಾರೆ. ಈ ಅಕಾಲಿಕ ಮಳೆಯಿಂದ ಜೋಳ, ಕಡ್ಲೆ ಬೆಳೆಗಳಿಗೆ ಹಾನಿ ಮಾಡಿರುವುದನ್ನು ಬಿಟ್ಟರೆ ಒಟ್ಟಾರೆ ಕೃಷಿ ಚಟುವಟಿಕೆಗಳಿಗೆ ಹೆಚ್ಚು ಅನುಕೂಲ ಮಾಡಿದೆ ಎಂದು ಗೋವರ್ಧನ್ ಹೇಳಿದರು.

## ಅಕಾಲಿಕ ಮಳೆಯಿಂದ ತೋಟಗಳಿಗೆ ಹದ

ಎಳೆಹೊಳೆ ಗ್ರಾಮದ ಸರ್ವೇ ನಂಬರ್‌ನಲ್ಲಿರುವ ಹೊಳೆಸಿರಿಗೆರೆಯ ಎಂ.ಉಮ್ಮಣ್ಣನವರಿಗೆ ಸೇರಿದ 8 ಎಕರೆ ಕಡ್ಲೆ ಬೆಳೆಗೆ ಹಾನಿ ಆಗಿದೆ ಎಂದು ಉಪತಹಶೀಲ್ದಾರ್ ಆರ್.ರವಿ ತಿಳಿಸಿದ್ದಾರೆ.

ನಂದಿಗುಡಿ, ಗೋವಿನಹಾಳ್, ಕೆ.ಎನ್.ಹಳ್ಳಿ, ಹಿಂಡಸಘಟ್ಟ, ವಾಸನ ಮತ್ತಿತರೆ ಗ್ರಾಮಗಳಲ್ಲಿ ಮಧ್ಯಾಹ್ನದಿಂದಲೇ ಪ್ರಾರಂಭವಾದ ಮಳೆ ರಾತ್ರಿವರೆಗೂ ಸುರಿದಿದೆ.

ಮಲೇಬೆನ್ನೂರು, ಕೊಪ್ಪ, ಹಾಲಿವಾಣ, ಹರಳಹಳ್ಳಿ ಭಾಗದಲ್ಲಿ ಮಳೆ ಪ್ರಮಾಣ ಕಡಿಮೆ ಆಗಿದ್ದರೆ, ಜಿಗಳಿ, ಜಿ.ಬೇವಿನಹಳ್ಳಿ, ಕೊಕ್ಕನೂರು, ಹಳ್ಳಿಹಾಳ್, ಯಲವಟ್ಟಿ, ಹೊಳೆಸಿರಿಗೆರೆ, ಭಾನುವಳ್ಳಿ, ಕುಂಬಳೂರು, ನಿಟ್ಟೂರಿನಲ್ಲಿ ಉತ್ತಮ ಮಳೆ ಆಗಿರುವ ಬಗ್ಗೆ ವರದಿಯಾಗಿದೆ.

ಈ ಮಳೆ ತೋಟಗಳಿಗೆ, ಭತ್ತದ ಸಸಿ ಮಡಿಗೆ ಮತ್ತು ನಾಟಿ ಸಿದ್ಧತೆಗೆ ಅನುಕೂಲ ಮಾಡಿಕೊಟ್ಟಿದೆ.

**ಹರೀಶ್ ಭೇಟಿ :** ಅಕಾಲಿಕ ಮಳೆಯಿಂದ ಹಾನಿಯಾಗಿರುವ ಹಲಸಬಾಳು, ಗುತ್ತೂರು, ಹರಗನಹಳ್ಳಿ ಇಟ್ಟಿಗೆ ಭಟ್ಟಿಗಳಿಗೆ ಮಾಜಿ ಶಾಸಕ ಬಿ.ಪಿ.ಹರೀಶ್ ಭೇಟಿ ನೀಡಿ, ಮಾಲೀಕರಿಗೆ ಧೈರ್ಯ ಹೇಳಿದರು. ಅಲ್ಲದೇ ಸರ್ಕಾರದಿಂದ ಪರಿಹಾರ ಕೊಡಿಸಲು ಪ್ರಯತ್ನಿಸುವುದಾಗಿ ಹೇಳಿದರು.

# ಹುಬ್ಬಳ್ಳಿಯಲ್ಲಿ ಕಾಂಗ್ರೆಸ್ ಸಂಕಲ್ಪ ಸಭೆ

ದಾವಣಗೆರೆ, ಜ.9- ಇದೇ 11ರ ಸೋಮವಾರ ಹುಬ್ಬಳ್ಳಿಯ ವಿಮಾನ ನಿಲ್ದಾಣದ ಎದುರು ಇರುವ ಕಾಟನ್ ಕೌಂಟಿ ರೆಸಾರ್ಟ್ ಆವರಣದಲ್ಲಿ ದಾವಣಗೆರೆ ಜಿಲ್ಲೆ ಸೇರಿದಂತೆ ಬೆಳಗಾವಿ ವಿಭಾಗದ 9 ಜಿಲ್ಲೆಗಳ ಕಾಂಗ್ರೆಸ್ ಸಂಕಲ್ಪ ಸಮಾವೇಶ ಏರ್ಪಡಿಸಲಾಗಿದೆ ಎಂದು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ವಕ್ತಾರ ಡಿ.ಬಸವರಾಜ್ ತಿಳಿಸಿದ್ದಾರೆ

ಇಂದಿಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮಾವೇಶದಲ್ಲಿ ಮುಂಬರುವ ಉಪ ಚುನಾವಣೆಗಳು, ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯ್ತಿ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷ ಗೆಲ್ಲಲು ರಣ ತಂತ್ರ ರೂಪಿಸಲಾಗುವುದು ಎಂದರು.

ಬೆಳಿಗ್ಗೆ 11 ಗಂಟೆಗೆ ಆರಂಭವಾಗುವ ಸಂಕಲ್ಪ ಸಮಾವೇಶದಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ವಿಪಕ್ಷ ನಾಯಕ ಸಿದ್ದರಾಮಯ್ಯ, ಹಿರಿಯ ಮುಖಂಡರುಗಳಾದ ಎಸ್.ಆರ್. ಪಾಟೀಲ್, ಸಲೀಂ ಅಹ್ಮದ್, ಸತೀಶ್ ಜಾರಕಿಹೊಳಿ, ಈಶ್ವರ್ ಖಂಡ್ರೆ ಇತರರು ಭಾಗವಹಿಸಲಿದ್ದಾರೆ.

## ಕುಂದುವಾಡ ಕೆರೆ ಅಭಿವೃದ್ಧಿ: ಲೋಕಾಗೆ ದೂರು

ಆರಂಭದಲ್ಲಿ ಕೇವಲ 3 ಕೋಟಿ ರೂ. ವೆಚ್ಚ ಮಾಡಿ ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರ ಕುಂದುವಾಡ ಕೆರೆ ಅಭಿವೃದ್ಧಿ ಪಡಿಸಿದ್ದರು. ಆದರೆ, ಇಂದು ಅದೇ ಜಾಗದಲ್ಲಿ ಬಿಜೆಪಿ ನಾಯಕರು 15 ಕೋಟಿ ರೂ. ವೆಚ್ಚ ಮಾಡಿ ಅಭಿವೃದ್ಧಿ ಮಾಡ ಹೊರಟಿರುವುದು ಹಾಸ್ಯಾಸ್ಪದ ಎಂದು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ಹೇಳಿದ್ದಾರೆ. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಬಗ್ಗೆ ಲೋಕಾಯುಕ್ತರಿಗೆ ದೂರು ನೀಡುವುದಾಗಿ ಹೇಳಿದರು.

ಬಿಜೆಪಿಯವರು ನಗರದಲ್ಲಿ ಜನಸಂಕಲ್ಪ ಸಮಾವೇಶ ನಡೆಸುತ್ತಿದ್ದಾರೆ. ರಾಜ್ಯ ಹಾಗೂ ಜಿಲ್ಲೆಯಲ್ಲಿ ಲೂಟಿ ಹೊಡೆಯುತ್ತಿರುವ ಮುಖಂಡರು, ಜನದ್ವೇಷಿ ಸಮಾವೇಶ ನಡೆಸುವುದು ಉತ್ತಮ ಎಂದು ಅವರು ಕುಟುಕಿದರು.

**ಜಿಲ್ಲಾ ಉಸ್ತುವಾರಿಗೆ ಸಂಸದರೇ ಅಡ್ಡಗಾಲು:** ಜಿಲ್ಲೆಯಲ್ಲಿ 6 ಜನ ಶಾಸಕರು ಆಯ್ಕೆಯಾಗಿದ್ದರೂ, ಉಸ್ತುವಾರಿ ಸಚಿವರನ್ನು ಮಾಡಲು ಸಂಸದ ಜಿ.ಎಂ.ಸಿದ್ದೇಶ್ವರ ಅವರಿಗೆ ಸಾಧ್ಯವಾಗಿಲ್ಲ. ಜಿಲ್ಲೆಯವರು ಉಸ್ತುವಾರಿ ವಹಿಸಿಕೊಂಡರೆ ತಮ್ಮ ಅಧಿಕಾರ ನಡೆಯುವುದಿಲ್ಲ ಎಂಬ ಕಾರಣಕ್ಕಾಗಿ ಅವರೇ ತಡೆದಿರಬಹುದೆಂಬ ಅನುಮಾನವಿದೆ ಎಂದು ಬಸವರಾಜ್ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಜಿ.ಪಂ. ಸದಸ್ಯ ಕೆ.ಹೆಚ್. ಓಬಳಪ್ಪ, ಪಾಲಿಕೆ ಸದಸ್ಯರಾದ ಕೆ. ಚಮನ್ ಸಾಬ್, ಗಡಿಗುಡಾಳ್ ಮಂಜುನಾಥ್, ಮುಖಂಡರಾದ ಕೆ.ಎಂ.ಮಂಜುನಾಥ್, ದಾದಾಪೀರ್, ಡಿ.ಶಿವಕುಮಾರ್, ಭಾಷಾ, ಯುವರಾಜ್ ಇತರರು ಉಪಸ್ಥಿತರಿದ್ದರು.

# ಭತ್ತ ತುಂಬಿದ್ದ ಲಾರಿ ಪಲ್ಟಿ: ಚಾಲಕ-ಕ್ಲೀನರ್ ಗೆ ಗಾಯ

ದಾವಣಗೆರೆ, ಜ.9- ನಿಯಂತ್ರಣ ತಪ್ಪಿದ ಭತ್ತ ತುಂಬಿದ್ದ ಲಾರಿ ಪಲ್ಟಿಯಾಗಿ ಚಾಲಕ ಮತ್ತು ಕ್ಲೀನರ್ ಗಾಯಗೊಂಡ ಘಟನೆ ಸ್ಥಳೀಯ ವಿದ್ಯಾನಗರ ಪೊಲೀಸ್ ಠಾಣಾ ವ್ಯಾಪ್ತಿಯ ಶಾಮನೂರು ಬ್ರಿಡ್ಜ್ ಬಳಿ ಇಂದು ನಡೆದಿದೆ.

ಹರಿಹರ ಕಡೆಯಿಂದ ನಗರಕ್ಕೆ ಬರುತ್ತಿದ್ದ ಲಾರಿ ಬ್ರಿಡ್ಜ್ ಬಳಿ ನಿಯಂತ್ರಣ ತಪ್ಪಿದ್ದು, ಆ ತಿರುವಿನಲ್ಲಿ ಮಳೆಯ ನೀರು ನಿಂತಿದ್ದು, ಚಾಲಕ ರಸ್ತೆ ಕಾಣದೆ ಲಾರಿಯನ್ನು ತಗ್ಗಿಗೆ ಇಳಿಸಿದ್ದಾನೆ ಎನ್ನಲಾಗಿದೆ.

ಘಟನೆಯಿಂದಾಗಿ ಸ್ಥಳದಲ್ಲಿ ಕೆಲ ಕಾಲ ಸಂಚಾರ ಅಸ್ತವ್ಯಸ್ತವಾಗಿತ್ತು. ನಂತರ ಸ್ಥಳಕ್ಕಾಗಮಿಸಿದ ಸಂಚಾರಿ ಪೊಲೀಸರು ಸಂಚಾರ ಸುಗಮಗೊಳಿಸಿದ್ದಾರೆ.




॥ ಶ್ರೀ ಗಿರಿ ಮಲ್ಲೇಶ್ವರ ಪ್ರಸನ್ನ ॥

15ನೇ ವರ್ಷದ ಚಿರಸ್ಮರಣೆ

ಶ್ರೀ ಸ.ಸ. ಕಲ್ಮೇಶ್ವರ ಮಹಾರಾಜರ ಶಿಷ್ಯರಾದ





ಸಂತ ಹೆಚ್.ಡಿ. ಹನುಮಂತಪ್ಪನವರು

ನೀವು ನಮ್ಮನ್ನಗಲಿ ದಿನಾಂಕ 09.01.2021ಕ್ಕೆ 15 ವರ್ಷಗಳಾದವು.

ಸದಾ ನಿಮ್ಮ ಸ್ಮರಣೆಯಲ್ಲಿ, ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದ್ದೇವೆ.

ಪತ್ನಿ : ಶ್ರೀಮತಿ ಹೆಚ್.ಡಿ.ಬಸಮ್ಮ

ಮಾಜಿ ಸದಸ್ಯರು, ದಾವಣಗೆರೆ ಮಹಾನಗರ ಪಾಲಿಕೆ ಮತ್ತು ನಗರಸಭೆ ಮಾಜಿ ಸದಸ್ಯರು

ಹಾಗೂ ಮಕ್ಕಳು ಮತ್ತು ಮೊಮ್ಮಕ್ಕಳು, ಬಂಧು-ಮಿತ್ರರು.


# ಬೆಳೆ ನಷ್ಟ ವರದಿ ನೀಡಲು ಅಧಿಕಾರಿಗಳಿಗೆ ಸೂಚನೆ

## ಶಾಸಕ ಅರುಣಕುಮಾರ



ರಾಣೇಬೆನ್ನೂರು, ಜ.9- ಅಕಾಲಿಕ ಮಳೆಯಿಂದಾಗಿ ಹೊಲದಲ್ಲಿದ್ದ ಬಿಳಿ ಜೋಳ, ಕಡಲೆ, ಗೋವಿನಜೋಳ ಮುಂತಾದ ಬೆಳೆಗಳು ಹಾಳಾಗಿವೆ. ಅಧಿಕಾರಿಗಳು ರೈತರ ಜಮೀನುಗಳಿಗೆ ತೆರಳಿ ನಷ್ಟದ ಪ್ರಮಾಣದ ವರದಿಯನ್ನು ನೀಡುವಂತೆ ತಿಳಿಸಲಾಗಿದ್ದು, ಅಧಿಕಾರಿಗಳ ಎರಡು ತಂಡಗಳನ್ನು ರಚಿಸಿ ಕಾರ್ಯೋನ್ಮುಖಿಗೊಳಿಸಲಾಗಿದೆ ಎಂದು ಶಾಸಕ ಅರುಣಕುಮಾರ ಪೂಜಾರ ಹೇಳಿದರು.

ಇಲ್ಲಿನ ಸಿದ್ದೇಶ್ವರ ವೇದಿಕೆಯಲ್ಲಿ ಹಮ್ಮಿಕೊಂಡಿದ್ದ ಬಿಜೆಪಿ ಬೆಂಬಲಿತ ನೂತನ ಗ್ರಾ.ಪಂ. ಸದಸ್ಯರನ್ನು ಸನ್ಮಾನಿಸಿ ಅವರು ಮಾತನಾಡಿದರು. ನನ್ನ ಕ್ಷೇತ್ರದ ಪ್ರತಿ ಪಂಚಾಯ್ತಿಗೆ ಒಂದು ಕೋಟಿ ವಿಶೇಷ ಅನುದಾನ ಹಾಗೂ ನಾಲ್ಕು ಸಾವಿರ ಮನೆಗಳನ್ನು ನಿರ್ಮಾಣ ಮಾಡಲಾಗುವುದು. ಈ ಕುರಿತು ಸರ್ಕಾರದ ಮೇಲೆ ತೀವ್ರ ಒತ್ತಡ ಹೇರಲಾಗುವುದು. ಕಾಂಗ್ರೆಸ್ ಭದ್ರಕೋಟೆಯಂತಿದ್ದ ಕೆಲ ಪಂಚಾಯ್ತಿಗಳಲ್ಲೂ ಬಿಜೆಪಿಯನ್ನು ಅಧಿಕಾರಕ್ಕೆ ತಂದಿರುವ ಗ್ರಾಮೀಣ ಭಾಗದ ಜನತೆಗೆ ಮುಖ್ಯಮಂತ್ರಿ ಯಡಿಯೂರಪ್ಪ ಹಾಗೂ ಸಚಿವ ಬಸವರಾಜ ಬೊಮ್ಮಾಯಿ ಅವರ ಬಗ್ಗೆ ಅಪಾರ ಅಭಿಮಾನವಿದೆ. ಹಾಗಾಗಿ ವಿಶೇಷ ಅನು ದಾನ ಕೊಡಲು ಈರ್ವರೂ ಒಪ್ಪಿಗೆ ನೀಡ ಲಿದ್ದಾರೆಂದು ಶಾಸಕರು ವಿಶ್ವಾಸ ವ್ಯಕ್ತಪಡಿಸಿದರು.

ಈ ಚುನಾವಣೆಯಲ್ಲಿ ಮುಕ್ಕಾಲು ಭಾಗದಷ್ಟು ಕಾಂಗ್ರೆಸ್ ಅನ್ನು ಸೋಲಿಸಿರುವ ನೀವು ಮುಂಬರುವ ಜಿಲ್ಲಾ ಪಂಚಾಯ್ತಿ ಹಾಗೂ ತಾಲ್ಲೂಕು ಪಂಚಾಯ್ತಿಗಳ ಚುನಾವಣೆಯಲ್ಲಿ ನನ್ನ ಕ್ಷೇತ್ರದ 4 ಜಿ.ಪಂ. ಹಾಗೂ 23 ತಾ.ಪಂ. ಗಳಲ್ಲಿ ಬಿಜೆಪಿಯನ್ನು ಗೆಲ್ಲಿಸಿ, ಕಾಂಗ್ರೆಸ್ ಮುಕ್ತ ರಾಣೇಬೆನ್ನೂರು ವಿಧಾನಸಭಾ ಕ್ಷೇತ್ರವನ್ನಾಗಿ ಮಾಡುವಂತೆ ಶಾಸಕರು ಕರೆ ನೀಡಿದರು.


ವೇದಿಕೆಯಲ್ಲಿ ತಾಲ್ಲೂಕು ಬಿಜೆಪಿ ಅಧ್ಯಕ್ಷ ಬಸವರಾಜ ಕೇಲಗಾರ, ನಗರ ಅಧ್ಯಕ್ಷ ದೀಪಕ್ ಹರಪನಹಳ್ಳಿ, ಮುಖಂಡರುಗಳಾದ ಎಸ್.ಎಸ್. ರಾಮಲಿಂಗಣ್ಣನವರ, ಭಾರತಿ ಜಂಬಗಿ, ಸಂತೋಷ ಪಾಟೀಲ, ಜಿಲ್ಲಾಧ್ಯಕ್ಷ ಸಿದ್ರಾಜ ಕಲಕೋಟಿ, ಬಸವರಾಜ ಹುಲ್ಲತ್ತಿ, ಚೋಳಪ್ಪ ಕಸವಾಳ ಇನ್ನಿತರರಿದ್ದರು.

### ಗಂಡ ನೀಡಿದ ಸ್ವಾತಂತ್ರ್ಯ...

ನಾನು ಜಿಲ್ಲಾ ಪಂಚಾಯ್ತಿ ಸದಸ್ಯೆ. ನಮ್ಮ ಯಜಮಾನರು ಎಂದೂ ನನ್ನ ಅಧಿಕಾರದ ವ್ಯಾಪ್ತಿಯಲ್ಲಿ ಭಾಗವಹಿಸಲಿಲ್ಲ. ಈಗ ಶಾಸಕರಾದರೂ ಸಹ ಜಿ.ಪಂ. ಕಾರ್ಯಗಳ ಬಗ್ಗೆ ಮೂಗು ತೂರಿಸುವುದಿಲ್ಲ ಎಂದು ಹೇಳಿದ ಮಂಗಳಗೌರಿ ಪೂಜಾರ ಅವರು ಗ್ರಾಪಂನಲ್ಲಿ ಆಯ್ಕೆಯಾದ ಎಲ್ಲ ಮಹಿಳೆಯರಿಗೆ ಅವರ ಮನೆಯ ಪುರುಷರು ಹಕ್ಕು ಚಲಾಯಿಸದೇ ಅವರಿಗೆ ಅಧಿಕಾರ ನಡೆಸಲು ಬಿಡಿ ಎಂದರು.

**ಹೊರ ನಡೆದ ಭಾರತಿ ಜಂಬಗಿ... :** ವೇದಿಕೆಯಲ್ಲಿದ್ದ ಇಬ್ಬರು ಮಹಿಳೆಯರಲ್ಲಿ ಶಾಸಕರ ಪತ್ನಿ ಮಂಗಳಗೌರಿ ಪೂಜಾರ ಅವರೊಬ್ಬರಿಗೇ ಮಾತನಾಡಲು ಅವಕಾಶ ನೀಡಲಾಗಿದ್ದನ್ನು ಗಮನಿಸಿ, ಅಸಮಾಧಾನಗೊಂಡಿದ್ದ ಉತ್ತರ ಕನ್ನಡದ ಉಸ್ತುವಾರಿ, ಪ್ರಕೋಷ್ಠದ ಸಂಚಾಲಕಿ ಭಾರತಿ ಜಂಬಗಿ ಶಾಸಕರು ಭಾಷಣ ಪ್ರಾರಂಭಿಸುತ್ತಲೇ ವೇದಿಕೆಯಿಂದ ಇಳಿದು ಹೊರಹೋದ ಪ್ರಸಂಗ ನಡೆಯಿತು.


ಕೈಲಾಸ ಶಿವಗಣಾರಾಧನೆ



ದಾವಣಗೆರೆ ಸಿಟಿ ಆವರಗೆರೆ ವಾಸಿ

ಶ್ರೀಮತಿ ಕಿತ್ತೂರು ಶರಣಮ್ಮ ಮತ್ತು ಮಕ್ಕಳು

ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ : 02.01.2021ನೇ ಶನಿವಾರ ರಾತ್ರಿ 10.20ಕ್ಕೆ ನನ್ನ ಪೂಜ್ಯ ಪತಿಯವರಾದ

ಶರಣ ಕಿತ್ತೂರು ಶರಣಪ್ಪ

ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

ಕೈಲಾಸ ಶಿವಗಣಾರಾಧನೆಯನ್ನು

ದಿನಾಂಕ : 10.01.2021ನೇ ಭಾನುವಾರ ಬೆಳಿಗ್ಗೆ 10.30ಕ್ಕೆ ಆವರಗೆರೆ ಗ್ರಾಮದ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.


ಇಂತಿ ದುಃಖತಪ್ತರು :

✧ ಲಿಂಗೈಕ್ಯರ ಧರ್ಮಪತ್ನಿ ಶ್ರೀಮತಿ ಕಿತ್ತೂರು ಶರಣಮ್ಮ ಮತ್ತು ಮಕ್ಕಳು.
✧ ಮಕ್ಕಳಾದ ಶ್ರೀ ಕೆ.ಎಸ್. ರೇವಣ್ಣ, ಶ್ರೀಮತಿ ಹಾಲಮ್ಮ ಮತ್ತು ಮಕ್ಕಳು.
✧ ಶ್ರೀ ಕೆ.ಎಸ್. ಕರಿಬಸಪ್ಪ, ಶ್ರೀಮತಿ ಸುಧಾ ಮತ್ತು ಮಕ್ಕಳು.
✧ ಶ್ರೀ ಕೆ.ಎಸ್. ನಾಗರಾಜ, ಶ್ರೀಮತಿ ತಾರಾಮಣಿ ಮತ್ತು ಮಕ್ಕಳು.
✧ ಶ್ರೀ ಎ.ಎಸ್. ಕಲ್ಲೇಶಪ್ಪ, ಶ್ರೀಮತಿ ಅಂಬುಜ ಮತ್ತು ಮಕ್ಕಳು.
✧ ದಿ॥ ಶ್ರೀ ನಾಗರಾಜಪ್ಪ ದಿ॥ ಶ್ರೀಮತಿ ಸುವರ್ಣಮ್ಮ ಮತ್ತು ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು.

ಕಿತ್ತೂರು ವಂಶಸ್ಥರು ಹಾಗೂ ಆವರಗೆರೆ ಗ್ರಾಮಸ್ಥರು ಬಂಧು-ಮಿತ್ರರು.



ಚಿರಸ್ಮರಣೆ



ಬಿ.ಎನ್. ಅಡಿವಪ್ಪ

ತೆಂಗಿನಕಾಯಿ ವರ್ತಕರು ಹಾಗೂ
ಮಾಜಿ ತಾಲ್ಲೂಕು ಬೋರ್ಡ್ ಸದಸ್ಯರು (ಕಾಂಗ್ರೆಸ್)
ಹೊಸದುರ್ಗ ತಾಲ್ಲೂಕು
ಹೊಸದುರ್ಗ ರೋಡ್
ಜನನ : 06.01.1929
ಮರಣ : 10.01.1988



ಶಿವಮ್ಮ ಬಿ.ಎನ್. ಅಡಿವಪ್ಪ

ಜನನ : 18.02.1936
ಮರಣ : 29.05.2008

ನೀವು ನಮ್ಮನ್ನಗಲಿ ಇಂದಿಗೆ ವರ್ಷಗಳೇ ಕಳೆದವು,
ಸದಾ ನಿಮ್ಮ ಸ್ಮರಣೆಯಲ್ಲಿರುವ,

ಮಕ್ಕಳಾದ : A. ಚಂದ್ರಶೇಖರ್ KAS Rtd.
B.A. ಜಗದೀಶ್, A. ಗಂಗಾಧರ್
ಸೊಸೆಯಂದಿರಾದ : ಸುಜಾತ, ಶಾಂತಲಾ
ಮೊಮ್ಮಕ್ಕಳಾದ : ಅಪೂರ್ವ, ಅನನ್ಯ, ಅಭಿಚಂದ್ರ, ಬಿನಯ್ ಗಾಂಧಿ
ಮರಿಮೊಮ್ಮಕ್ಕಳಾದ : ಯಶಸ್, ಸೂರ್ಯ.
ಹಿತೈಷಿಗಳಾದ : ರಾಮುಲು ಯಶವಂತಪುರ, ಜೋಸೆಫ್ ರಮೇಶ್ ಹುಬ್ಬಳ್ಳಿ
ಹಾಗೂ ಬುರುಡೇಕಟ್ಟೆ, ಮಲ್ಲಾಡಿಹಳ್ಳಿ, ಗುಂಡಿನಮಡು,
ತಣಿಗೇಕಲ್ಲು ವಂಶಸ್ಥರು, ಅಪಾರ ಬಂಧು-ಮಿತ್ರರು.



ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 8.1.2021ರಂದು ನಿಧನರಾದ
ದಾವಣಗೆರೆ ದೈವಜ್ಞ ಸಮಾಜ ಸಂಘದ ಮಾಜಿ ಪ್ರಧಾನ ಕಾರ್ಯದರ್ಶಿಗಳೂ,
ದೈವಜ್ಞ ವಿದ್ಯಾಸಂಸ್ಥೆಯ ಕೋಶಾಧಿಕಾರಿಗಳೂ,
ಶ್ರೀ ಓಂಕಾರ ಜ್ಯುಯಲರಿ ಮಾರ್ಟ್ ಮಾಲೀಕರೂ,
ದೈವಜ್ಞ ಸಮಾಜದ ಹಿರಿಯರೂ ಆಗಿದ್ದ ಸರಳ - ಸಜ್ಜನಿಕೆ ವ್ಯಕ್ತಿತ್ವದ

ಶ್ರೀ ವಿಶ್ರಾಮ್ ಪಿ. ರಾಯ್ಕರ್

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಮತ್ತು ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥನೆ.

ಸತ್ಯನಾರಾಯಣ ಆರ್. ರಾಯ್ಕರ್
ಅಧ್ಯಕ್ಷರು ಮತ್ತು ಕಾರ್ಯಕಾರಿ ಮಂಡಳಿ
ಹಾಗೂ ಸರ್ವ ಸದಸ್ಯರು

ದೈವಜ್ಞ ಸಮಾಜ ಸಂಘ (ರಿ.), ದಾವಣಗೆರೆ.


## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಭಾಷಾ ನಗರ 1 ರಿಂದ 17ನೇ ಕ್ರಾಸ್, ರಿಂಗ್ ರಸ್ತೆ, ಶಿವನಗರ ಸ್ವಲ್ಪ ಭಾಗ, ಮಿಲ್ಲತ್ ಕಾಲೋನಿ, ಬೀಡಿ ಲೇಔಟ್, ರಜಾಕ್ ಸರ್ಕಲ್, ಬೀಡಿ ಲೇಔಟ್, ಶಿವನಗರ, ರಜಾವುಲ್ಲಾ ಮುಸ್ತಾಫ್ ನಗರ, ಇಎಸ್ಐ ಆಸ್ಪತ್ರೆ ಹಿಂಭಾಗ ಹಾಗೂ ಮುಂಭಾಗ, ಭಾಷನಗರ ಮುಖ್ಯ ರಸ್ತೆ ಸುತ್ತಮುತ್ತ ಹಾಗೂ ಇತರೆ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ನಿವೃತ್ತ ಪ್ರಾಂಶುಪಾಲರಾದ ಪಿ. ಶಿವಮೂರ್ತಿ ನಿಧನ



ಜಗಳೂರು ತಾಲ್ಲೂಕು ಅಸಗೋಡು ಗ್ರಾಮದ ವಾಸಿ ದಿ.ಪೆಟಿಗೇರ ಗೋವಿಂದಪ್ಪ ಇವರ ಪುತ್ರ ನಿವೃತ್ತ ಪ್ರಾಂಶುಪಾಲರಾದ ಪಿ. ಶಿವಮೂರ್ತಿ (65) ಅವರು ದಿನಾಂಕ 9.01.2021 ರಂದು ಶನಿವಾರ ಸಂಜೆ 4.45ಕ್ಕೆ ನಿಧನರಾಗಿದ್ದಾರೆ. ಪತ್ನಿ, ಇಬ್ಬರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 10.01.2021ರ ಭಾನುವಾರ ಬೆಳಿಗ್ಗೆ 11 ಗಂಟೆಗೆ ಅಸಗೋಡು ಗ್ರಾಮದಲ್ಲಿ ನೆರವೇರಲಿದೆ.


॥ ಶ್ರೀ ಹೋರಿ ಹೊಳೆ ಬಸವೇಶ್ವರ ಪ್ರಸನ್ನ ॥

ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



ದಾವಣಗೆರೆ ಜಿ., ಹರಿಹರ ತಾ. ದೇವರಬೆಳಕೆರೆ ಗ್ರಾಮದ ವಾಸಿ
ಶ್ರೀ ಎನ್. ಶೇಖರಪ್ಪ ಮತ್ತು ಮಕ್ಕಳು
ಇವರು ಮಾಡುವ ವಿಜ್ಞಾಪನೆಗಳು.
ದಿ.: 02.01.21ರಂದು ಶನಿವಾರ ಸಂಜೆ 4.15ಕ್ಕೆ ನನ್ನ
ಧರ್ಮಪತ್ನಿಯವರಾದ

ಶ್ರೀಮತಿ ರತ್ನಮ್ಮನವರು

ಇವರು ಶಿವೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

ಕೈಲಾಸ ಶಿವಗಣಾರಾಧನೆಯನ್ನು

ದಿ. : 10.01.2021ರ ಭಾನುವಾರ ಬೆಳಿಗ್ಗೆ 10.30 ಗಂಟೆಗೆ ದಾವಣಗೆರೆ ಜಿ. ಹರಿಹರ ತಾ. ದೇವರಬೆಳಕೆರೆ ಗ್ರಾಮದಲ್ಲಿರುವ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಶ್ರೀ ಎನ್. ಶೇಖರಪ್ಪ ಮತ್ತು ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು ಹಾಗೂ ಬಂಧು-ಮಿತ್ರರು. ಫೋ : 99001 20315

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿದೆ.



ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 08.01.2021ರಂದು ನಿಧನರಾದ
ನಿವೃತ್ತ ಉಪತಹಶೀಲ್ದಾರ್,
ನಮ್ಮ ಸಹಕಾರಿ ಆಡಳಿತ ಮಂಡಳಿಯ ನಿರ್ದೇಶಕರಾದ

ಶ್ರೀ ಎಸ್.ಬಿ. ಚನ್ನಳ್ಳಿ

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಮತ್ತು ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥನೆ.

ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು, ಸರ್ವ ಸದಸ್ಯರು ಮತ್ತು ಸಿಬ್ಬಂದಿ ವರ್ಗ
ಸನ್ಮತಿ ಸೌಹಾರ್ದ ಸಹಕಾರಿ ನಿಯಮಿತ
ಮಂಡಿಪೇಟೆ, ದಾವಣಗೆರೆ.

# ಜನತಾ ವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಭಾನುವಾರ, ಜನವರಿ 10, 2021


## ಬೆಂಕಿ : ಹತ್ತು ನವಜಾತ ಶಿಶುಗಳ ಸಾವು

ಭಂಡಾರಾ, ಜ. 9 – ಮಹಾರಾಷ್ಟ್ರದ ಭಂಡಾರಾದಲ್ಲಿರುವ ಸರ್ಕಾರಿ ಆಸ್ಪತ್ರೆಯ ನವಜಾತ ಶಿಶು ಘಟಕದಲ್ಲಿ ಬೆಂಕಿ ಕಾಣಿಸಿಕೊಂಡಿದ್ದು, ಹತ್ತು ನವಜಾತ ಶಿಶುಗಳು ಸಾವನ್ನಪ್ಪಿದ ಹೃದಯವಿದ್ರಾವಕ ಘಟನೆ ನಡೆದಿದೆ. ಏಳು ಹಸುಳೆಗಳನ್ನು ರಕ್ಷಿಸಲಾಗಿದೆ ಎಂದು ವೈದ್ಯರು ತಿಳಿಸಿದ್ದಾರೆ.

ಮೃತ ಶಿಶುಗಳು ಒಂದು ತಿಂಗಳಿನಿಂದ ಮೂರು ತಿಂಗಳಿನವರು.

**ಏಳು ಹಸುಳೆಗಳ ರಕ್ಷಣೆ**

ಮೂರು ಶಿಶುಗಳು ಸುಟ್ಟ ಗಾಯಗಳಿಂದ ಹಾಗೂ ಉಳಿದವರು ಹೊಗೆಯಿಂದ ಉಸಿರು ಕಟ್ಟಿ ಸಾವನ್ನಪ್ಪಿರುವುದಾಗಿ ರಾಜ್ಯ ಆರೋಗ್ಯ ಸಚಿವ ರಾಜೇಶ್ ಟೋಪೆ ಹೇಳಿದ್ದಾರೆ. ರಾಜ್ಯ ಸರ್ಕಾರ ಮೃತರ ಕುಟುಂಬದವರಿಗೆ ತಲಾ ಐದು ಲಕ್ಷ ರೂ. ಪರಿಹಾರ ಪ್ರಕಟಿಸಿದೆ.

ಘಟನೆಯ ಬಗ್ಗೆ ಶೋಕ ವ್ಯಕ್ತಪಡಿಸಿರುವ ಮುಖ್ಯಮಂತ್ರಿ ಉದ್ಧವ್ ಠಾಕ್ರೆ, ಘಟನೆಯ ತನಿಖೆಗೆ ಆದೇಶಿಸಿದ್ದಾರೆ ಎಂದು ಅಧಿಕೃತ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಬೆಳಿಗ್ಗೆ 1.30ರ ಸಮಯದಲ್ಲಿ ನವಜಾತ ಶಿಶು ಘಟಕದಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಘಟಕದಲ್ಲಿದ್ದ 17 ಮಕ್ಕಳ ಪೈಕಿ ಏಳು ಮಕ್ಕಳನ್ನು ರಕ್ಷಿಸಲಾಗಿದೆ. ನರ್ಸ್ ಒಬ್ಬರು ನವಜಾತ ಶಿಶು ಘಟಕದಿಂದ ಹೊಗೆ ಬರುತ್ತಿರುವುದನ್ನು ಗಮನಿಸಿ ಆ ಬಗ್ಗೆ ವೈದ್ಯರು ಹಾಗೂ ಇತರೆ ಸಿಬ್ಬಂದಿಗೆ ತಿಳಿಸಿದ್ದಾರೆ. ನಂತರ ಅಗ್ನಿಶಾಮಕ ದಳದವರು ಏಳು (6 ಪುಟಕ್ಕೆ)

## ಅಕಾಲಿಕ ಮಳೆಗೆ ಕೊಚ್ಚಿ ಹೋದ ಇಟ್ಟಿಗೆ ಭಟ್ಟಿ



**ಕೋಟ್ಯಾಂತರ ರೂ. ನಷ್ಟ: ಭೇಟಿ ನೀಡದ ಜನಪ್ರತಿನಿಧಿಗಳು**

ಹರಿಹರ, ಜ.9- ಕಳೆದ ಮೂರು, ನಾಲ್ಕು ದಿನಗಳಿಂದ ಸತತವಾಗಿ ಬೀಳುತ್ತಿರುವ ಅಕಾಲಿಕ ಮಳೆಗೆ ಹೊರವಲಯದ ಗುತ್ತೂರು, ಹರಿಹರ, ಕರಲಹಳ್ಳಿ, ಕೋಡಿಯಾಲ ಹೊಸಪೇಟೆ, ಕವಲೆತ್ತು, ಒಡೆರಾಯನಹಳ್ಳಿ, ಕುರುಬರಹಳ್ಳಿ, ಮುಂತಾದ ಗ್ರಾಮದಲ್ಲಿ ಇಟ್ಟಿಗೆ ಭಟ್ಟಿಯಲ್ಲಿ ತಯಾರಿಕೆ ಹಂತದಲ್ಲಿ ಇದ್ದ ಲಕ್ಷಾಂತರ ಇಟ್ಟಿಗೆಗಳು ನೀರಿನ ರಭಸಕ್ಕೆ ಹಾಳಾಗಿ ಕೋಟ್ಯಾಂತರ ರೂಪಾಯಿ ನಷ್ಟವಾಗಿದೆ.

ಪ್ರಮುಖ ಉದ್ಯೋಗವಾಗಿರುವ ಇಟ್ಟಿಗೆ ತಯಾರಿಕೆ ಉದ್ಯಮವು, ಅಕಾಲಿಕ ಮಳೆಯಿಂದಾಗಿ ತತ್ತರಿಸಿ ಹೋಗಿದೆ. ನಗರ ಸೇರಿದಂತೆ ಗುತ್ತೂರು, ಕರಲಹಳ್ಳಿ, ಕುರಬರಹಳ್ಳಿ, ಕೊಂಡಜ್ಜಿ ಮತ್ತು ರಾಣೇಬೆನ್ನೂರು ತಾಲ್ಲೂಕಿನ ಕೋಡಿಯಾಲ ಹೊಸಪೇಟೆ, ಕವಲೆತ್ತು, ಒಡೆರಾಯನಹಳ್ಳಿ ಮುಂತಾದ ಗ್ರಾಮಗಳಲ್ಲಿ ಇಟ್ಟಿಗೆ ಭಟ್ಟಿಗಳಲ್ಲಿ ಪ್ರತಿವರ್ಷ ಕೋಟ್ಯಾಂತರ ಇಟ್ಟಿಗೆಗಳು ತಯಾರಿಗೊಂಡು ಕಟ್ಟಡ ಕಟ್ಟುವ (6 ಪುಟಕ್ಕೆ)



ದಾವಣಗೆರೆ ಕೆ.ಆರ್. ಮಾರುಕಟ್ಟೆಯಲ್ಲಿ ಮಳೆ ನೀರಿನಿಂದ ತೇವಗೊಂಡಿದ್ದ ಆಹಾರ ಧಾನ್ಯಗಳನ್ನು ಶನಿವಾರ ಒಣಗಿಸುತ್ತಿರುವುದು

# ಅವಾಂತರ ಸೃಷ್ಟಿಸಿದ ಅನಿರೀಕ್ಷಿತ ಮಳೆ

### ಅಂಗಡಿ ಮಳಿಗೆಗೆ ನೀರು ನುಗ್ಗಿ ಆಹಾರ ಪದಾರ್ಥ ನೀರು ಪಾಲು, ಲಕ್ಷಾಂತರ ರೂ. ನಷ್ಟ ರಸ್ತೆಗಳು, ಮನೆಗಳು, ಬೆಳೆ ಹಾನಿ, ಸ್ಮಾರ್ಟ್ ಸಿಟಿ ಕಾಮಗಾರಿಗೆ ನಗರ ಜನತೆ ಆಕ್ರೋಶ

ದಾವಣಗೆರೆ, ಜ.9- ಜಿಲ್ಲೆಯಲ್ಲಿ ನಿನ್ನೆ ಸಂಜೆಯಿಂದ ತಡ ರಾತ್ರಿವರೆಗೆ ಸುರಿದ ಅನಿರೀಕ್ಷಿತ ಮಳೆ ಭಾರೀ ಅವಾಂತರ ಸೃಷ್ಟಿಸಿದ್ದು, ನಗರ ಸೇರಿದಂತೆ ತಾಲ್ಲೂಕುಗಳ ಹಲವೆಡೆ ರಸ್ತೆ, ಮನೆಗಳು ಹಾಗೂ ಬೆಳೆಗಳಿಗೆ ಹಾನಿಯಾಗಿದೆ.

ನಗರದಲ್ಲಿನ ತಗ್ಗು ಪ್ರದೇಶದ ಮನೆಗಳಿಗೆ ನೀರು ನುಗ್ಗಿ ಜನತೆ ರಾತ್ರಿ ಇಡೀ ಜಾಗರಣೆ ಮಾಡುವಂತಾಗಿತ್ತು. ಇನ್ನು ಚಾಮರಾಜ ಪೇಟೆ, ಕೆ.ಆರ್. ಮಾರುಕಟ್ಟೆಯಲ್ಲಿದ್ದ ಅಂಗಡಿಗಳಿಗೆ ನೀರು ನುಗ್ಗಿದ ಪರಿಣಾಮ ಅಂಗಡಿಯಲ್ಲಿದ್ದ ವಸ್ತುಗಳು ನೀರು ಪಾಲಾದವು. ಕೆಲವೆಡೆ ವಿದ್ಯುತ್ ಕಂಬಗಳನ್ನೂ ಮಳೆ ಧರೆಗುಳಿಸಿದೆ.

ಹಲವೆಡೆ ಜಲಸಿರಿ, ಸ್ಮಾರ್ಟ್ ಸಿಟಿ ಕಾಮಗಾರಿಗಳು ನಡೆಯುತ್ತಿದ್ದು, ಪೈಪ್ ಲೈನ್ ಅಳವಡಿಸಲು ತೆಗೆಯಲಾಗಿದ್ದ ಗುಂಡಿಗಳಲ್ಲಿ ನೀರು ತುಂಬಿಕೊಂಡಿದ್ದರೆ, ಮುಚ್ಚಲಾಗಿದ್ದ ಗುಂಡಿಗಳ ಮೇಲಿನ ಮಣ್ಣು ಕುಸಿದಿದ್ದರಿಂದ ಬೆಳಿಗ್ಗೆ ವಾಹನಗಳ ಸಂಚಾರಕ್ಕೆ ತೊಂದರೆಯುಂಟಾಗಿತ್ತು.

ಬೇತೂರು ರಸ್ತೆಯಲ್ಲಿ ರಾಜ ಕಾಲುವೆ ಕಾಮಗಾರಿ ನಡೆಯುತ್ತಿದ್ದ ಹಿನ್ನೆಲೆಯಲ್ಲಿ ಮಳೆ ನೀರು ಸರಾಗವಾಗಿ ಹರಿಯದೆ ಮನೆಗಳಿಗೆ ನುಗ್ಗಿ ಗೋಡೆ ಕುಸಿದಿದೆ. ಅರಳಿ ಮರದ ಬಳಿ ಹಣ್ಣು ವ್ಯಾಪಾರಿ ಯೊಬ್ಬರ ಗಾಡಿ ಮೇಲೆ ತೆಂಗಿನ ಮರ ಬಿದ್ದಿದೆ. ಸ್ಮಾರ್ಟ್ ಸಿಟಿ ಕಾಮಗಾರಿ ಗಳಿಂದಲೇ ಅವಾಂತರ ಸೃಷ್ಟಿಯಾಗುತ್ತಿದೆ ಎಂದು ಆಕ್ರೋಶ ಗೊಂಡ ಕೆಲವರು ಕಾಮಗಾರಿ ಮಾಡಲು ನಿಂತಿದ್ದ ಜೆಸಿಬಿಗೆ ಕಲ್ಲು ಹೊಡೆದು ಗಾಜು ಪುಡಿ ಮಾಡಿದ ಘಟನೆ ನಡೆದಿದೆ.

ಚಾಮರಾಜ ಪೇಟೆಯಲ್ಲಿನ ತಗ್ಗು ಪ್ರದೇಶದಲ್ಲಿನ ಸುಮಾರು 30ಕ್ಕೂ ಹೆಚ್ಚು ಅಂಗಡಿ ಮಳಿಗೆಗಳಿಗೆ ಮಳೆ ನೀರು ನುಗ್ಗಿ ಮಸಾಲೆ ಪದಾರ್ಥಗಳು ಸೇರಿದಂತೆ ಆಹಾರ ಪದಾರ್ಥಗಳಿಗೆ ಹಾನಿ ಮಾಡಿದೆ. ಶನಿವಾರ ಬೆಳಿಗ್ಗೆ ತೇವಗೊಂಡಿದ್ದ ಆಹಾರ ಪದಾರ್ಥಗಳನ್ನು ವ್ಯಾಪಾರಿಗಳು ಒಣಗಿಸುತ್ತಿದ್ದುದು (6 ಪುಟಕ್ಕೆ)



ಮಳೆ ಹಾನಿ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲಿಸಿದ ಮೇಯರ್

## ಜಿಲ್ಲೆಯಲ್ಲಿ 30.97 ಮಿ.ಮೀ. ಮಳೆ


ದಾವಣಗೆರೆ, ಜ.9- ಜಿಲ್ಲೆಯಲ್ಲಿ ಶುಕ್ರವಾರ 30.97 ಮಿ.ಮೀ. ಸರಾಸರಿ ಮಳೆಯಾಗಿದ್ದು, 7.20 ಲಕ್ಷ ರೂ. ನಷ್ಟ ಸಂಭವಿಸಿದೆ ಎಂದು ಜಿಲ್ಲಾಧಿಕಾರಿಗಳ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಹರಿಹರ ತಾಲ್ಲೂಕಿನಲ್ಲಿ ಅತಿ ಹೆಚ್ಚು 59.05 ಮಿ.ಮೀ. ಮಳೆಯಾಗಿದೆ. ಚನ್ನಗಿರಿ ತಾಲ್ಲೂಕಿನಲ್ಲಿ ಅತಿ ಕಡಿಮೆ ಅಂದರೆ 6.2 ಮಿ.ಮೀ. ಮಳೆಯಾಗಿದೆ. ಉಳಿದಂತೆ ದಾವಣಗೆರೆ 43.94 ಮಿ.ಮೀ., ಹೊನ್ನಾಳಿ 11 ಮಿ.ಮೀ. ಹಾಗೂ ಜಗಳೂರ ತಾಲ್ಲೂಕಿನಲ್ಲಿ 34.7 ಮಿ.ಮೀ. ಮಳೆಯಾಗಿದೆ.

ದಾವಣಗೆರೆ ತಾಲ್ಲೂಕಿನಲ್ಲಿ 5 ಕಚ್ಚಾ ಮನೆಗೆ (6 ಪುಟಕ್ಕೆ)

## 16ರಿಂದ ದೇಶಾದ್ಯಂತ ಲಸಿಕಾ ಅಭಿಯಾನ

### ಆರೋಗ್ಯ ಹಾಗೂ ಮುಂಚೂಣಿ ಕಾರ್ಯಕರ್ತರಿಗೆ ಮೊದಲ ಆದ್ಯತೆ




ನವದೆಹಲಿ, ಜ. 9 – ಬರುವ ಜನವರಿ 16ರಿಂದ ದೇಶಾದ್ಯಂತ ಕೊರೊನಾ ಲಸಿಕೆ ಅಭಿಯಾನ ಆರಂಭವಾಗಲಿದೆ. ಈ ಅಭಿಯಾನ ವಿಶ್ವದಲ್ಲೇ ಅತಿ ದೊಡ್ಡದು ಎಂದಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಈ ಅಭಿಯಾನದಲ್ಲಿ ಮೂರು ಕೋಟಿ ಆರೋಗ್ಯ ಹಾಗೂ ಮುಂಚೂಣಿ ಕಾರ್ಯಕರ್ತರಿಗೆ ಆದ್ಯತೆ ನೀಡಲಾಗುವುದು ಎಂದಿದ್ದಾರೆ.

ಪ್ರಧಾನಿ ಮೋದಿ ಅವರ ನೇತೃತ್ವದಲ್ಲಿ ನಡೆದ ಉನ್ನತ ಮಟ್ಟದ ಸಭೆಯಲ್ಲಿ ಕೊರೊನಾ ಸೋಂಕಿನ ಪರಿಸ್ಥಿತಿ ಹಾಗೂ ಲಸಿಕೆ ನೀಡುವ ಸಿದ್ಧತೆಗಳ ಪರಿಶೀಲನೆ ನಡೆಸಿದ ನಂತರ ಲಸಿಕೆ ನೀಡುವ ದಿನಾಂ ಕದ ಬಗ್ಗೆ ನಿರ್ಧರಿಸಲಾ ಗಿದೆ. ವಿವರವಾದ ಪರಿಶೀಲನೆ ನಡೆಸಿದ ನಂತರ ಮುಂಬರುವ ಹಬ್ಬಗಳನ್ನು ಗಮನದಲ್ಲಿರಿಸಿಕೊಂಡು (6 ಪುಟಕ್ಕೆ)

## ನೂತನ ಕೃಷಿ ಕಾಯ್ದೆ ಪರ ಸುಪ್ರೀಂ ನಲ್ಲಿ ಅರ್ಜಿ

**ಕಾಯ್ದೆ ತಿದ್ದುಪಡಿಗೆ ಮುಂಚೆ ತಮ್ಮ ಬಳಿ ಸರ್ಕಾರ ಚರ್ಚಿಸಬೇಕೆಂದು ಮನವಿ**

ನವದೆಹಲಿ, ಜ. 9 – ನೂತನ ಕೃಷಿ ಕಾಯ್ದೆಗಳಲ್ಲಿ ಬಾಕಿ ಉಳಿದಿರುವ ವಿಷಯಗಳನ್ನು ಜಾರಿಗೆ ತರುವಂತೆ ಸುಪ್ರೀಂ ಕೋರ್ಟ್ ನಲ್ಲಿ ರೈತರ ಒಕ್ಕೂಟವೊಂದು ಅರ್ಜಿ ದಾಖಲಿಸಿದೆ. ಕಾಯ್ದೆಯಲ್ಲಿರುವ ಅಂಶಗಳು ರೈತರಿಗೆ ಲಾಭದಾಯಕವಾಗಿವೆ ಹಾಗೂ ಇದರಿಂದ ರೈತರ ಆದಾಯ ಹೆಚ್ಚಾಗಲಿದೆ ಎಂದು ಅರ್ಜಿಯಲ್ಲಿ ಹೇಳಲಾಗಿದೆ.

ಕನ್ಸೋರ್ಟಿಯಂ ಆಫ್ ಇಂಡಿಯನ್ ಫಾರ್ಮರ್ಸ್ ಅಸೋಸಿಯೇಷನ್ (ಸಿ.ಐ.ಎಫ್.ಎ.) ಸುಪ್ರೀಂ (6 ಪುಟಕ್ಕೆ)

## 62 ಜನರಿದ್ದ ಇಂಡೋನೇಷಿಯಾ ವಿಮಾನ ಪತನ

ಜಕಾರ್ತಾ, ಜ. 9 – ಇಂಡೋನೇಷಿಯಾದ ರಾಜಧಾನಿಯಿಂದ ಹೊರಟಿದ್ದ ಶ್ರೀವಿಜಯ ಏರ್ ಜೆಟ್ ವಿಮಾನ ಹಾರಾಟ ಆರಂಭಿಸಿದ ಕೆಲವೇ ನಿಮಿಷಗಳಲ್ಲಿ ಪತನಗೊಂಡಿದೆ. ವಿಮಾನದಲ್ಲಿ 62 ಜನರಿದ್ದರು.

ಎಸ್‌ಜೆ182 ವಿಮಾನ ಸ್ಥಳೀಯ ಸಮಯದ ಪ್ರಕಾರ ಮಧ್ಯಾಹ್ನ 2.36ಕ್ಕೆ ಹೊರಟಿತ್ತು. ನಾಲ್ಕು ನಿಮಿಷಗಳ ನಂತರ ವಿಮಾನ ರಡಾರ್‌ನಿಂದ ಕಣ್ಮರೆಯಾಗಿದೆ ಎಂದು ಸಾರಿಗೆ ಸಚಿವ ಬುಡಿ ಕರ್ಯಾ ಸುಮಡಿ ತಿಳಿಸಿದ್ದಾರೆ. ವಿಮಾನ 90 ನಿಮಿಷಗಳಲ್ಲಿ ಜಕಾರ್ತಾದಿಂದ ಪೊಂಟಿಯಾಂಕ್‌ಗೆ ತೆರಳಬೇಕಿತ್ತು. ವಿಮಾನದಲ್ಲಿ 50 ಪ್ರಯಾಣಿಕರು ಹಾಗೂ 12 ಸಿಬ್ಬಂದಿ ಇದ್ದರು. ಎಲ್ಲರೂ (6 ಪುಟಕ್ಕೆ)




# ಹೊನ್ನಾಳಿಗೆ ಇಂದು ಬಿಜೆಪಿ ಅಧ್ಯಕ್ಷ ಕಟೀಲ್



ಹೊನ್ನಾಳಿ, ಜ.9- ಗ್ರಾಪಂ ಚುನಾವಣೆಯಲ್ಲಿ ಗೆಲುವು ಸಾಧಿಸಿದ ಬಿಜೆಪಿ ಬೆಂಬಲಿತ ನೂತನ ಸದಸ್ಯರಿಗೆ ನಾಳೆ ದಿನಾಂಕ 10ರ ಭಾನುವಾರ ಪಟ್ಟಣದಲ್ಲಿ ಅಭಿನಂದನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಬಿಜೆಪಿ ರಾಜ್ಯಾಧ್ಯಕ್ಷ ನಳಿನ್‌ಕುಮಾರ್ ಕಟೀಲ್ ನೇತೃತ್ವ ವಹಿಸುತ್ತಾರೆ ಎಂದು ತಾಲ್ಲೂಕು ಬಿಜೆಪಿ ಅಧ್ಯಕ್ಷ ಜೆ.ಕೆ. ಸುರೇಶ್ ತಿಳಿಸಿದ್ದಾರೆ.


ಪಟ್ಟಣದ ಅಗಳ ಮೈದಾನದಲ್ಲಿ ಕಾರ್ಯಕ್ರಮದ ಪೂರ್ವಭಾವಿ ಸಿದ್ಧತಾ ಕಾರ್ಯಗಳನ್ನು ಪರಿಶೀಲಿಸಿ ನಂತರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

ಗ್ರಾಪಂ ಚುನಾವಣೆಯಲ್ಲಿ ಗೆಲುವು ಸಾಧಿಸಿದ ಸದಸ್ಯರ ಜೊತೆಯಲ್ಲಿಯೇ ಸೋತ ಅಭ್ಯರ್ಥಿಗಳು, ಚುನಾವಣೆಯ ಸಂದರ್ಭದಲ್ಲಿ ಪಕ್ಷದ ಬೆಂಬಲಿತ ಅಭ್ಯರ್ಥಿಗಳ ಗೆಲುವಿಗಾಗಿ ಶ್ರಮಿಸಿದ ಮುಖಂಡರು, ಜನಪ್ರತಿನಿಧಿಗಳು, ಕಾರ್ಯಕರ್ತರಿಗೂ ಅಭಿನಂದನೆ ಸಲ್ಲಿಸಲಾಗುವುದು ಎಂದು ತಿಳಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜು, ಸಂಸದ ಜಿ.ಎಂ. ಸಿದ್ಧೇಶ್ವರ, ವಿಧಾನ ಪರಿಷತ್ ಸದಸ್ಯ ಆಯನೂರು ಮಂಜುನಾಥ್, ಸಿಎಂ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ, ಬಿಜೆಪಿ ಜಿಲ್ಲಾಧ್ಯಕ್ಷ ವೀರೇಶ್ ಹನಗವಾಡಿ ಮುಂತಾದ ಗಣ್ಯರು ಭಾಗವಹಿಸಲಿದ್ದಾರೆ.

ಜಿಪಂ ಸದಸ್ಯ ಎಂ.ಆರ್. ಮಹೇಶ್, ಎಪಿಎಂಸಿ ನಿರ್ದೇಶಕ ಜಿವಿಎಂ ರಾಜು, ತಾಪಂ ಉಪಾಧ್ಯಕ್ಷ ಕುಳಗಟ್ಟೆ ಕೆ.ಎಲ್. ರಂಗನಾಥ್, ಸ್ಥಾಯಿ ಸಮಿತಿ ಅಧ್ಯಕ್ಷ ಎಚ್. ತಿಪ್ಪೇಶ್, ಸದಸ್ಯ ಹಾಗೂ ತಾಲ್ಲೂಕು ಬಿಜೆಪಿ ಪ್ರಧಾನ ಕಾರ್ಯದರ್ಶಿ ಸಿ.ಆರ್. ಶಿವಾನಂದ್, ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ನೆಲಹೊನ್ನೆ ಎನ್. ಎಸ್. ಮಂಜುನಾಥ್, ಜಿಲ್ಲಾ ಕಾರ್ಯದರ್ಶಿ ಅರಕೆರೆ ಎ.ಎಂ. ನಾಗರಾಜ್, ತಾಲ್ಲೂಕು ಉಪಾಧ್ಯಕ್ಷ ಸಿದ್ಧನಗೌಡ, ಎಸ್ಸಿ ಮೋರ್ಚಾ ಅಧ್ಯಕ್ಷ ಉಮೇಶ್, ಮುಖಂಡರಾದ ಕೆ.ಪಿ. ಕುಬೇರಪ್ಪ, ಪ್ರೇಮ್‌ಕುಮಾರ್ ಭಂಡಿಗಡಿ ಮತ್ತಿತರರು ಉಪಸ್ಥಿತರಿದ್ದರು.

## ಕೂಡ್ಲಿಗಿ ಬಸ್‌ನಿಲ್ದಾಣ ಅವ್ಯವಸ್ಥೆಯ ತಾಣ



ಕೂಡ್ಲಿಗಿ, ಜ.9- ಕೂಡ್ಲಿಗಿ ಬಸ್‌ನಿಲ್ದಾಣ ಅವ್ಯವಸ್ಥೆಯ ಆಗರವಾಗಿದೆ ಎಂದು ವಂದೇ ಮಾತರಂ ಜಾಗೃತಿ ವೇದಿಕೆ ಖಂಡಿಸಿದೆ. ಬಸ್‌ನಿಲ್ದಾಣದಲ್ಲಿ ಸಂಪೂರ್ಣ ನಿರ್ವಹಣೆ ಇಲ್ಲವಾಗಿದೆ. ಡಿಪೋ ವ್ಯವಸ್ಥಾಪಕರ ನಿರ್ಲಕ್ಷ್ಯ ಧೋರಣೆ ಹಾಗೂ ಅಮಾನವೀಯ ನಡೆಗೆ ಸಾರ್ವಜನಿಕ ವಲಯದಿಂದ ತೀವ್ರ ಖಂಡನೆ ವ್ಯಕ್ತವಾಗಿದ್ದು, ಜಿಲ್ಲಾಧಿಕಾರಿಗಳು ಶೀಘ್ರವೇ ಪರಿಶೀಲಿಸಿ, ಸಂಬಂಧ ಪಟ್ಟ ಅಧಿಕಾರಿಗಳಿಗೆ ಕ್ರಮ ಕೈಗೊಳ್ಳಲು ಸೂಚಿಸುವಂತೆ ಆಗ್ರಹಿಸಿದ್ದಾರೆ.

## ನಿಯಂತ್ರಣ ರೇಖೆ ದಾಟಿದ ಚೀನಾ ಸೈನಿಕ ವಶಕ್ಕೆ

ನವದೆಹಲಿ, ಜ. 9 – ಪೂರ್ವ ಲಡಾಖ್‌ನ ಪೆಂಗಾಂಗ್ ತ್ಸೋ ದಂಡೆಯ ಬಳಿ ಚೀನಾದ ಸೈನಿಕನೋರ್ವನನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಳೆದ ಮೂರು ತಿಂಗಳಲ್ಲಿ ಈ ರೀತಿಯ ಘಟನೆ ನಡೆಯುತ್ತಿರುವುದು ಎರಡನೇ ಬಾರಿ.

ನಿಯಂತ್ರಣ ರೇಖೆಯ ಎರಡೂ ಕಡೆಗಳಲ್ಲಿ ಭಾರತ ಮತ್ತು ಚೀನಾ ಭಾರೀ ಸೈನಿಕ ಜಮಾವಣೆ ಮಾಡಿರುವ ನಡುವೆ ಈ ಘಟನೆ ನಡೆದಿದೆ. ದೇಶದ 50 ಸಾವಿರದಷ್ಟು ಸೈನಿಕರನ್ನು ಗಡಿ ರಕ್ಷಣೆಗಾಗಿ ನಿಯೋಜಿಸಲಾಗಿದೆ.

## ಐಸಿಎಆರ್ ತರಳಬಾಳು ಕೃಷಿ ವಿಜ್ಞಾನ ಕೇಂದ್ರದಿಂದ ಪ್ರಾತ್ಯಕ್ಷಿಕೆ



ದಾವಣಗೆರೆ, ಜ.9 - ನಗರದ ಐಸಿಎಆರ್ ತರಳಬಾಳು ಕೃಷಿ ವಿಜ್ಞಾನ ಕೇಂದ್ರದಿಂದ ರಾಷ್ಟ್ರೀಯ ಆಹಾರ ಭದ್ರತಾ ಯೋಜನೆ ಅಡಿಯಲ್ಲಿ ಕಡಲೆಯಲ್ಲಿ ಮುಂಚೂಣಿ ಪ್ರಾತ್ಯಕ್ಷಿಕೆಯನ್ನು ನ್ಯಾಮತಿ ತಾಲ್ಲೂಕಿನ ರಾಮೇಶ್ವರ ಹಾಗೂ ಸುರಹೊನ್ನೆಯಲ್ಲಿ ನಡೆಸಲಾಯಿತು.

ಕೃಷಿ ವಿಜ್ಞಾನ ಕೇಂದ್ರದ ಬೇಸಾಯ ತಜ್ಞ ಮಲ್ಲಿಕಾರ್ಜುನ್ ಅವರು ಕಡಲೆ ಶೇಕಡ 50 ರಷ್ಟು ಹೂ ಹಂತದಲ್ಲಿದ್ದಾಗ, ಪೋಷಕಾಂಶಗಳನ್ನು ಒದಗಿಸುವ ಚಿಕ್ಪೀ ಮ್ಯಾಜಿಕ್ (chickpea magic) ಅನ್ನು 5 ಗ್ರಾಂ ಪುಡಿ ಮತ್ತು ಅದರಲ್ಲಿ ಸಸ್ಯ ಪ್ರಚೋದಕ 0.5ml ಪ್ರತಿ ಲೀಟರ್ ನೀರಿನಲ್ಲಿ ಕರಗಿಸಿ ಸಿಂಪರಣೆ ಮಾಡಬೇಕು. ಚಿಕ್ಪೀ ಮ್ಯಾಜಿಕ್ ಲಘು ಪೋಷಕಾಂಶ ಹಾಗೂ ಪ್ರಧಾನ ಪೋಷಕಾಂಶಗಳನ್ನು ಹೊಂದಿರುತ್ತದೆ. ಸಿಂಪರಣೆ ಮಾಡುವುದರಿಂದ ಇಳುವರಿ ಹೆಚ್ಚಿಸಬಹುದು ಎಂದರು.

ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥ ಡಾ. ಟಿ.ಎನ್. ದೇವರಾಜ್ ಅವರು ಮಾತನಾಡಿ, ಆಧುನಿಕ ತಂತ್ರಜ್ಞಾನಗಳನ್ನು ಬಳಸಿ ಆದಾಯ ಮಾಡಿಕೊಳ್ಳುವುದು ಸೂಕ್ತ ಎಂದು ಅಭಿಪ್ರಾಯ ತಿಳಿಸಿದರು.

ಮಣ್ಣು ವಿಜ್ಞಾನಿ ಎಚ್.ಎಮ್. ಸಣ್ಣ ಗೌಡರ್ ಮಾತನಾಡಿ, ಕಾಯಿ ಕೊರಕದ ಬಾಧೆ ಹೆಚ್ಚಾದಲ್ಲಿ Emmactin benzoate 0.5 ಗ್ರಾಂ ಪ್ರತಿ ಲೀಟರ್ ನೀರಿನಲ್ಲಿ ಕರಗಿಸಿ ಸಿಂಪರಣೆ ಮಾಡುವುದು ಸೂಕ್ತ ಎಂದು ತಿಳಿಸಿದರು

## ಗಡಿ ದಾಟಿ ಬಂದಿದ್ದ ಪಾಕ್‌ನ ಆರು ಯುವಕರ ಹಸ್ತಾಂತರ

ಅಟ್ಟಾರಿ, ಜ. 9 – ಆಕಸ್ಮಿಕವಾಗಿ ಪಂಜಾಬ್‌ನಲ್ಲಿರುವ ಅಂತರ ರಾಷ್ಟ್ರೀಯ ಗಡಿಯನ್ನು ದಾಟಿ ಬಂದಿದ್ದ ಪಾಕಿಸ್ತಾನದ ಆರು ಯುವಕರನ್ನು ಪಾಕಿಸ್ತಾನದ ಸೈನ್ಯಕ್ಕೆ ಹಸ್ತಾಂತರಿಸಲಾಗಿದೆ ಎಂದು ಗಡಿ ಭದ್ರತಾ ಪಡೆ ತಿಳಿಸಿದೆ. ಘಟನೆಯ ಬಗ್ಗೆ ಪಾಕಿಸ್ತಾನ ಸೈನ್ಯದ ಬಳಿ ಪ್ರತಿಭಟನೆ ದಾಖಲಿಸಲಾಗಿದೆ ಹಾಗೂ ಸಂಜೆ 5.30ರ ಸಮಯದಲ್ಲಿ ಯುವಕರನ್ನು ಹಸ್ತಾಂತರಿಸಲಾಗಿದೆ ಎಂದು ಗಡಿ ಭದ್ರತಾ ಪಡೆ ತಿಳಿಸಿದೆ.


**ಸೈಟ್‌ಗಳು ಮಾರಾಟಕ್ಕೆ ಇವೆ**
ವಾಜಪೇಯಿ ಬಡಾವಣೆಯಲ್ಲಿ 30x40 ಪಶ್ಚಿಮ, 30x50 ಪೂರ್ವ, 30x40 ಪೂರ್ವ, ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ, 40x60 ಉತ್ತರ
ಶಾಮನೂರು ಧನ್ಯಕುಮಾರ್ 97415 62589
ಸ್ವಾಮಿ ಏಜೆಂಟ್, ವಿದ್ಯಾನಗರ 97421 44715

**ಸೈಟುಗಳು/ಮನೆಗಳು ಮಾರಾಟಕ್ಕಿವೆ**
ಶಿವಪಾರ್ವತಿ ಬಡಾವಣೆ, 38½×40 ಪಶ್ಚಿಮ, 30x40 ಪೂರ್ವ ಮನೆ, ನಿಜಲಿಂಗಪ್ಪ ಬಡಾವಣೆ 30x40 ಉತ್ತರ ಮನೆ, ಮಲ್ಲಿಕಾರ್ಜುನ್ ಬಡಾವಣೆ, ವಾಜಪೇಯಿ ಬಡಾವಣೆ 34x40 ಪೂರ್ವ, 30x40 ಪೂರ್ವ, 30x50 ಪಶ್ಚಿಮ (ಶಾಮನೂರು) 30x55 ಪೂರ್ವ ಸೈಟ್
ಕೊಡುವುದಕ್ಕೂ, ತೆಗೆದುಕೊಳ್ಳುವುದಕ್ಕೂ ಸಂಪರ್ಕಿಸಿ ಸುರೇಶ್, 95911 60520
ಐಗೂರು ವಿಜಯ್‌ಕುಮಾರ್, 99457 02495

**ಕರ್ನಾಟಕ ಗೃಹಮಂಡಳಿಯಲ್ಲಿ**
50x80 South, 50x80 west, 50x80 East, 40x60 East, 40x60 North, 40x50 North ಸೈಟ್‌ಗಳು ಮಾರಾಟಕ್ಕಿವೆ.
ಐನಳ್ಳಿ ಚನ್ನಬಸಪ್ಪ, ಏಜೆಂಟ್ 99166 12110

**ಸೈಟುಗಳು ಮಾರಾಟಕ್ಕಿವೆ**
ನಿಜಲಿಂಗಪ್ಪ ಬಡಾವಣೆಯಲ್ಲಿ 40x60, ಶಿವಪಾರ್ವತಿ ಬಡಾವಣೆಯಲ್ಲಿ 30X50, 40X40, 40X60, ಆವರಗೆರೆ ಉತ್ತಮಚಂದ್ ಬಡಾವಣೆಯಲ್ಲಿ 30X60 ಅಳತೆಯ ಸೈಟುಗಳು ಮಾರಾಟಕ್ಕಿವೆ.
78996 81386, 99866 17483

**ಹಾಲಿನ ಡೈರಿ ಬಾಡಿಗೆಗೆ ಸಿಗುತ್ತದೆ**
ನಾಗನೂರಿನಲ್ಲಿ ಹಾಲಿನ ಡೈರಿ ಬಾಡಿಗೆಗೆ ಸಿಗುತ್ತದೆ. ಸಂಪರ್ಕಿಸಿ :
ಮೊ. : 94489 66128

**ಶ್ರೇಯಸ್ ಉದರ, ಲಿವರ್, ಕರುಳು ರೋಗಗಳ ಚಿಕಿತ್ಸಾ ಕೇಂದ್ರ**
**ಡಾ. ಇ.ಆರ್. ಸಿದ್ದೇಶಿ**
M.D. (MED), D.M. (Gastro), F.A.C.G. (USA), P.G.C.C. Diab. Care (Aust)
ಉದರ, ಲಿವರ್, ಕರಳು, ಪ್ಯಾನ್‌ಕ್ರಿಯಾಸ್, ಎಂಡೋಸ್ಕೋಪಿ, ಸಕ್ಕರೆ ಕಾಯಿಲೆ ತಜ್ಞರು
8th Main, 8th Cross, P.J. Extension, Davangere.
08192-237325, 94837 23166

**ಸೈಟ್‌ಗಳು ಮಾರಾಟಕ್ಕೆ ಇವೆ**
ಡಾಲರ್ಸ್ ಕಾಲೋನಿಯಲ್ಲಿ 30x50 ದಕ್ಷಿಣ ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ 20x30 ದಕ್ಷಿಣ, ಬನಶ್ರೀ ಬಡಾವಣೆಯಲ್ಲಿ 30x40 ದಕ್ಷಿಣ, ಆಂಜನೇಯ ಬಡಾವಣೆಯಲ್ಲಿ 40x60 ದಕ್ಷಿಣ
ಸ್ವಾಮಿ ಏಜೆಂಟ್, ವಿದ್ಯಾನಗರ 97421 44715

**ಮನೆ ಮಾರಾಟಕ್ಕಿದೆ**
ಕುಂದುವಾಡ ರಸ್ತೆಯಲ್ಲಿ ಬಂಟ್ಸ್ ಸಮುದಾಯ ಭವನದ ಹತ್ತಿರ 30 x 40 ಅಳತೆಯ ಹೊಸ ಮನೆ ಮಾರಾಟಕ್ಕಿದೆ.
ಮೊ. 78996 81386 99866 17483

**ಶಾಮನೂರು ಹತ್ತಿರ ಡಾಲರ್ಸ್ ಕಾಲೋನಿಯಲ್ಲಿ ಸೈಟ್‌ಗಳು ಮಾರಾಟಕ್ಕಿವೆ**
32x30 South, 32x30 South west corner 32x45 East 30x63 corner
ಐನಳ್ಳಿ ಚನ್ನಬಸಪ್ಪ, ಏಜೆಂಟ್ 99166 12110

**ಮನೆ ಮಾರಾಟಕ್ಕಿದೆ**
3 BHK Duplex ಪೂರ್ವಾಭಿಮುಖ 18x69 ಅಡಿ. 5ನೇ ಮುಖ್ಯ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.
9341131565, 9008777667
9980899719, 9845607444

**MCC 'A' & 'B' ನಲ್ಲಿ ಮನೆ, ಸೈಟ್ ಮಾರಾಟಕ್ಕಿವೆ**
ಸಿದ್ದವೀರಪ್ಪ, ಆಂಜನೇಯ -ಮನೆ ಸೈಟ್, ಪಿ.ಜೆ. ಬಡಾವಣೆ- ಮನೆ, ಸೈಟ್, ಬನಶಂಕರಿ, ಡಾಲರ್ಸ್, ಶಿವ ಪಾರ್ವತಿ- ಸೈಟ್‌ಗಳು, ದೇವರಾಜ ಅರಸ್, ರಶ್ಮಿ- ಸೈಟ್‌ಗಳು, ಶಾಮನೂರು ರೋಡ್- ಕಮರ್ಷಿಯಲ್ ಸೈಟ್
76765 58585 (ವೀರೇಶ್)

**3 BHK ಮನೆ ಬಾಡಿಗೆಗೆ ಇದೆ**
ದಾವಣಗೆರೆ ವಿದ್ಯಾನಗರ 2ನೇ ಬಸ್‌ಸ್ಟಾಪ್ ಹತ್ತಿರ, 2A ಮೇನ್, 8ನೇ ಕ್ರಾಸ್ ತರಳಬಾಳು ಬಡಾವಣೆಯಲ್ಲಿ ಮೊದಲನೇ ಮಹಡಿಯಲ್ಲಿ ಉತ್ತರಾಭಿಮುಖದ 3 ಬೆಡ್ ರೂಂ ಮನೆ ಬಾಡಿಗೆಗೆ ಇದೆ. ಬೋರ್, ಕಾರ್ಪೋರೇಷನ್ ನೀರು ಹಾಗೂ ಕಾರ್ ಪಾರ್ಕಿಂಗ್ ಸೌಲಭ್ಯವಿದೆ. ಆಸಕ್ತರು ಸಂಪರ್ಕಿಸಿ:
99026 88442

**ಬೇಕಾಗಿದ್ದಾರೆ**
ಹರಿಹರದಲ್ಲಿನ ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ
ಸಂಪರ್ಕಿಸಿ: 70195 88900 95388 70257

**ಸೇಲ್ಸ್ ಬಾಯ್ಸ್/ ಸೇಲ್ಸ್ ಗರ್ಲ್ ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಅನುಭವವುಳ್ಳವರಿಗೆ ಆದ್ಯತೆ.
ಮಾರುತಿ ಟೆಕ್ಸ್‌ಟೈಲ್ಸ್ ಮಾರುತಿ ಗಾರ್ಮೆಂಟ್ಸ್
ವಿದ್ಯಾರ್ಥಿ ಭವನ, ಹದಡಿ ರಸ್ತೆ, ದಾವಣಗೆರೆ.
ಫೋ: 08192-231058
63643 15474, 76764 19329

**ಮನೆ ಬಾಡಿಗೆಗೆ ಇದೆ**
ತರಳಬಾಳು ಬಡಾವಣೆ 7ನೇ ಕ್ರಾಸ್ ವಿದ್ಯಾನಗರ, 2ನೇ ಬಸ್ ಸ್ಟ್ಯಾಂಡ್ ಹತ್ತಿರ ವಾಸ್ತು ಪ್ರಕಾರ ಮತ್ತು ಕಾರ್ಪೋರೇಷನ್ ಹಾಗೂ ಬೋರ್ ವೆಲ್ ನೀರಿನ ವ್ಯವಸ್ಥೆಯಿರುವ 2 ಬೆಡ್‌ರೂಂ ಮನೆ ಮೊದಲನೇ ಮಹಡಿ ಹಾಗೂ ಸಿಂಗಲ್ ಬೆಡ್‌ರೂಂ ಮನೆ 2ನೇ ಮಹಡಿಯಲ್ಲಿ ಬಾಡಿಗೆಗೆ ಇದೆ.
94483 19302

**ಮಹಿಳೆ ಬೇಕಾಗಿದ್ದಾರೆ**
ಎಂ.ಸಿ.ಸಿ. 'ಬಿ' ಬ್ಲಾಕ್ ನಲ್ಲಿರುವ ವೈದ್ಯರ ಮನೆಯಲ್ಲಿ ಅಡುಗೆ ಮಾಡಲು ಲಿಂಗಾಯಿತ ಸಮಾಜದ ಮಹಿಳೆ ಬೇಕಾಗಿದ್ದಾರೆ. ಸಂಪರ್ಕಿಸಿ :
ಮೊ. 78929 94856

**ಬೇಕಾಗಿದ್ದಾರೆ**
ಸೂಪರ್ ಮಾರ್ಕೆಟ್‌ನಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
83103 14540

**ಬೇಕಾಗಿದ್ದಾರೆ**
ITI Mechanical Pass/ Fail ಆದವರು ಕೆಲಸಕ್ಕೆ ಬೇಕಾಗಿದ್ದಾರೆ
ಸಂಪರ್ಕಿಸಿ: 88619 45934

**ಮಹಿಳೆ ಬೇಕಾಗಿದ್ದಾರೆ**
ಮನೆ ಕೆಲಸ ಮಾಡಿಕೊಂಡು ಹಗಲು ಅಥವಾ ರಾತ್ರಿ ಅಥವಾ 24 ಗಂಟೆಯೂ ವಯಸ್ಸಾದವರನ್ನು ನೋಡಿಕೊಳ್ಳಲು ಹೆಣ್ಣುಮಕ್ಕಳು ಬೇಕಾಗಿದ್ದಾರೆ. *ಸಂಪರ್ಕಿಸಿ :*
98440-63507

**ತಕ್ಷಣ ಬೇಕಾಗಿದ್ದಾರೆ**
ವೇಟರ್ಸ್, ಕ್ಯಾಪ್ಟನ್, ಕ್ಲೀನಿಂಗ್ ಆಕರ್ಷಕ ಸಂಬಳ ನೀಡಲಾಗುವುದು.
93809 74740

**ಬೇಕಾಗಿದ್ದಾರೆ**
ಪ್ಯೂನ್-2 ಪೋಸ್ಟ್, ಮಹಿಳೆ/ಪುರುಷ
ಮೃತ್ಯುಂಜಯ ಸ್ಕೂಲ್ ಆಫ್ ನರ್ಸಿಂಗ್
ಚರ್ಚ್ ರಸ್ತೆ, ದಾವಣಗೆರೆ.
97432 10028, 91139 25620

**ಮನೆ ಬಾಡಿಗೆಗೆ / ಭೋಗ್ಯಕ್ಕಿದೆ**
ಗ್ರೌಂಡ್ ಫ್ಲೋರ್ ನಲ್ಲಿ 3 BHK ಉತ್ತರ ದಿಕ್ಕಿನ ಮುಂಬಾಗಿಲುವುಳ್ಳ ಮನೆ ಬಾಡಿಗೆಗಿದೆ ಹಾಗೂ ಕಾರ್ ಪಾರ್ಕಿಂಗ್, ಬೋರ್- ಕಾರ್ಪೋರೇಷನ್ ನೀರಿನ ಸೌಲಭ್ಯವಿರುವ ಮನೆ. ನಂ. 651, ಶ್ರೀ ಕಟೀಲು, 6ನೇ ಕ್ರಾಸ್, ಶ್ರೀನಿವಾಸ ನಗರ, ಹದಡಿ ರಸ್ತೆ, ದಾವಣಗೆರೆ
70194 27951, 93410 14488

**ಮನೆ ಲೀಜ್‌ಗೆ ಇದೆ**
ನಿಜಲಿಂಗಪ್ಪ ಬಡಾವಣೆ, 2ನೇ ಮೇನ್, 5ನೇ ಕ್ರಾಸ್‌ನಲ್ಲಿ, 2ನೇ ಮಹಡಿಯಲ್ಲಿ ಸಂಪೂರ್ಣ ಸುಸಜ್ಜಿತವಾದ ಮನೆ ಲೀಜ್‌ಗೆ ಇದೆ.
98446 02999

**ಬೇಕಾಗಿದ್ದಾರೆ**
ಅನುಭವವುಳ್ಳ ಜ್ಯೂಸ್ ಮೇಕರ್ ಬೇಕಾಗಿದ್ದಾರೆ.
ಮಧುರ ಆಫೀಸ್
ಕೆಟಿಜೆ ನಗರ 11ನೇ ಕ್ರಾಸ್, ಹದಡಿ ರೋಡ್, ದಾವಣಗೆರೆ.
94480 28276 70198 33126

**1BHK ಮನೆ ಬಾಡಿಗೆಗೆ**
ಶಿವಕುಮಾರಸ್ವಾಮಿ ಬಡಾವಣೆ 2ನೇ ಹಂತ, 4ನೇ ಮೇನ್, 4ನೇ ಕ್ರಾಸ್‌ನಲ್ಲಿ (# 678/10-A) ಮೊದಲನೇ ಮಹಡಿಯಲ್ಲಿ 1BHK ಮನೆ ಬಾಡಿಗೆಗೆ ಇದೆ. ಆಸಕ್ತರು ಸಂಪರ್ಕಿಸಿ:
ಎ.ಜಿ. ಪ್ರಭುಶಂಕರ್ 91640 41134

**ಮನೆ ಮಾರಾಟಕ್ಕಿದೆ**
ಆಧುನಿಕ ಮತ್ತು ವಾಸ್ತು ವ್ಯವಸ್ಥೆ ಇರುವ 2 ಬೆಡ್ ರೂಂ , 30x50ರ ಸೈಟ್‌ನಲ್ಲಿ ಪಶ್ಚಿಮ ದಿಕ್ಕಿನ ಹೊಸ ಮನೆ ಬಾಲಾಜಿ ಬಡಾವಣೆಯಲ್ಲಿ ಮಾರಾಟಕ್ಕಿದೆ.
98448 82366

**ಮಾರಾಟಕ್ಕಿದೆ**
ಅಲ್ಯೂಮಿನಿಯಂ ಪಾರ್ಟಿಷನ್ ಮಾರಾಟಕ್ಕಿದೆ. ಟೈಲರಿಂಗ್ ಜಿಗ್‌ಜಾಗ್ ಮಿಷನ್ ಮಾರಾಟಕ್ಕಿದೆ.
99016 36693

**ಬೇಕಾಗಿದ್ದಾರೆ**
ಮನೆಯಲ್ಲಿ ಅಡುಗೆ ಕೆಲಸಕ್ಕೆ ಲಿಂಗಾಯಿತ ಮಹಿಳೆ ಬೇಕಾಗಿದ್ದಾರೆ.
ಸಂಪರ್ಕಿಸಿ: 95381 30333

**ಮನೆ ಬಾಡಿಗೆಗೆ ಇದೆ**
ಫಸ್ಟ್ ಫ್ಲೋರ್, ಸಿಂಗಲ್ ಬೆಡ್ ರೂಂ ಇರುವ ಮನೆ ಬಾಡಿಗೆಗೆ ಇದೆ. ಎಸ್.ಎಸ್. ಲೇಔಟ್, ಬಿ ಬ್ಲಾಕ್, ರಿಂಗ್ ರೋಡ್ ಸರ್ಕಲ್ ಹತ್ತಿರ, 1ನೇ ಮೇನ್, 1ನೇ ಕ್ರಾಸ್, ನಂ. 1968/37. ದಾವಣಗೆರೆ.
98800 30505

**ಮನೆ ಮಾರುವುದಿದೆ**
ಜಯನಗರದಲ್ಲಿ ಈಗಾಗಲೇ ಲೀಸ್‌ನಲ್ಲಿರುವ ಪಶ್ಚಿಮ ದಿಕ್ಕಿನ (ಕಾರ್ನರ್) 30x40 ಅಳತೆಯ ಎರಡು ಅಂತಸ್ತಿನ ಸುಸಜ್ಜಿತ ಹೊಸ ಮನೆ ಮಾರುವುದಿದೆ ಆಸಕ್ತರು ಸಂಪರ್ಕಿಸಿ:
91104 29654

**2 BHK House for Rent**
East Face, Ground Floor 2581/5, 4th Main, North Sridhar Aquarium Cross M.C.C. 'A' Block, Davanagere-4
95356 59259 94489 24513

**ಕೆಲಸಕ್ಕೆ ಬೇಕಾಗಿದ್ದಾರೆ**
Sha J Kapurchand & Sons
ಕಂಪ್ಯೂಟರ್ ಕೆಲಸಕ್ಕೆ ಬೇಕಾಗಿದ್ದಾರೆ. ಮಹಿಳೆಯರಿಗೆ ಮಾತ್ರ. PUC/B.Com./B.A.
Phone : 72043 01412
27, ವಿಜಯಲಕ್ಷ್ಮಿ ರೋಡ್, ಗಡಿಯಾರ ಕಂಬದ ಹತ್ತಿರ, ದಾವಣಗೆರೆ.

**ಮನೆ ಬಾಡಿಗೆಗೆ ಇದೆ**
ಸಿಂಗಲ್ ಬೆಡ್‌ರೂಂ ಮನೆ, 2nd Floor ಮನೆ ಮತ್ತು ವಾಸ್ತು ಪ್ರಕಾರ ಇರುವ ಮನೆ ಹಾಗೂ ನೀರಿನ ಸೌಕರ್ಯವಿರುವ ಮನೆ. ನಂ. 1700, 18ನೇ ಕ್ರಾಸ್, 3ನೇ ಮೇನ್, ಕೆಟಿಜೆ ನಗರ, ದಾವಣಗೆರೆ. ವಿಚಾರಿಸಿ :
96322 69657, 81051 24903

**ಬೆಕ್ಕಿನ ಮರಿ ಬೇಕಾದಲ್ಲಿ ಕರೆ ಮಾಡಿ**
63635 52021 99165 00222

**ಮನೆ ಬಾಡಿಗೆಗೆ**
ದಾವಣಗೆರೆ ನಿಜಲಿಂಗಪ್ಪ ಬಡಾವಣೆ ಅಮೃತಾನಂದಮಯಿ ಶಾಲೆ ಹಿಂಭಾಗದ ಗೇಟ್ ಕಾರ್ನರ್ ಮೊದಲನೇ ಮಹಡಿಯಲ್ಲಿ 2 BHK ಮನೆ ಬಾಡಿಗೆಗೆ ಇದೆ
99643 28038

**ಮನೆ ಮಾರಾಟಕ್ಕಿದೆ**
ದಾವಣಗೆರೆಯ ಹೊಸ ಸಾಯಿಬಾಬಾ ದೇವಸ್ಥಾನದ ಎದುರುಗಡೆಯಿರುವ ಎಸ್. ಎಸ್. ಹೈಟೆಕ್ ಬಡಾವಣೆಯಲ್ಲಿ ನೂತನವಾಗಿ ಕಟ್ಟಿರುವ 30x50 ಅಳತೆಯ ಪಶ್ಚಿಮ ಮುಖದ 3 ಬೆಡ್ ರೂಂ ಮನೆ ಮಾರಾಟಕ್ಕಿದೆ. ಆಸಕ್ತರು ಸಂಪರ್ಕಿಸಿ:
94489 29623

**ಮನೆ ಬಾಡಿಗೆ / ಲೀಸ್‌ಗೆ ಇದೆ**
ವಿದ್ಯಾನಗರದ ಮೊದಲನೇ ಬಸ್ ಸ್ಟಾಪ್ ಹತ್ತಿರ, 3ನೇ ಕ್ರಾಸ್‌ನಲ್ಲಿ 2 ಬೆಡ್ ರೂಂ ಮನೆ ಮತ್ತು ಪ್ರತ್ಯೇಕ ರೂಂ ಬಾಡಿಗೆಗೆ ಇದೆ. ಸಂಪರ್ಕಿಸಿ
99808 22722 99865 02306

**ಹುಡುಗರು ಕೆಲಸಕ್ಕೆ ಬೇಕಾಗಿದ್ದಾರೆ**
ಹರ್ಷ ಹಾರ್ಡ್‌ವೇರ್ ಅಂಡ್ ಪೇಂಟ್ಸ್
ಸುಭಾಷ್ ರೋಡ್, ಅಶೋಕ ಚಿತ್ರಮಂದಿರದ ಎದುರು, ದಾವಣಗೆರೆ. ದೂರವಾಣಿ ಸಂಖ್ಯೆ
08192 254787

**ಮನೆ ಬಾಡಿಗೆಗೆ ಇದೆ**
ಮೊದಲನೇ ಮಹಡಿಯಲ್ಲಿ 2 ಬೆಡ್‌ರೂಂ, ಬೋರ್‌ವೆಲ್ ಹಾಗೂ ಕಾರ್ಪೋರೇಷನ್ ನೀರು ಇರುವ ಮನೆ 4ನೇ ಮೇನ್, 7ನೇ ಕ್ರಾಸ್ ವಿದ್ಯಾನಗರ ಪಾರ್ಕ್ ಪಕ್ಕ ಇರುವ ಮನೆ ಖಾಲಿ ಇದೆ.
95917 47333 97416 78794

**GOWDOWN FOR RENT AT APMC**
17ft height, 27x95 size
87470 06444 94480 13082

**2 BHK ಮನೆ ಬಾಡಿಗೆಗೆ ಇದೆ**
ನಂ. 600, 6ನೇ ಮೇನ್, 6ನೇ ಕ್ರಾಸ್, ಪಿ.ಜೆ. ಬಡಾವಣೆ, ದಾವಣಗೆರೆ. ಮೊದಲನೇ ಮಹಡಿಯಲ್ಲಿ 2 BHK ಮನೆ ಬಾಡಿಗೆಗೆ ಇದೆ. ಸಸ್ಯಹಾರಿಗಳಿಗೆ ಮಾತ್ರ. ಸಂಪರ್ಕಿಸಿರಿ :
93539 35985

**House For Rent Long Term & Short Term Available**
with all Amenities cot, bed, fan, light, UPS, internet, T.V, Dining table, Geyser, Kitchen, Stove, Gas etc.
94800 73451

**ಸಂಘ ಸಂಸ್ಥೆಗಳ, ಟ್ರಸ್ಟ್, GST ರಿಜಿಸ್ಟ್ರೇಷನ್ & ನವೀಕರಣ, ಆಡಿಟ್ ಮಾಡಿಕೊಡುತ್ತೇವೆ.**
94838 62779

**ಶಿಕ್ಷಕಿಯರು ಬೇಕಾಗಿದ್ದಾರೆ**
BA. B.Ed , B.Sc B.Ed , D.Ed ಆದ ಶಿಕ್ಷಕಿಯರು ಬೇಕಾಗಿದ್ದಾರೆ.
99800 32257 93411 19195

**ಮನೆ ಬಾಡಿಗೆಗೆ ಇದೆ**
ಶಾಮನೂರು ರಸ್ತೆಯ ಎಸ್. ಎಸ್. ಮಾಲ್ ಎದುರು ಮತ್ತು ಬಾಪೂಜಿ ಶಾಲೆ ಹಿಂಭಾಗದಲ್ಲಿ 2 ಬೆಡ್ ರೂಂ, ಕಾರ್ಪೋರೇಷನ್ ಮತ್ತು ಬೋರ್ ನೀರು, ಕಾರ್ ಪಾರ್ಕಿಂಗ್ ಸೌಲಭ್ಯ ಇರುವ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ :
94811-61164

**ಬೇಕಾಗಿದ್ದಾರೆ**
ಡ್ಯೂಟಿ ಡಾಕ್ಟರ್, ನರ್ಸ್‌ಗಳು ಫಾರ್ಮಸಿ, ಆಯಾ
ಸಂಪರ್ಕಿಸಿ: 96869 99260

**ಬೇಕಾಗಿದ್ದಾರೆ**
ದಾವಣಗೆರೆ ಹತ್ತಿರ ಬೇತೂರು ಮತ್ತು ನಲ್ಲೂರಿನಲ್ಲಿ ಕೆಲಸ ಮಾಡಲು ಸೆಕ್ಯೂರಿಟೀಸ್ ಮತ್ತು ರೂಂ ಬಾಯ್ಸ್ ಹಾಗೂ ಲಾಡ್ಜ್‌ನಲ್ಲಿ ಮ್ಯಾನೇಜರ್ ಕೆಲಸಕ್ಕೆ ಬೇಕಾಗಿದ್ದಾರೆ. ಊಟದ ವ್ಯವಸ್ಥೆ ಇರುತ್ತದೆ. ಆಕರ್ಷಕ ಸಂಬಳ. ಕೂಡಲೇ ಸಂಪರ್ಕಿಸಿ :
74113 07071, 98806 48207

**ಶಿಕ್ಷಕ/ಶಿಕ್ಷಕಿಯರು ಬೇಕಾಗಿದ್ದಾರೆ**
ದೇವರಾಜ ಅರಸ್ ಬಡಾವಣೆ 'ಸಿ' ಬ್ಲಾಕ್, 6ನೇ ಕ್ರಾಸ್, ಕೊಂಡಜ್ಜಿ ರೋಡ್, ಹೊಸ ಆರ್.ಟಿ.ಓ. ಕಚೇರಿ ಹಿಂಭಾಗದಲ್ಲಿರುವ **ನಂದಗೋಕುಲ ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆಗೆ BA, B.Ed. ಹಾಗೂ MA, B.Ed** ತರಬೇತಿ ಹೊಂದಿದ ಕನ್ನಡ ಮತ್ತು ಹಿಂದಿ ವಿಷಯದ ಶಿಕ್ಷಕರು ಬೇಕಾಗಿದ್ದಾರೆ.
Mob. 99640 17729

**DELUXE ROOMS FOR RENT**
Boys Hostel Road, Sai Balaji Towers Rocking Foods above.
94486-68265 94498-24866

**JOBS**
MCS ACADEMY Training & Placement Cell
98444 92888

**ಬೇಕಾಗಿದ್ದಾರೆ**
ತಿಂಗಳ ಸಂಬಳ 6000 ಮೇರೆಗೆ ಕಾರ್ ಡ್ರೈವರ್ ಬೇಕಾಗಿದ್ದಾರೆ (out side) All over Karanataka Business Tour (Sunday Holiday) ಯಾವುದೇ ತರಹದ ಬ್ಯಾಟಾ ಇರುವುದಿಲ್ಲ ಮತ್ತು ಊಟ, ತಿಂಡಿ ಪ್ರತ್ಯೇಕ ಕೊಡಲಾಗುವುದು (5 ವರ್ಷಗಳ ಅನುಭವ ಇರಬೇಕು) ಸಂಪರ್ಕಿಸಿರಿ
98442 33557

**ಸೈಟು ಮಾರಾಟಕ್ಕಿದೆ**
ಆವರಗೆರೆ, ಉತ್ತಮ್ ಲೇ ಔಟ್, ಸರ್ವೆ ನಂ. 277, ಅಳತೆ 48.5x71=3443 ಚದುರಡಿ, ಸೈಟ್ ನಂ. 20ರಲ್ಲಿರುವ (ಪಶ್ಚಿಮ ಮುಖ) ಸೈಟು ಮಾರಾಟಕ್ಕಿದೆ. ಸಂಪರ್ಕಿಸಿ :
94816 49329

**ಮನೆ ಲೀಸ್‌ಗೆ ಇದೆ**
ನಂ. 2368/1, ಜೀವನ್ ಬಿಮಾ ನಗರ, ಪಂಪ್ ಹೌಸ್ ರಸ್ತೆ, 30x40 ಗ್ರೌಂಡ್ ಫ್ಲೋರ್, 2 ಬಿಹೆಚ್‌ಕೆ, ಮುನ್ಸಿಪಲ್, ಬೋರ್ ನೀರಿನ ಸೌಕರ್ಯವಿದ್ದು ಲೀಸ್‌ಗೆ ಇದೆ. ಸಂಪರ್ಕಿಸಿ :
94826 68578, 94837 72698

**DIPLOMA & BE TUITIONS For All Branches**
ಸಮೃದ್ಧಿ ಕೋಚಿಂಗ್ ಅಕಾಡೆಮಿ
81472 62361

**ಮನೆ ಬಾಡಿಗೆಗೆ/ಲೀಸ್ ಗಿದೆ**
ಸರಸ್ವತಿ ಬಡಾವಣೆ, ಜಯನಗರ, ಶಿವಕುಮಾರಸ್ವಾಮಿ ಬಡಾವಣೆ, ಶಕ್ತಿ ನಗರ, ಆಂಜನೇಯ ಬಡಾವಣೆ, ಸಿದ್ದವೀರಪ್ಪ ಬಡಾವಣೆಯಲ್ಲಿ ಮನೆಗಳು ಬಾಡಿಗೆಗೆ/ಲೀಸ್ ಗೆ ಇವೆ. ಶಿವಕುಮಾರಸ್ವಾಮಿ ಬಡಾವಣೆಯಲ್ಲಿ ಮನೆಗಳು ಬಾಡಿಗೆಗಿವೆ.
99726-75759

**ಮನೆ ಬಾಡಿಗೆಗೆ ಇದೆ**
ಮೊದಲನೆಯ ಮಹಡಿಯಲ್ಲಿ 2 ಬೆಡ್‌ರೂಂ ಮನೆ ಬಾಡಿಗೆಗೆ ಇದೆ. ಕೆ.ಬಿ. ಬಡಾವಣೆ, ಕಿರುವಾಡಿ ಲೇಔಟ್ ಜೈನ್ ಮಂದಿರ ಹತ್ತಿರ, ದಾವಣಗೆರೆ
70198 96845

**ಮನೆ ಬಾಡಿಗೆಗೆ ಇದೆ**
ಸಿದ್ದವೀರಪ್ಪ ಬಡಾವಣೆ 9ನೇ ಕ್ರಾಸ್, ಭದ್ರಾ ಕಾಲೇಜ್ ಹಿಂಭಾಗ, 1BHK ಮನೆ ಬಾಡಿಗೆಗೆ ಇದೆ. (ಸಸ್ಯಹಾರಿಗಳಿಗೆ ಮಾತ್ರ)
90080 55813

**State Bank of India ಗ್ರಾಹಕರ ಸೇವಾ ಕೇಂದ್ರದಲ್ಲಿ**
ಜನ್‌ಧನ್ ಖಾತೆ ಮಾಡಲಾಗುತ್ತದೆ ('0' Account Open)
# 264/1 ಮಹಾರಾಜ ಪೇಟೆ, ವಿಠ್ಠಲ ಮಂದಿರ ಹತ್ತಿರ, ದಾವಣಗೆರೆ.
99806 10005

**ಬೇಕಾಗಿದ್ದಾರೆ**
ಟ್ರಾಕ್ಟರ್ ಶೋ ರೂಂನಲ್ಲಿ ಕೆಲಸ ಮಾಡಲು ITI ಡೀಸೆಲ್ ಮೆಕ್ಯಾನಿಕಲ್ or ಫಿಟ್ಟರ್ ಆಗಿರುವ ಅಭ್ಯರ್ಥಿಗಳು ಬೇಕಾಗಿದ್ದಾರೆ. (ಸೇಲ್ಸ್ ಮತ್ತು ಸರ್ವೀಸ್‌ಗೆ)
ಶಾರದಾ ಆಟೋಸ್
# 337/59, ಗಣೇಶ್ ಲೇಔಟ್, KSRTC ಬಸ್ ಸ್ಟ್ಯಾಂಡ್ ಹತ್ತಿರ, ದಾವಣಗೆರೆ-3
08192-236457

**ಶ್ರೀ ಮೃತ್ಯುಂಜಯ ಸ್ಕೂಲ್ ಆಫ್ ನರ್ಸಿಂಗ್ & ಇನ್‌ಸ್ಟಿಟ್ಯೂಟ್ ಆಫ್ ಪ್ಯಾರಾಮೆಡಿಕಲ್ ಸೈನ್ಸಸ್**
ಪ್ರವೇಶ ಪ್ರಾರಂಭ : ಜಿ.ಎನ್.ಎಂ. (GNM), ಲ್ಯಾಬ್ (LAB), ಹೆಲ್ತ್ (Health) ಓಟಿ (OT)
ಪಿ.ಜೆ. ಬಡಾವಣೆ, ದಾವಣಗೆರೆ.
97432 10028, 94488 73558

**ಮಾರಾಟಕ್ಕೆ**
ಶಕ್ತಿನಗರ 26x40 ಮನೆ (ಪಶ್ಚಿಮ), ಸಿದ್ದವೀರಪ್ಪ ಬಡಾವಣೆ 30x40 ಡುಪ್ಲೆಕ್ಸ್ (ಪೂರ್ವ) ವಿನಾಯಕ ಬಡಾವಣೆ 30x50 ಡುಪ್ಲೆಕ್ಸ್ (ಪೂರ್ವ) ಮನೆಗಳು ಹಾಗೂ ಶಕ್ತಿನಗರ 30x40 (ಪೂರ್ವ) ಸೈಟ್, ಎಸ್.ಎಸ್. ಲೇಔಟ್ 30x40 ಮನೆ, ಬಾಲಾಜಿ ಲೇಔಟ್ 30x50 (ಉತ್ತರ) ಸೈಟ್, ಚಿಕ್ಕಮ್ಮಣಿ 20x30 3 ಫ್ಲೋರ್ (ಪೂರ್ವ) ಮನೆ ಮಾರಾಟಕ್ಕಿವೆ.
98804 40602

**ಸೈಟ್‌ಗಳು ಮಾರಾಟಕ್ಕೆ ಇವೆ**
ಅಶೋಕ ನಗರ (ಯರಗುಂಟೆ) ಕರಿಬಸಪ್ಪ ಗದ್ದುಗೆ ಹತ್ತಿರ 30x40 =1200 ಅಡಿಗಳು ಕೆಂಪು ಮಣ್ಣು, ಪಶ್ಚಿಮ ಮುಖ,. ಸುಬ್ರಮಣ್ಯ ನಗರ 30x40= 1200 ಅಡಿ, ಪೂರ್ವಮುಖ
ಸಂಪರ್ಕಿಸಿ: 80505 91277

**ಬೇಕಾಗಿದ್ದಾರೆ**
ಲಾಡ್ಜ್‌ನಲ್ಲಿ ಹಗಲು ಮತ್ತು ರಾತ್ರಿ ಪ್ರತ್ಯೇಕ ಪಾಳೆಯಗಳಲ್ಲಿ ರೂಂ ಬಾಯ್ ಮತ್ತು ಸೂಪರ್‌ವೈಸರ್ ಕೆಲಸಕ್ಕೆ ಬೇಕಾಗಿದ್ದಾರೆ. *ಸಂಪರ್ಕಿಸಿ :*
98440-63507

**ವಾಟರ್ ಪ್ರೂಫಿಂಗ್**
ನಿಮ್ಮ ಮನೆ, ಬಿಲ್ಡಿಂಗ್ ಕಟ್ಟಡಗಳ ಬಾಲ್ಕನಿ, ಟೆರೇಸ್, ಬಾತ್‌ರೂಂ, ಸಂಪು, O.H. ಟ್ಯಾಂಕ್, ಗಾರ್ಡನ್ ಏರಿಯಾ, ಮೆಟ್ಟಿಲುಗಳು ಯಾವುದೇ ರೀತಿಯ ನೀರಿನ ಲೀಕೇಜ್ ಇದ್ದರೆ ಸಂಪರ್ಕಿಸಿ :
8095509025
ಕೆಲಸ 100 % ಗ್ಯಾರಂಟಿ

**ಕಂಪ್ಯೂಟರ್ ಟೈಪಿಸ್ಟ್ ಹಾಗೂ ಜೆರಾಕ್ಸ್ ಆಪರೇಟರ್ ಬೇಕಾಗಿದ್ದಾರೆ**
ಹೊಸ ಕೋರ್ಟ್ ಎದುರು ಡಿ.ಟಿ.ಪಿ ಸೆಂಟರ್‌ನಲ್ಲಿ ಕೆಲಸ ಮಾಡಲು ಕಂಪ್ಯೂಟರ್ ಟೈಪಿಸ್ಟ್ ಹಾಗೂ ಜೆರಾಕ್ಸ್ ಆಪರೇಟರ್ ಬೇಕಾಗಿದ್ದಾರೆ. (ಮಹಿಳಾ ಅಭ್ಯರ್ಥಿಗಳಿಗೆ ಮಾತ್ರ) ಸಂಪರ್ಕಿಸಿ
86604 83641, 98445 28109

**ಬೇಕಾಗಿದ್ದಾರೆ**
ಪೆಟ್ರೋಲ್ ಬಂಕ್ ನಲ್ಲಿ ಸೂಪರ್ ವೈಸರ್ ಕೆಲಸಕ್ಕೆ ಪಿಯುಸಿ ಆಗಿರುವ ಹುಡುಗರು ಬೇಕಾಗಿದ್ದಾರೆ.
ತಕ್ಷಣವೇ ಸಂಪರ್ಕಿಸಿ :
ಶಂಕರಲೀಲಾ ಪೆಟ್ರೋಲ್ ಬಂಕ್ ದಾವಣಗೆರೆ.
ಮೊ. 96117 44810

**ತಕ್ಷಣ ಬೇಕಾಗಿದ್ದಾರೆ**
ಕಂಪ್ಯೂಟರ್ ಆಪರೇಟರ್ / ಆಫೀಸ್ ಅಸಿಸ್ಟೆಂಟ್ ಬೇಕಾಗಿದ್ದಾರೆ.
ಸಂಪರ್ಕಿಸಿ: ಸಿದ್ಧಾರೂಢ ಸ್ವಾಮಿ
ಇಂಡೇನ್ ಗ್ಯಾಸ್ ಏಜೆನ್ಸಿ, ದಾವಣಗೆರೆ.
98445-23109, 99860 12678

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ರೂಂ ಬಾಡಿಗೆಗೆ**
ಸುಸಜ್ಜಿತ ರೂಂ (ಅಟ್ಯಾಚ್ಡ್) ವಿದ್ಯಾರ್ಥಿಗಳಿಗೆ, ರೆಪ್ರೆಸೆಂಟೇಟಿವ್ಸ್ ಗಳಿಗೆ, ಅನುಕೂಲವಿದ್ದು, "ಸುಮಂತ್ ನಿಲಯ", 2ನೇ ಮೇನ್, 3ನೇ ಕ್ರಾಸ್, ಜೈನ್ ಲೇಔಟ್, ಕುಂದವಾಡ ರೋಡ್, ದಾವಣಗೆರೆ ಇಲ್ಲಿ ಬಾಡಿಗೆಗಿದೆ.
ಸಂಪರ್ಕಿಸಿ : 87623 92005

**ತಕ್ಷಣ ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.
ರಾಜ್‌ಹಂಸ ಕಲೆಕ್ಷನ್ಸ್
ಚಾಮರಾಜ ಪೇಟೆ, ದಾವಣಗೆರೆ.
94816 72542

**ಮನೆ ಬಾಡಿಗೆಗೆ ಇದೆ**
ದಾವಣಗೆರೆ ಹಳೇಪೇಟೆ ಖಂಡಪ್ಪನ ಗಲ್ಲಿಯಲ್ಲಿ 12x45 ಅಳತೆಯ AEH, ಸೋಲಾರ್, ಕಾರ್ಪೊರೇಷನ್ ವಾಟರ್ ಸೌಲಭ್ಯವಿರುವ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ :
ಮೊ.94480-47506

**ಮಾರಾಟಕ್ಕಿದೆ**
ಕೆ.ಬಿ. ಬಡಾವಣೆ 8ನೇ ಕ್ರಾಸ್‌ನಲ್ಲಿ ಉತ್ತರ ದಿಕ್ಕಿನ 15x40 ಅಳತೆಯ ಹಳೇ ಮನೆ , ಸೈಟ್ ಲೆಕ್ಕದಲ್ಲಿ ಮಾರಾಟಕ್ಕಿದೆ.
ಆಸಕ್ತರು ಕೂಡಲೇ ಸಂಪರ್ಕಿಸಿ
99723 42940

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಮನೆ ಬಾಡಿಗೆ/ಲೀಸ್‌ಗೆ ಇದೆ**
ಶಿವಕುಮಾರ ಸ್ವಾಮಿ ಬಡಾವಣೆ 1ನೇ ಹಂತ, 1ನೇ ಕ್ರಾಸ್, ನಂ. 1077/10ರಲ್ಲಿ 3 ಬೆಡ್‌ರೂಂ, ಕಾರ್ ಪಾರ್ಕಿಂಗ್ ಇರುವ ಮೊದಲ ಮಹಡಿ ಮನೆ ಬಾಡಿಗೆಗೆ ಇದೆ.
97425 52737

**Offer Price ANU SOLAR**
200 ಲೀ Rs 16, 500
99645 11172 99646 13790

**V-One Flowers**
ಮದುವೆ ಹಾಗೂ ಶುಭ ಸಮಾರಂಭಗಳಿಗೆ ಜರ್ಬರ್, ಡಚ್‌ರೋಸ್, ಆರ್ಕಿಡ್, ಬ್ಲೂಡೇಜ್, ಫಿಶ್ ಲೀಫ್ ಡ್ರೆಸಿನಾ, ಜಿಪ್ಸಿ 'ಹೂ'ಗಳು ಹೋಲ್ ಸೇಲ್ ದರದಲ್ಲಿ ಲಭ್ಯವಿದೆ.
ಸಂಪರ್ಕಿಸಿ: KSRTC ಬಸ್ ಸ್ಟ್ಯಾಂಡ್ ಹಿಂಭಾಗ ಬೆಳುಳ್ಳಿ ಕಾಂಪ್ಲೆಕ್ಸ್, ಚೌಡೇಶ್ವರಿ ದೇವಸ್ಥಾನ ಹತ್ತಿರ, ಭಗತ್ ಸಿಂಗ್ ನಗರ, ದಾವಣಗೆರೆ.
80737 43581

**ಸುವರ್ಣಾವಕಾಶ**
ಎಸ್ಸೆಸ್ಸೆಲ್ಸಿ, ಪಿಯುಸಿ, ಫೇಲಾದವರು ನೇರ ಬಿ.ಎ., ಎಂ.ಎ., ಬಿ.ಕಾಂ., ಎಂ.ಕಾಂ., ಬಿ.ಎಸ್ಸಿ., ಬಿ.ಎಡ್., ಎಂ.ಎಡ್., ಡಿಪ್ಲೋಮಾ, ಬಿ.ಟೆಕ್, ಎಂ.ಟೆಕ್ ಮುಂತಾದ ಕೋರ್ಸ್‌ಗಳನ್ನು ಪಾಸ್ ಮಾಡಲು ಸಂಪರ್ಕಿಸಿ
8296265995, 8971684391
ಬೆಳಿಗ್ಗೆ 10 ರಿಂದ ಸಂಜೆ 6 ರೊಳಗೆ

**ಮನೆ ಬಾಡಿಗೆಗೆ ಇದೆ**
ಆಂಜನೇಯ ಬಡಾವಣೆ 18ನೇ ಕ್ರಾಸ್‌ನಲ್ಲಿ ವಾಸ್ತು ಪ್ರಕಾರ ಎಲ್ಲಾ ಅನುಕೂಲತೆ ಇರುವ ಪೂರ್ವ ದಿಕ್ಕಿನ ಸಿಂಗಲ್ ಬೆಡ್‌ರೂಂ ಮನೆ 1ನೇ ಮಹಡಿಯಲ್ಲಿ ಬಾಡಿಗೆಗೆ ಇದೆ. ಸಂಪರ್ಕಿಸಿ:
94498 05750 94494 22901

**ಲೀಸ್‌ಗೆ ಮನೆ ಬೇಕಾಗಿದೆ**
(ಮನೆ ಶಿಫ್ಟಿಂಗ್‌ಗಾಗಿ ಸಂಪರ್ಕಿಸಿ)
86181 82332

**REQUIRED**
Manager, Computer Knowledge Fluency in English
Marketing Executive, 1 Year Experience Any Degree + own Vehicle, Salary 10,000+ Incentive. Two Years Agriment.
Contact : 88844 45445
nitheskc90@gmail.com

**ಡ್ರೈವರ್ ಬೇಕಾಗಿದ್ದಾರೆ**
ಕೊರಿಯರ್ ಕಂಪನಿಯಲ್ಲಿ ಕೆಲಸ ಮಾಡಲು ಡ್ರೈವರ್ ಬೇಕಾಗಿದ್ದಾರೆ. ಕೂಡಲೇ ಸಂಪರ್ಕಿಸಿ. ಸ್ಥಳೀಯರಿಗೆ ಆದ್ಯತೆ.
91139 65957 91641 60172

**ಹುಡುಗರು ಬೇಕಾಗಿದ್ದಾರೆ**
ಮರದ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ದಿನಕ್ಕೆ ರೂ. 300/- ಸಂಬಳ. ಆಸಕ್ತಿ ಇರುವವರು
ಶ್ರೀ ದುರ್ಗಶ್ರೀ ಟಿಂಬರ್, ನ್ಯೂ ಬಂಬೂ ಬಜಾರ್, ಆರ್.ಎಂ.ಸಿ. ರೋಡ್, ದಾವಣಗೆರೆ -01 ಗೆ ಸಂಪರ್ಕಿಸಿ :
88844 45445, 99160 78615, 98442 10443

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಪೂಜಿ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**HAPPY NEW YEAR**
ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ,**
www.hindusmatrimony.com
5ನೇ ವಾರ್ಷಿಕೋತ್ಸವದ ಪ್ರಯುಕ್ತ
**ಉಚಿತ ನೋಂದಣಿ**
ದಿ. 1.1.21 ರಿಂದ 15.1.21ರ ವರೆಗೆ ವೀರಶೈವ/ಲಿಂಗಾಯತ ಹಾಗೂ ಎಲ್ಲಾ ತರಹದ ಹಿಂದೂ ವಧು-ವರರು ಇದರ ಉಪಯೋಗ ಪಡೆದುಕೊಳ್ಳಬಹುದು
DVG : 7892510652, 9448159303, 8050952637
ಕಡೂರು-9480063756, ಚಿಕ್ಕಮಗಳೂರು-6362382773
ಮಂಡ್ಯ-8762074334, ಬೆಂಗಳೂರು-9513570130

**ವಾಹ್ ಕಾಫಿ !! ರಿಚ್ ಕಾಫಿ !!**
SRK COFFEE
ಶ್ರೀ ರಾಮಕೃಷ್ಣ ಕಾಫಿ ಕಂಪನಿ
ಮಂಡಿಪೇಟೆ, ದಾವಣಗೆರೆ.
ಮೊಬೈಲ್ : 94487 27084

**ಮಾಂತ್ರಿಕ ಮೋಡಿ ಬೆಟ್ಟಪ್ಪ ನಂ.1 ವಶೀಕರಣ ಸ್ಪೆಷಲಿಸ್ಟ್**
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು ಶೀಘ್ರದಲ್ಲೇ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ: ಗಾಂಧಿ ಸರ್ಕಲ್, ದಾವಣಗೆರೆ.
89716 99826

**ಅಧಿಕೃತ ಚೀಟಿ ಸಂಸ್ಥೆ**
ರೂ.5 ಲಕ್ಷದ ಚೀಟಿ ಪ್ರಾರಂಭ. ತಿಂಗಳ ಕಂತು 10,000/- ದಿಂದ 6,500/- ಮಾತ್ರ
ಸ್ಕಂದ ಚಿಟ್ ಫಂಡ್ಸ್ (ರಿ) ದಾವಣಗೆರೆ-02
84531 61869

**ಶ್ರೀ ಅಂಜನಿಪುತ್ರ ಹೋಂ ಕೇರ್ ಸರ್ವೀಸ್**
ನಮ್ಮಲ್ಲಿ ವಯೋವೃದ್ಧರನ್ನು ನೋಡಿಕೊಳ್ಳಲು ಆಯಾಗಳನ್ನು ಕಳಿಸುತ್ತೇವೆ. ಬಾಣಂತಿ ಮತ್ತು ಮಕ್ಕಳನ್ನು ನೋಡಿಕೊಳ್ಳಲು ಕಳುಹಿಸುತ್ತೇವೆ. ಸೆಕ್ಯೂರಿಟಿ ಸರ್ವೀಸ್. ಈ ಎಲ್ಲಾ ಸೇವೆಗಳು ಬೇಕಾಗಿದ್ದಲ್ಲಿ ಸಂಪರ್ಕಿಸಿ.
9902464522, 9686455820
ಯುವಕ-ಯುವತಿಯರು ಬೇಕಾಗಿದ್ದಾರೆ.

**ಸೊಳ್ಳೆ ಮೆಶ್ ಹಾಕಲಾಗುವುದು**
ನಮ್ಮಲ್ಲಿ ಎಲ್ಲಾ ತರಹದ ಕುಷನ್ ವರ್ಕ್ಸ್, ಸೋಫಾ ಸೆಟ್, ಡ್ಯುರೋಫ್ಲೆಕ್ಸ್ ಬೆಡ್, ಕಿಟಕಿಗೆ ಅಲ್ಯೂಮಿನಿಯಂ ಡೋರ್, ಸೊಳ್ಳೆ ಮೆಶ್ ಹಾಕಲಾಗುವುದು.
ಸ್ವಪ್ನ ಕುಷನ್ ವರ್ಕ್ಸ್
ವಿಠಲ ದೇವಸ್ಥಾನದ ಹಿಂಭಾಗ, ಮಹಾರಾಜಪೇಟೆ, ದಾವಣಗೆರೆ.
98445 81966

**Contact For**
3D Floor plan, 3D Elevation, Interior Designs, kitchen Designs, Ceiling Design
91106 99014

**ಭೂಮಿಕ ಮ್ಯಾಟ್ರಿಮೊನಿ**
ಲಿಂಗಾಯತ ವಧು-ವರರ ಕೇಂದ್ರ
H.O : Vidya Nagara, 1st Bus Stop, Davanagere
B.O: BIET College Road, Near Hemavati Hostel
77603 16576, 90080 55813

## 'ನಗುವಿರಲಿ ಎಂದೆಂದೂ'...

**(ಇಂದು ವಿಶ್ವ ನಗುವಿನ ದಿನ)**



ಮುಖದ ಸೌಂದರ್ಯಕೆ ಮೇಕಪ್
ಏಕೆ ಬೇಕು,
ಒಳ್ಳೆಯ ನಗುವೊಂದೇ ಸಾಕು.
ಯಾವ ಧರ್ಮೀಯರಾದರೇನು ನಗು ನಗುತಲಿರಲು,
'ನಗುವೇ ಸಹಜ ಧರ್ಮ' ಡಿವಿಜಿ ಮಾತೇ ಮೇಲು.

ದುಗುಡ ದುಮ್ಮಾನಗಳ ನಗು ದೂರವಾಗಿಸುವುದು,
ಸ್ನೇಹ ಸಂಪಾದನೆಗೆ ಸುಲಭ ಸಾಧನವಿದು.
ಬೇಂದ್ರೆ ಅಂಕಿತವಿದಕೆ 'ನಕ್ಕಾವ ಗೆದ್ದಾವ',
ನಗುವು ದೂರಾಗಿಸುವುದು ಮನಸಿನಾ ನೋವ.

ಅಟ್ಟಹಾಸದ ನಗುವ ಬಿಟ್ಟು ಬಿಡಿ ಬೇಡ,
ಎಂದಿಗೂ ತೋರದಿರಿ ಕುಹಕ ನಗು ಕೂಡಾ.
ಮಂದಹಾಸದ ಅಂದ ಮುಖದಲ್ಲಿ ಚಂದ,
ಮನಸೆಳೆಯಬಹುದೊಂದು ಮುಗುಳು ನಗೆಯಿಂದ.

ಎಷ್ಟಾದರೂ ನಗಿರಿ ಇದಕ್ಕಿಲ್ಲ ತೆರಿಗೆ,
ಮುಖದ ಸ್ನಾಯುಗಳಿಗೆ ವ್ಯಾಯಾಮವೇ 'ನಗೆ'.
ನಗುಬಲ್ಲವರಿಗೆಂದೂ ಇರದೆಲ್ಲೂ ವೈರ,
ಗಾಂಧೀಜಿ ಮುಖದಲ್ಲೂ ನಗುವೆ ಮಂದಾರ.

ನಕ್ಕು ನಗಿಸುತಲಿರಿ 'ವಿಶ್ವ ನಗು ದಿನ'ವಿಂದು,
ಇಂದೊಂದೇ ದಿನವಲ್ಲ, ನಗುವಿರಲಿ ಎಂದೆಂದೂ.
ಮೊಗ್ಗರಳಿ ಹೂವಾಗಿ ಗಂಧ ಪಸರಿಸುವಂತೆ,
ಮುಖದಲ್ಲಿ ನಗುವರಳೆ ಹಿತವು ಅಹುದಂತೆ.

- **ಹೆಚ್.ಬಿ.ಮಂಜುನಾಥ್**, ಹಿರಿಯ ಪತ್ರಕರ್ತ.

## ನಗರದ ಮಲಬಾರ್‌ನಲ್ಲಿ ಆರ್ಟಿಸ್ಟ್ರಿ ಬ್ರಾಂಡೆಡ್ ಜ್ಯುವೆಲ್ಲರಿ ಪ್ರದರ್ಶನ



ದಾವಣಗೆರೆ, ಜ.9- ನಗರದ ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ಶೋ ರೂಂನಲ್ಲಿ ಆರ್ಟಿಸ್ಟ್ರಿ ಬ್ರಾಂಡೆಡ್ ಜ್ಯುವೆಲ್ಲರಿ ಪ್ರದರ್ಶನ ನಡೆಯಿತು.

ಮುಖ್ಯ ಅತಿಥಿಗಳಾಗಿ ರೋಷಿನಿ ಶೆಟ್ಟಿ ಮತ್ತು ಸ್ಯಾಂಡಲ್‌ವುಡ್ ನಟಿ ಪೂಜಾ, ರೋಟರಿ ಕ್ಲಬ್‌ನ ಮಾಜಿ ಸದಸ್ಯೆ ಶಾರದಾ ಅವರು ಪಾಲ್ಗೊಂಡಿದ್ದರು. ಶೋ ರೂಂ ಮುಖ್ಯಸ್ಥರಾದ ಬಾಸಿಲ್ ರಾಜನ್ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## 11 ರಂದು ಮಲ್ಲಿಕಾರ್ಜುನ - ಕಂಠಿ ದುರ್ಗಮ್ಮ ದೇವಸ್ಥಾನದಲ್ಲಿ ಕಾರ್ತಿಕ

ದಾವಣಗೆರೆ, ಜ.9- ಶ್ರೀ ಗಾಂಧೀಜಿ ಹರಿಜನ ಯುವಕ ಸಂಘದ ಆಶ್ರಯದಲ್ಲಿ ಕೆಟಿಜೆ ನಗರ 10ನೇ ತಿರುವಿನಲ್ಲಿರುವ ಶ್ರೀ ಮಲ್ಲಿಕಾರ್ಜುನ ಹಾಗೂ ಶ್ರೀ ಕಂಠಿ ದುರ್ಗಮ್ಮ ದೇವಸ್ಥಾನದ ಕಾರ್ತಿಕೋತ್ಸವ ನಾಡಿದ್ದು ದಿನಾಂಕ 11ನೇ ಸೋಮವಾರ ಮತ್ತು 12ನೇ ಮಂಗಳವಾರ ಸಂಜೆ 7.30 ಕ್ಕೆ ಶ್ರೀ ಮಲ್ಲಿಕಾರ್ಜುನ ಸಮುದಾಯ ಭವನದಲ್ಲಿ ದೇವರುಗಳಿಗೆ ವಿಶೇಷ ಪೂಜೆಯೊಂದಿಗೆ ನಡೆಯಲಿದೆ ಎಂದು ಪ್ರಧಾನ ಕಾರ್ಯದರ್ಶಿ ಸೋಮಲಾಪುರ ಹನುಮಂತಪ್ಪ ತಿಳಿಸಿದ್ದಾರೆ.

## ನಾಳೆ ಮಾರ್ಕಂಡೇಶ್ವರ ಕಾರ್ತಿಕೋತ್ಸವ

ದಾವಣಗೆರೆ, ಜ.9- ನಗರದ ಶ್ರೀ ಕನ್ನಿಕಾಪರಮೇಶ್ವರಿ ದೇವ ಸ್ಥಾನ ರಸ್ತೆಯಲ್ಲಿರುವ ಶ್ರೀ ಮಾರ್ಕ ಂಡೇಶ್ವರ ಸ್ವಾಮಿ ದೇವಸ್ಥಾನದಲ್ಲಿ ನಾಡಿದ್ದು ದಿನಾಂಕ 11ರ ಸೋಮ ವಾರ ಕಡೆ ಕಾರ್ತಿಕೋತ್ಸವ ಹಮ್ಮಿಕೊಳ್ಳಲಾಗಿದೆ. ಅಂದು ಬೆಳಿಗ್ಗೆ 8 ಗಂಟೆಗೆ ಪಂಚಾಮೃತ ಅಭಿಷೇಕ ನಡೆಯಲಿದೆ. ಸಂಜೆ ಮಹಾಪೂಜೆ, ರಾತ್ರಿ 7 ಕ್ಕೆ ಕಾರ್ತಿಕೋತ್ಸವ ನೆರವೇರಲಿದೆ ಎಂದು ಶ್ರೀ ಮಾರ್ಕಂಡೇಶ್ವರ ಪದ್ಮಶಾಲಿ ಸಮಾಜ ಸೇವಾ ಸಂಘದ ಅಧ್ಯಕ್ಷ ಪಿ.ಜೆ. ನಾಗರಾಜ್ ತಿಳಿಸಿದ್ದಾರೆ.

## 22ನೇ ವಾರ್ಡ್‌ನಲ್ಲಿ ಅಹಿಂದ ಪ್ರಜಾಶಕ್ತಿ ಶಾಖೆ ಇಂದು ಉದ್ಘಾಟನೆ

ಡಿ.ಸಿ.ಎಂ. ಟೌನ್‌ಶಿಪ್‌ನಲ್ಲಿ ಅಹಿಂದ ಪ್ರಜಾಶಕ್ತಿ 22ನೇ ವಾರ್ಡ್ ಶಾಖೆ ಉದ್ಘಾಟನೆ ಕಾರ್ಯಕ್ರಮವು ಇಂದು ನಡೆಯಲಿದೆ. ಶ್ರೀ ಬಸವಪ್ರಭು ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಜಿ.ಎ. ಗೋವಿಂದರಾಜು.ಎಸ್.ಎಸ್ ಗಿರೀಶ್, ಪ್ರವೀಣ್ ಎಸ್.ಕೆ. ಕುಮಾರ್, ಮೊಹಮ್ಮದ್ ಜಿಕ್ರಿಯಾ, ಜಿ.ಆರ್. ಮಾಲತೇಶ್, ಹನುಮಂತಪ್ಪ, ಜಾಕಿರ್ ಹುಸೇನ್ ಉಪಸ್ಥಿತರಿರುವರು.

## ಕೃಷಿ ಕಾಯ್ದೆ ಪರ ಅರ್ಜಿ

**(3ನೇ ಪುಟದಿಂದ)** ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದೆ. ನೂತನ ಕೃಷಿ ಕಾಯ್ದೆಗಳಿಗೆ ಸಂಬಂಧಿಸಿದಂತೆ ಈಗಾಗಲೇ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿಗಳನ್ನು ದಾಖಲಿಸಲಾಗಿದೆ. ಮುಖ್ಯ ನ್ಯಾಯಮೂರ್ತಿ ಎಸ್.ಎ. ಬೊಬ್ಡೆ ಅವರ ನೇತೃತ್ವದ ಸುಪ್ರೀಂ ಕೋರ್ಟ್ ಪೀಠ, ಜನವರಿ 11ರಂದು ಕೃಷಿ ಕಾಯ್ದೆಗಳನ್ನು ಪ್ರಶ್ನಿಸುವ ಹಾಗೂ ದೆಹಲಿಯಲ್ಲಿ ಕಾಯ್ದೆಗಳ ವಿರುದ್ಧ ರೈತರು ನಡೆಸುತ್ತಿರುವ ಪ್ರತಿಭಟನೆಗಳನ್ನು ಪ್ರಶ್ನಿಸಿ ದಾಖಲಾಗಿರುವ ಅರ್ಜಿಗಳ ವಿಚಾರಣೆ ನಡೆಯಲಿದೆ.

ಸಿ.ಐ.ಎಫ್.ಎ. ಪ್ರಧಾನ ಸಲಹೆಗಾರ ಪಿ. ಚೆಂಗಲ್ ರೆಡ್ಡಿ ಅವರು ಅರ್ಜಿ ದಾಖಲಿಸಿದ್ದು, ಈ ಕಾಯ್ದೆಗಳಲ್ಲಿ ಕೇಂದ್ರ ಸರ್ಕಾರ ಬದಲಾವಣೆ ತರುವುದಕ್ಕೆ ಮುಂಚೆ ಇತರೆ ರೈತ ಒಕ್ಕೂಟಗಳ ಜೊತೆಗೂ ಚರ್ಚೆ ನಡೆಸುವಂತೆ ತಿಳಿಸಬೇಕೆಂದು ಕೋರಲಾಗಿದೆ.

## ನಗರದಲ್ಲಿ ಇಂದು

ವಿನ್ನರ್ ಸಮೂಹ ಸಂಸ್ಥೆಗಳ ಆಶ್ರಯದಲ್ಲಿ ವಿನ್ನರ್ಸ್ ಡಿಜಿಟಲ್ ಲೈಬ್ರರಿಯ ಉದ್ಘಾಟನಾ ಸಮಾರಂಭವು ಇಂದು ಬೆಳಿಗ್ಗೆ 10 ಗಂಟೆಗೆ ನಡೆಯಲಿದೆ. ಉದ್ಘಾಟನೆ : ಮಹಾಂತೇಶ್ ಬೀಳಗಿ. ಅಧ್ಯಕ್ಷತೆ : ಡಾ. ಹೆಚ್.ವಿ. ವಾಮದೇವಪ್ಪ. ಉಪಸ್ಥಿತಿ : ಕೆ. ಆರ್. ಚಂದ್ರಶೇಖರಪ್ಪ.


**ಕನ್ಸಲ್ಟೆನ್ಸಿ ಸರ್ವೀಸಸ್**

ನಮ್ಮ ಕಛೇರಿಯಲ್ಲಿ ಬಿಲ್ಡಿಂಗ್ ಪ್ಲ್ಯಾನ್ಸ್, ಎಸ್ಟಿಮೇಷನ್, ಲೇಔಟ್ ಪ್ಲ್ಯಾನ್ಸ್, ಆನ್‌ಲೈನ್ ಅಪ್‌ಲೋಡ್, ಬ್ಲೂ ಪ್ರಿಂಟ್ಸ್ ಮತ್ತು ಪ್ಲಾಟರ್ ಪ್ರಿಂಟ್ಸ್ (A4-A0 ಸೈಜ್) ಮಾಡಿಕೊಡಲಾಗುತ್ತದೆ. ಸಂಪರ್ಕಿಸಿ:

**ಶ್ರೀ ವೀರಭದ್ರೇಶ್ವರ ಕನ್ಸಲ್ಟೆನ್ಸಿ ಸರ್ವೀಸಸ್**

ಪಿ.ಜೆ. ಲಾಡ್ಜ್ ಎದುರು, ಎ.ವಿ.ಕೆ. ಕಾಲೇಜ್ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.
ಮೊ. 99168 73399, 93432 77422, 99161 73399



**ಶ್ರೀ ಶಿವಕುಮಾರಸ್ವಾಮಿ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ.,**

#1660/47-1, 1ನೇ ಮಹಡಿ, 12ನೇ ಕ್ರಾಸ್, ತರಳಬಾಳು ಬಡಾವಣೆ, ವಿದ್ಯಾನಗರ, ದಾವಣಗೆರೆ-577 005. ಫೋ. : 08192 263129

**ಪ್ರಕಟಣೆ**

ನಮ್ಮ ಸೊಸೈಟಿಯ ಚುನಾವಣೆಯು ದಿನಾಂಕ 07.02.2021 ರಂದು ನಡೆಯಲಿರುವುದರಿಂದ, ಸೊಸೈಟಿಯ ಸಾಲಗಾರರು, ಸುಸ್ತಿದಾರರು ಮತ್ತು ಇತರೆ ಬಾಕಿದಾರರು ದಿನಾಂಕ: 20.01.2021 ರೊಳಗೆ ಬಾಕಿ ಚುಕ್ತಾ ಮಾಡುವುದು. ಇಲ್ಲದಿದ್ದಲ್ಲಿ ಚುನಾವಣೆ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅರ್ಹರಾಗುವುದಿಲ್ಲ.

ಇದುವರೆಗೂ ಗುರುತಿನ ಚೀಟಿ ಹಾಗೂ ಡಿವಿಡೆಂಡ್ ಪಡೆಯದಿದ್ದವರು ತಮ್ಮ 2 ಫೋಟೋದೊಂದಿಗೆ ಬಂದು ಗುರುತಿನ ಚೀಟಿ ಹಾಗೂ ಡಿವಿಡೆಂಡ್ ಪಡೆಯತಕ್ಕದ್ದು.

**ಅಧ್ಯಕ್ಷರು** **ಕಾರ್ಯದರ್ಶಿ**







**ಹೃತ್ಪೂರ್ವಕ ಅಭಿನಂದನೆಗಳು**

ಕರ್ನಾಟಕ ಪೊಲೀಸ್ ಇಲಾಖೆಯ
ಶ್ಲಾಘನೀಯ ಸೇವೆಗೆ ನೀಡುವ
ರಾಷ್ಟ್ರಪತಿಗಳ ಪದಕಕ್ಕೆ
ಭಾಜನರಾದಂತಹ ಬೆಂಗಳೂರು ನಗರದ
ಬಾಣಸವಾಡಿ ಉಪ ವಿಭಾಗ ಪೊಲೀಸ್ ಠಾಣೆಯ
ಸಹಾಯಕ ಪೊಲೀಸ್ ಕಮೀಷನರ್ ಆದ
**ಶ್ರೀ ಎನ್.ಬಿ ಸಕ್ರಿಯವರಿಗೆ**
ಹೃತ್ಪೂರ್ವಕ ಅಭಿನಂದನೆಗಳು.

**ಶುಭ ಕೋರುವವರು**

- **ಶ್ರೀಮತಿ ಸುನೀತಾ ಸಕ್ರಿ ಮತ್ತು ಮಕ್ಕಳು**, ನಿರ್ದೇಶಕರು, ಕಾಗಿನೆಲೆ ಕನಕಶ್ರೀ ಸೌಹಾರ್ದ ಕ್ರೆಡಿಟ್ ಕೋ ಆಪ್ ಲಿ., ಬೆಂಗಳೂರು.
- **ಶ್ರೀಮತಿ ವಿಜಯಲಕ್ಷ್ಮಿ ಮತ್ತು ಶ್ರೀ ಡಾ।। ಎನ್.ತಿಮ್ಮಪ್ಪ**, ನಿವೃತ್ತ ಸಹಾಯಕ ನಿರ್ದೇಶಕರು, ಪಶುವೈದ್ಯಕೀಯ ಇಲಾಖೆ ದಾವಣಗೆರೆ.
- **ಶ್ರೀಮತಿ ಕವಿತ ಬಿ.ಎನ್. ಶ್ರೀ ಎನ್ ಸುರೇಶ್ ರಾಜನಹಳ್ಳಿ**, ಮಾಜಿ ಜಿಲ್ಲಾ ಸರ್ಕಾರಿ ವಕೀಲರು ದಾವಣಗೆರೆ.
- **ಶ್ರೀಮತಿ ಡಾ।। ಸೌಭಾಗ್ಯ** ಎಂ.ಡಿ., ಆಯುರ್ವೇದಿಕ್ ವೈದ್ಯರು, ಕೂಲಂಬಿ **ಮತ್ತು ಡಾ।। ರವೀಂದ್ರ ಹುನುಗುಂದ**, ಪ್ರಾಂಶುಪಾಲರು, ತಪೋವನ ಆಯುರ್ವೇದಿಕ್ ಕಾಲೇಜು ದೊಡ್ಡಬಾತಿ.
- **ಶ್ರೀಮತಿ ಸುರೇಖಾ ನೇಸ್ವಿ** ಸಹಾಯಕ ಕಾರ್ಯಪಾಲಕ ಅಭಿಯಂತರರು (ಬೆಸ್ಕಾಂ) **ಮತ್ತು ಶ್ರೀ ಕೆ. ಹರೀಶ್** ಅಧೀಕ್ಷಕರು ಕೇಂದ್ರ ಅಬಕಾರಿ ಇಲಾಖೆ ಬೆಂಗಳೂರು.
- **ಶ್ರೀಮತಿ ಯೋಗಿತಾ ಶ್ರೀ ಎನ್ ಸೋಮೇಶ್**, ಇಂಜಿನಿಯರ್ ದಾವಣಗೆರೆ.
- **ಶ್ರೀಮತಿ ಜಯಲಕ್ಷ್ಮಿ ಮತ್ತು ಶ್ರೀ ಬಿ.ಆರ್. ನಾಗರಾಜ್ ಬೆಳ್ಳೂಡಿ ಮತ್ತು ಮಕ್ಕಳು** ವರ್ತಕರು, ವಿಜಯಲಕ್ಷ್ಮಿ ರಸ್ತೆ, ದಾವಣಗೆರೆ.
- **ಶ್ರೀಮತಿ ದುಗ್ಗಮ್ಮ ಕೋಂ ಲೇಟ್ ಡಾ।। ಎನ್.ಆರ್ ಹನುಮಂತಪ್ಪ, ದಾವಣಗೆರೆ**
- **ಶ್ರೀಮತಿ ಸಿದ್ದಮ್ಮ ಕೋಂ ಎನ್.ಹನುಮಂತಪ್ಪ ಮತ್ತು ಮಕ್ಕಳು ಹಾಗೂ ನೆಸ್ವಿ, ಗೌಡ್ರ ಸಹೋದರರು** ರಾಜನಹಳ್ಳಿ.
- **ಶ್ರೀಮತಿ ಶಿವಮ್ಮ ಮತ್ತು ಶ್ರೀ ಬಿ.ಬಿ.ಸಕ್ರಿ**, ನಿವೃತ್ತ ಪೊಲೀಸ್ ವರಿಷ್ಠಾಧಿಕಾರಿಗಳು, ದಾವಣಗೆರೆ.
- **ಶ್ರೀಮತಿ ಗೀತಾ ಮತ್ತು ಶ್ರೀ ಎನ್.ಹೆಚ್. ಶಿವಕುಮಾರ್ ರಾಜನಹಳ್ಳಿ** ಅಧ್ಯಕ್ಷರು ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ.
- **ಶ್ರೀಮತಿ ಪಾರ್ವತಮ್ಮ ಮತ್ತು ಶ್ರೀ ಟಿ.ಎಸ್. ಮುರುಗಣ್ಣನವರ್**, ನಿವೃತ್ತ ಪೊಲೀಸ್ ಉಪಾಧೀಕ್ಷಕರು, ದಾವಣಗೆರೆ.
- **ಶ್ರೀಮತಿ ನಂದಿನಿ ಮತ್ತು ಶ್ರೀ ಜಿ.ಎಸ್. ಹಾಲೇಶ್**, ವಕೀಲರು, ಬೆಂಗಳೂರು.
- **ಶ್ರೀಮತಿ ಚಾಂದಿನಿ ಮತ್ತು ಶ್ರೀ ಎನ್.ಹೆಚ್. ರಾಜಶೇಖರ**, ಪೊಲೀಸ್ ವೃತ್ತ ನಿರೀಕ್ಷಕರು, ಬೆಂಗಳೂರು
- **ಶ್ರೀಮತಿ ಕುಸುಮ ಶ್ರೀ ಎಂ. ಮಲ್ಲಿಕಾರ್ಜುನ** (ಮಲ್ಲು ಕಬಡ್ಡಿ) ದಾವಣಗೆರೆ
- **ಶ್ರೀಮತಿ ಗಂಗಮ್ಮ ಶ್ರೀ ಕೆ. ಕೆಂಚಪ್ಪನವರು**, ಅಭಿಯೋಜಕರು, ಒಂದನೇ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದಾವಣಗೆರೆ
- **ಶ್ರೀಮತಿ ಶಾರದಾ ಮತ್ತು ಶ್ರೀ ಗೌಡ್ರ ಮಂಜಪ್ಪ ಮತ್ತು ಸಹೋದರರು** ಎಸ್.ಬಿ.ಐ. ಮಂಡಿಪೇಟೆ, ದಾವಣಗೆರೆ.


**ಶ್ರೀ ವಾಲ್ಮೀಕಿ ಸಾಂಸ್ಕೃತಿಕ ಸಭಾ ಭವನ**
ನಾಯಕ ವಿದ್ಯಾರ್ಥಿ ನಿಲಯದ ಆವರಣದ 1ನೇ ಮಹಡಿ, ಕೆಇಬಿ ಸರ್ಕಲ್ ಹತ್ತಿರ, ಪಿ.ಜೆ. ಬಡಾವಣೆ, ದಾವಣಗೆರೆ.

**ಮದುವೆ - ಶುಭ ಕಾರ್ಯಗಳಿಗೆ ಹಾಲ್ ಬಾಡಿಗೆಗೆ ಇದೆ**

500 ಕುರ್ಚಿಗಳನ್ನೊಂದಿರುವ ಸಭಾ ಭವನ, 250 ಕುರ್ಚಿಗಳಿರುವ ಊಟದ ಹಾಲ್, ಉಳಿದುಕೊಳ್ಳಲು 9 ರೂಂಗಳು, ಅಡುಗೆ ಪಾತ್ರೆ ಸಾಮಾನುಗಳು ಎಲ್ಲಾ ಸೇರಿ ಕೇವಲ ರೂ. 15,000 ಗಳಿಗೆ ಮದುವೆ ಮತ್ತು ಶುಭ ಕಾರ್ಯಗಳಿಗೆ ಹಾಲ್ ಬಾಡಿಗೆಗೆ ದೊರೆಯುತ್ತದೆ. ಸಂಪರ್ಕಿಸಿ :

**ಬಿ. ವೀರಣ್ಣ**, ಅಧ್ಯಕ್ಷರು, **ನಾಯಕ ವಿದ್ಯಾರ್ಥಿ ನಿಲಯ**, ಪಿ.ಜೆ. ಬಡಾವಣೆ, ದಾವಣಗೆರೆ. 80951 71787



**TEACHERS REQUIRED**

Applications are invited for the following post

**Science Teacher, B.Sc. B.Ed.**
**(CBZ & PM Method)**

*For more details contact :*
**Ph. No. : 08192-230662,**
**Mob. 80738 15050, 97432 96956**



**ROSHAN EDUCATIONAL TRUST ®**

**AKASH ACADEMY**

...Driven By Knowledge Empowered With Education

Shop No.4, 1st Floor, Akkamahadevi shopping complex, P.J. Extension, Davangere-577002

**WE OFFER**

Group tuitions for class 1st to 10th (All subjects state and CBSE Board) 11th & 12th Science & Commerce.

*Coaching for:*
- MATHS • SCIENCE • ENGLISH
- SOCIAL SCIENCE • HINDI • KANNADA
- PCMB, EBAS

**WHY WE..?**

- Excellent & Experienced teachers.
- Home work help.
- Easy to learn programme.
- Personal care & Doubt solving counters for students.
- Individual Attention.
- Test reports to parents via Whatsapp/SMS .
- Basic english grammar and spoken english.
- Extra classes for weak students on sunday.
- Special attention for average students.
- Chapter wise test/weekly test/ Full syllabus mock test for board preparation.
- Extensive preparation for final examination and board examination.

Contact No: 87927 83464
82963 15876

Email ID: roshan.akashacademy@gmail.com
Website: roshanacademy.wixsite.com/davanagere

**HURRY UP! LIMITED SEATS**




COVID-19 + SAFETY Measures will be taken.

Introducing in Davangere

*Terms & conditions apply, Covid safety measures will be taken.

**EXPERT TUITIONS FROM EXPERIENCED TEACHERS**



**Secretary**
Roshan Educational Trust
**AKASH ACADEMY**

| Branch 1 | Branch 2 | Branch 3 | Branch 4 | Branch 5 |
| --- | --- | --- | --- | --- |
| **Ninchana public school** 475/1, Shrinivaasa nagara, nittuvalli, Davanagere. | **RVGK School** Devaraj badavane, B Block, Davangere, karnataka. | **Lions School** Behind Court Complex, Near annapoorneshwari temple, Devaraj urs layout, Davangere | **Chanukya First Grade College of Commerce** 7th main, Road, MCC 'A' Block, Davangere, Karnataka. | **Byadagi Shettru Virupakshappa** Jayalakshmamma English medium School. PJ Extension, Davangere. |

# ಕರ್ನಾಟಕ ಗ್ರಾಮೀಣ ಬ್ಯಾಂಕ್

(ಸರ್ಕಾರಿ ಸ್ವಾಮ್ಯದ ಷೆಡ್ಯೂಲ್ಡ್ ಬ್ಯಾಂಕ್) ಪ್ರವರ್ತಕರು : ಕೆನರಾ ಬ್ಯಾಂಕ್
ಪ್ರಧಾನ ಕಛೇರಿ : ಸಂಗನಕಲ್ಲು ರಸ್ತೆ, ಗಾಂಧಿನಗರ, ಬಳ್ಳಾರಿ-583 103 (ಕರ್ನಾಟಕ)

**ಪ್ರಾದೇಶಿಕ ಕಚೇರಿ : ನಂ.496/66, ಸಂಕೋಲ್ ಪ್ಲಾಜಾ, 2ನೇ ಮಹಡಿ ನಾಗನೂರು ರಸ್ತೆ, ಶಾಮನೂರು, ದಾವಣಗೆರೆ-577 004**

ಫೋನ್: 08192 - 223913, 233632 e-mail: rodvg@kgbk.in

## ಚಿನ್ನಾಭರಣಗಳ ಬಹಿರಂಗ ಹರಾಜು

ಈ ಕೆಳಕಂಡ ಮಹನೀಯರು ಕರ್ನಾಟಕ ಗ್ರಾಮೀಣ ಬ್ಯಾಂಕ್‌ನ ಶಾಖೆಯಲ್ಲಿ ತಮ್ಮ ಚಿನ್ನಾಭರಣ ಆಧಾರದ ಸಾಲ ಪಡೆದಿದ್ದು, ಸಾಲದ ಪ್ರಕಾರ ಸಾಲ ಮರುಪಾವತಿ ಮಾಡದೇ ಇದ್ದ ಕಾರಣ, ಇವರಿಗೆ ರಿಜಿಸ್ಟರ್ಡ್ ಅಂಚೆ ಮುಖಾಂತರ ಸಾಲಮರುಪಾವತಿ ಮಾಡುವಂತೆ ಕೋರಿ ಕಳುಹಿಸಿದ ನೋಟೀಸ್ ಜಾರಿಯಾಗಿರುತ್ತದೆ. ಆದರೂ ಸಾಲ ಮರುಪಾವತಿ ಮಾಡಲು ಯಾವುದೇ ಕ್ರಮ ಕೈಗೊಳ್ಳದೇ ಇರುವುದರಿಂದ, ಅವರಿಗೆ ಈ ಮೂಲಕ ತಿಳಿಸುವುದೇನೆಂದರೆ, ತಾರೀಖು 20-01-2021 ರಂದು ಅಥವಾ ಅದಕ್ಕೆ ಮುಂಚೆ ಬ್ಯಾಂಕಿಗೆ ಭೇಟಿ ಕೊಟ್ಟು ಸಂಪೂರ್ಣ ಹಣ, ಬಡ್ಡಿ ಹಾಗೂ ಇತರೆ ಖರ್ಚುಗಳನ್ನು ಮರುಪಾವತಿ ಮಾಡತಕ್ಕದ್ದು, ಇಲ್ಲವಾದಲ್ಲಿ ತಾವು ಒತ್ತೆ ಇಟ್ಟ ಆಭರಣಗಳನ್ನು ತಾರೀಖು 20-01-2021 ರಂದು ಬೆಳಿಗ್ಗೆ 11.00 ಗಂಟೆಗೆ ಅಥವಾ ಬ್ಯಾಂಕಿಗೆ ಸೂಕ್ತವಾದ ಇನ್ನಾವುದೇ ದಿನದಂದು ನೋಟೀಸು ಕೊಡದೇ ಶಾಖೆಯ ಆವರಣದಲ್ಲಿ ಬಹಿರಂಗವಾಗಿ ಯಾ ಖಾಸಗಿಯಾಗಿ ಹರಾಜು ಮಾಡಲಾಗುವುದು. ಸದರಿ ಹರಾಜಿನಿಂದ ಬಂದ ಮೊತ್ತವು ತಮ್ಮ ಸಾಲವನ್ನು ಸಂಪೂರ್ಣ ತೀರುವಳಿ ಮಾಡಲು ವಿಫಲವಾದಲ್ಲಿ ತಾವು ವೈಯುಕ್ತಿಕವಾಗಿ ಹೊಣೆಗಾರರಾಗಿರುತ್ತೀರಿ ಹಾಗೂ ಹರಾಜಿಗೆ ತಗಲುವ ಎಲ್ಲಾ ವೆಚ್ಚಕ್ಕೂ ನೀವೇ ಹೊಣೆಗಾರರೆಂದು ತಿಳಿಯಿರಿ.

**ಶಾಖೆ: ನಂದಿತಾವರೆ, ಹರಿಹರ ತಾಲ್ಲೂಕು, ಫೋನ್ : 08192-215183 ಮೊ: 9482205050**

| ಕ್ರ. ಸಂ. | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲದ ಸಂಖ್ಯೆ | ಸಾಲದ ಬಾಬ್ತು + ಬಡ್ಡಿ |
|---|---|---|---|
| 1 | ಶ್ರೀ ತಿಪ್ಪೇಶಪ್ಪ ಕೆ. ಬಿನ್. ಮಲ್ಲಪ್ಪ, ಕೆ.ಬಿ. ಕೆರೆ | 76815301007613 | 1,64,758-00 |
| 2 | ಶ್ರೀಮತಿ ಶಾರದಮ್ಮ ಕೋಂ. ಲೇಟ್ ಚಿಕ್ಕಪ್ಪ, ಕುಣೆಬೆಳಕೆರೆ | 76815301010513 | 44,149-00 |
| 3 | ಶ್ರೀ ವೀರಣ್ಣ ಗುಳೇರ ಬಿನ್. ಬಸಪ್ಪವೀರಣ್ಣ ಗುಳೇರ, ನಂದಿತಾವರೆ | 76815301011612 | 3,26,455-00 |
| 4 | ಶ್ರೀ ತಿಪ್ಪಣ್ಣ ಬಿನ್. ಸಿದ್ದಪ್ಪ, ಕುಣೆಬೆಳಕೆರೆ | 76815301017514 | 88,886-00 |
| 5 | ಶ್ರೀ ದೊಡ್ಡಬಸಣ್ಣರ ಬಸವನಗೌಡ ಬಿನ್. ಹಾಲಪ್ಪ, ಭಾನುವಳ್ಳಿ | 76815301019914 | 3,08,131-00 |
| 6 | ಶ್ರೀ ಜಿಯಾವುಲ್ಲಾ ಬಿನ್. ಅಬ್ದುಲ್ ಖಲೀಲ್ ಖಾನ್, ಬ್ಯಾಲದಹಳ್ಳಿ | 76815301021713 | 2,54,192-00 |
| 7 | ಶ್ರೀ ಪರಶುರಾಮಪ್ಪ ವಿಠಲಾಪುರ ಬಿನ್. ಧರ್ಮಪ್ಪ, ಭಾನುವಳ್ಳಿ | 76815301024514 | 1,15,813-00 |
| 8 | ಶ್ರೀ ಮಲ್ಲಿಕಾರ್ಜುನಪ್ಪ ಎಂ. ಬಿನ್. ಗುರುಬಸಪ್ಪ, ಬ್ಯಾಲದಹಳ್ಳಿ | 76815301026813 | 98,841-00 |
| 9 | ಶ್ರೀ ತಿಪ್ಪಣ್ಣ ಬಿನ್. ಸಿದ್ದಪ್ಪ, ಕುಣೆಬೆಳಕೆರೆ | 76815301029714 | 2,00,919-00 |
| 10 | ಶ್ರೀ ಮಹಾಂತೇಶ್ ಬಿನ್. ಹನುಮಗೌಡ, ಭಾನುವಳ್ಳಿ | 76815301030314 | 2,94,432-00 |
| 11 | ಶ್ರೀ ರುದ್ರಪ್ಪ ಬಿನ್. ಕೆಂಚಪ್ಪ, ನಂದಿತಾವರೆ | 76815301030714 | 21,916-00 |
| 12 | ಶ್ರೀ ಬಸವರಾಜಪ್ಪ ಬಿನ್. ಶಿವಪ್ಪ, ಭಾನುವಳ್ಳಿ | 76815301031513 | 1,28,201-00 |
| 13 | ಶ್ರೀ ತಿಪ್ಪಣ್ಣ ಬಿನ್. ಸಿದ್ದಪ್ಪ, ಕುಣೆಬೆಳಕೆರೆ | 76815301037214 | 16,596-00 |
| 14 | ಶ್ರೀ ಮಹೇಶ್ ಎ.ಹೆಚ್. ಬಿನ್. ಹನುಮಂತಪ್ಪ ಎ.ಬಿ., ಯಕ್ಕೆಗೊಂದಿ | 76815301039114 | 1,62,678-00 |
| 15 | ಶ್ರೀ ಚಿಕ್ಕಪ್ಪ ಬಿ. ಬಿನ್. ಬೀರಪ್ಪ, ಕುಣೆಬೆಳಕೆರೆ | 76815301041214 | 18,150-00 |
| 16 | ಶ್ರೀ ಪಿ.ಹೆಚ್. ಸಂತೋಷ್ ಬಿನ್. ಬಿ.ಪಿ. ಹನುಮಂತಪ್ಪ, ಕುಣೆಬೆಳಕೆರೆ | 76815301041814 | 2,36,152-00 |
| 17 | ಶ್ರೀ ಮುದಿಯಪ್ಪ ಎಂ.ಹೆಚ್. ಬಿನ್. ಹನುಮಂತಪ್ಪ, ಕೆ.ಬಿ.ಕೆರೆ | 76815301047613 | 97,324-00 |
| 18 | ಶ್ರೀ ಜಿಲಾನಿ ಬಿನ್. ಕಲೀಂ ಸಾಬಿದಾಯತ್‌ವುಲ್ಲಾ, ಹರಿಹರ ತಾ॥ | 76815301051014 | 81,736-00 |
| 19 | ಶ್ರೀ ಬಸವರಾಜ ಹೆಚ್. ಬಿ. ಬಿನ್. ಹೆಚ್.ಕೆ. ಕರಿಬಸಪ್ಪ, ಯಕ್ಕೆಗೊಂದಿ | 76815301051914 | 17,710-00 |
| 20 | ಶ್ರೀ ಮಂಜುನಾಥ ಎನ್.ಪಿ. ಬಿನ್. ಬಸವನಗೌಡ, ನಂದಿತಾವರೆ | 76815301055514 | 67,982-00 |
| 21 | ಶ್ರೀ ಹನುಮಗೌಡ ಕೆ.ಜಿ. ಬಿನ್. ರುದ್ರಗೌಡ ಕೆ.ಜಿ., ನಂದಿತಾವರೆ | 76815301064214 | 40,768-00 |
| 22 | ಶ್ರೀ ಪರಶುರಾಮಪ್ಪ ವಿಠಲಾಪುರ ಬಿನ್. ಧರ್ಮಪ್ಪ, ಭಾನುವಳ್ಳಿ | 76815301078814 | 1,49,100-00 |
| 23 | ಶ್ರೀಮತಿ ಶೈಲಾ ಭಟ್ ಕೋಂ. ಎನ್.ಎಸ್. ಪದ್ಮನಾಭಭಟ್, ನಂ. 612/1, ಗರ್ಲ್ಸ್ ಕಾನ್ವೆಂಟ್ ಹತ್ತಿರ, ಪಿ.ಜೆ. ಬಡಾವಣೆ, ದಾವಣಗೆರೆ. | 76815301080112 | 5,42,222-00 |
| 24 | ಶ್ರೀ ಹನುಮಗೌಡ ಕೆ.ಜಿ. ಬಿನ್. ರುದ್ರಗೌಡ ಕೆ.ಜಿ., ನಂದಿತಾವರೆ | 76815301081514 | 47,022-00 |
| 25 | ಶ್ರೀ ಪರಶುರಾಮಪ್ಪ ವಿಠಲಾಪುರ ಬಿನ್. ಧರ್ಮಪ್ಪ, ಭಾನುವಳ್ಳಿ | 76815301088014 | 49,669-00 |
| 26 | ಶ್ರೀ ಬೆಳಕೇರಪ್ಪ ಬಿ.ಆರ್. ಬಿನ್. ರೇವಣಪ್ಪ, ಕುಣೆಬೆಳಕೆರೆ | 76815301089814 | 38,027-00 |
| 27 | ಶ್ರೀ ಮುದಿಯಪ್ಪ ಎಂ.ಹೆಚ್. ಬಿನ್. ಹನುಮಂತಪ್ಪ, ಕೆ.ಬಿ.ಕೆರೆ | 76815301095613 | 1,15,924-00 |
| 28 | ಶ್ರೀ ನಾಗರಾಜ ಬಿನ್. ಪಟೇಲ್ ಹನುಮಂತಪ್ಪ, ಬ್ಯಾಲದಹಳ್ಳಿ | 76815301107713 | 2,00,941-00 |
| 29 | ಶ್ರೀ ಲೋಕಪ್ಪ ಬಿನ್. ಮಹೇಶ್ವರಪ್ಪ, ಕುಣೆಬೆಳಕೆರೆ | 76815302001819 | 36,856-00 |
| 30 | ಶ್ರೀ ತಿಪ್ಪಣ್ಣ ಬಿನ್. ಸಿದ್ದಪ್ಪ, ಕುಣೆಬೆಳಕೆರೆ | 76815302004615 | 85,817-00 |
| 31 | ಶ್ರೀ ಸುರೇಶಪ್ಪ ಬನ್. ಹೊಟ್ಟೆಪ್ಪ, ಕುಣೆಬೆಳಕೆರೆ | 76815302006815 | 98,221-00 |
| 32 | ಶ್ರೀ ಹನುಮಂತಪ್ಪ ಬಿನ್. ಮಲ್ಲೇಶಪ್ಪ, ಕುಣೆಬೆಳಕೆರೆ | 76815302007819 | 34,165-00 |
| 33 | ಶ್ರೀಮತಿ ಶಾಂತಾ ಕೆ.ಹೆಚ್. ಕೋಂ. ಬಿ.ವಿ. ರಮೇಶಾಚಾರ್, ಕುಣೆಬೆಳಕೆರೆ | 76815302009015 | 13,650-00 |
| 34 | ಶ್ರೀಮತಿ ಆರ್.ಶಿಲ್ಪ ಕೋಂ. ರೇವಣಸಿದ್ದಪ್ಪ ಸಿ.ಬಿ., ಕುಣೆಬೆಳಕೆರೆ | 76815302009119 | 21,684-00 |
| 35 | ಶ್ರೀಮತಿ ಶ್ರೀದೇವಿ ಟಿ. ಕೋಂ.ಶ್ರೀನಿವಾಸ್ ಟಿ. ಭಾಸ್ಕರ್‌ರಾವ್ ಕ್ಯಾಂಪ್, ನಂದಿತಾವರೆ. | 76815302011319 | 60,672-00 |
| 36 | ಶ್ರೀಮತಿ ರುದ್ರಮ್ಮ ಕೋಂ. ಹನುಮಂತಪ್ಪ, ಕುಣೆಬೆಳಕೆರೆ | 76815302013119 | 17,963-00 |
| 37 | ಶ್ರೀ ನಾಗರಾಜ ಎ.ಎಸ್. ಬಿನ್. ಸುರೇಂದ್ರಪ್ಪ, ಕುಣೆಬೆಳಕೆರೆ | 76815302019018 | 12,486-00 |
| 38 | ಶ್ರೀ ಅಂಗಡಿ ಕೆ.ಎಂ. ಬಿನ್. ಮುರಿಗೆಪ್ಪನವರ್, ನಂದಿತಾವರೆ | 76815302020416 | 1,62,182-00 |
| 39 | ಶ್ರೀಮತಿ ಬಿ.ಎಂ. ಉಮಾ ಕೋಂ. ರೇವಣಪ್ಪ, ಕುಣೆಬೆಳಕೆರೆ | 76815302021617 | 73,177-00 |
| 40 | ಶ್ರೀ ರೇವಣಪ್ಪ ಬಿನ್. ಬಸಪ್ಪ, ಕುಣೆಬೆಳಕೆರೆ | 76815302021817 | 35,730-00 |
| 41 | ಶ್ರೀ ಅಂಜಿನಪ್ಪ ಕೆ.ಆರ್. ಬಿನ್. ರೇವಣಪ್ಪ, ಕುಣೆಬೆಳಕೆರೆ | 76815302022318 | 12,081-00 |
| 42 | ಶ್ರೀ ಮಹೇಶ್ವರಪ್ಪ ಜಿ.ಬಿ. ಬಿನ್. ವೀರಭದ್ರಪ್ಪ, ನಂದಿತಾವರೆ | 76815302025815 | 93,055-00 |
| 43 | ಶ್ರೀ ಸಿದ್ದಪ್ಪ ಬಿನ್. ದ್ಯಾಮಪ್ಪ, ಕುಣೆಬೆಳಕೆರೆ | 76815302026015 | 57,832-00 |
| 44 | ಶ್ರೀ ಅಂಜಿನಿ ಬಿನ್. ತಿಪ್ಪಣ್ಣ, ಕುಣೆಬೆಳಕೆರೆ | 76815302030518 | 30,374-00 |
| 45 | ಶ್ರೀ ಅಂಜಿನಿ ಬಿನ್. ತಿಪ್ಪಣ್ಣ, ಕುಣೆಬೆಳಕೆರೆ | 76815302030618 | 21,046-00 |
| 46 | ಶ್ರೀ ಶಿವಪ್ಪ ಪಿ.ಕೆ. ಬಿನ್. ಕರಿಯಪ್ಪ, ಯಕ್ಕೆಗೊಂದಿ | 76815302033518 | 13,054-00 |
| 47 | ಶ್ರೀ ಸುರೇಶಪ್ಪ ಬಿನ್. ಹೊಟ್ಟೆಪ್ಪ, ಕುಣೆಬೆಳಕೆರೆ | 76815302034215 | 21,893-00 |
| 48 | ಶ್ರೀ ರಾಜೀವ ರೆಡ್ಡಿ ಬಿನ್. ರಾಮಪ್ಪ ರೆಡ್ಡಿ, ಭಾನುವಳ್ಳಿ | 76815302036316 | 73,148-00 |
| 49 | ಶ್ರೀ ಕರಿಯಪ್ಪ ಕೆ. ಯಾನೆ ಹಾವೇರಿ ಕರಿಯಪ್ಪ ಬಿನ್. ಕರಿಯಪ್ಪ, ಕುಣೆಬೆಳಕೆರೆ | 76815302037615 | 4,24,846-00 |
| 50 | ಶ್ರೀಮತಿ ಬಸಮ್ಮ ಕೋಂ. ತಿಪ್ಪೇಶಪ್ಪ, ಯಕ್ಕೆಗೊಂದಿ | 76815302038517 | 8,817-00 |
| 51 | ಶ್ರೀ ಪ್ರಕಾಶ್ ಜಿ.ಹೆಚ್. ಬಿನ್. ಗೋಣಪ್ಪ ಹನುಮಂತಪ್ಪ, ಕುಣೆಬೆಳಕೆರೆ | 76815302042816 | 81,946-00 |
| 52 | ಶ್ರೀ ಸುರೇಶ್ ಕೆ.ಎನ್. ಬಿನ್. ಕರಿಯಪ್ಪ, ಕುಣೆಬೆಳಕೆರೆ | 76815302056216 | 11,010-00 |
| 53 | ಶ್ರೀ ಶಶಿಧರ್ ಕೆ.ಬಿ. ಬಿನ್. ಬಸವನಗೌಡ, ನಂ. 768, 2ನೇ ಮೇನ್. 7ನೇ ಕ್ರಾಸ್, ನಿಜಲಿಂಗಪ್ಪ, ಹರಿಹರ ತಾ॥ | 76815302058115 | 4,50,713-00 |
| 54 | ಶ್ರೀ ಜಬೀವುಲ್ಲಾ ಬಿನ್. ಉಸ್ಮಾನ್‌ಸಾಬ್, ಕುಣೆಬೆಳಕೆರೆ | 76815302059818 | 18,763-00 |
| 55 | ಶ್ರೀಮತಿ ರೇಣುಕಮ್ಮ ಬಳ್ಳಾರಿ ಕೋಂ. ಹನುಮಂತಪ್ಪ, ಕುಣೆಬೆಳಕೆರೆ | 76815302060518 | 12,509-00 |
| 56 | ಶ್ರೀ ರವಿಕುಮಾರ್ ಹೆಚ್.ಎಸ್. ಬಿನ್. ಹಾವೇರಿ ಶಿವಪ್ಪ, ಕುಣೆಬೆಳಕೆರೆ | 76815302065918 | 35,281-00 |
| 57 | ಶ್ರೀ ವೀರೇಶ ಕೆ.ಪಿ. ಬಿನ್. ಪುಷ್ಪರಾಜು, ಭಾನುವಳ್ಳಿ | 76815302067416 | 56,484-00 |
| 58 | ಶ್ರೀ ಬೆಳ್ಳೂಡಿ ಚಿಕ್ಕಪ್ಪ ಬಿನ್. ಕೆಂಚಪ್ಪ, ಕುಣೆಬೆಳಕೆರೆ | 76815302068818 | 30,775-00 |
| 59 | ಶ್ರೀಮತಿ ಮಲ್ಲಮ್ಮ ಕೋಂ. ಶೇಖರಪ್ಪ, ಕುಣೆಬೆಳಕೆರೆ | 76815302069218 | 19,187-00 |
| 60 | ಶ್ರೀ ಚಂದ್ರಶೇಖರ್ ವೈ.ಡಿ. ಬಿನ್. ಯಡಿಚಿ ದೇವೇಂದ್ರಪ್ಪ, ಕುಣೆಬೆಳಕೆರೆ | 76815302069617 | 36,882-00 |
| 61 | ಶ್ರೀ ಮಂಜುನಾಥ ಬಿನ್. ನಾಗಪ್ಪ, ಬೆಳ್ಳೂಡಿ | 76815302071517 | 55,611-00 |
| 62 | ಶ್ರೀ ಪ್ರಕಾಶ್ ಜಿ.ಹೆಚ್. ಬಿನ್. ಗೋಣಪ್ಪ ಹನುಮಂತಪ್ಪ, ಕುಣೆಬೆಳಕೆರೆ | 76815302076817 | 12,622-00 |
| 63 | ಶ್ರೀ ಮಂಜಪ್ಪ ಬಿನ್. ಮಂಜಪ್ಪ, ಯಕ್ಕೆಗೊಂದಿ | 76815302081317 | 42,298-00 |
| 64 | ಶ್ರೀಮತಿ ಸುಶೀಲಮ್ಮ ಕೋಂ. ಕುಬೇರಗೌಡ, ನಂದಿತಾವರೆ | 76815302084216 | 3,12,537-00 |
| 65 | ಶ್ರೀ ಮಂಜಪ್ಪ ಬಿ. ಬಿನ್. ಬಸಪ್ಪ, ಕುಣೆಬೆಳಕೆರೆ | 76815302086015 | 64,650-00 |
| 66 | ಶ್ರೀ ಹನುಮಗೌಡ ಕೆ.ಜಿ. ಬಿನ್. ರುದ್ರಗೌಡ ಕೆ.ಜಿ., ನಂದಿತಾವರೆ | 76815302086715 | 70,803-00 |
| 67 | ಶ್ರೀ ರಾಜೀವ ರೆಡ್ಡಿ ಬಿನ್. ರಾಮಪ್ಪ ರೆಡ್ಡಿ, ಭಾನುವಳ್ಳಿ | 76815302087016 | 35,947-00 |
| 68 | ಶ್ರೀ ಮಂಜುನಾಥ ಬಿನ್. ನಾಗಪ್ಪ, ಬೆಳ್ಳೂಡಿ | 76815302088116 | 84,464-00 |
| 69 | ಶ್ರೀ ಮಂಜುನಾಥ ಬಿನ್. ನಾಗಪ್ಪ, ಬೆಳ್ಳೂಡಿ | 76815302090416 | 37,985-00 |
| 70 | ಶ್ರೀ ರಾಜೀವ ರೆಡ್ಡಿ ಬಿನ್. ರಾಮಪ್ಪ ರೆಡ್ಡಿ, ಭಾನುವಳ್ಳಿ | 76815302101615 | 56,107-00 |
| 71 | ಶ್ರೀ ಜಿಯಾವುಲ್ಲಾ ಬಿನ್. ಅಬ್ದುಲ್ ಖಲೀಲ್ ಖಾನ್, ಬ್ಯಾಲದಹಳ್ಳಿ | 76815302105814 | 43,268-00 |
| 72 | ಶ್ರೀ ರಾಮಪ್ಪ ಬಿನ್. ಸಿದ್ದಪ್ಪ ಗುಂಡೆಪ್ಪರ, ಕುಣೆಬೆಳಕೆರೆ | 76815302126615 | 56,432-00 |
| 73 | ಶ್ರೀ ಕೆ.ಎನ್. ರಾಜಪ್ಪ ಬಿನ್. ನಿಂಗಪ್ಪ, ಕುಣೆಬೆಳಕೆರೆ | 76815302133714 | 74,288-00 |
| 74 | ಶ್ರೀ ನಾಗರಾಜ ಬಿನ್. ಪಟೇಲ್ ಹನುಮಂತಪ್ಪ, ಬ್ಯಾಲದಹಳ್ಳಿ | 76815302134514 | 65,317-00 |

ಸ್ಥಳ : ದಾವಣಗೆರೆ
ದಿನಾಂಕ : 10-01-2021

ಸಹಿ/- ಕರ್ನಾಟಕ ಗ್ರಾಮೀಣ ಬ್ಯಾಂಕ್
ಪ್ರಾದೇಶಿಕ ಕಛೇರಿ,ದಾವಣಗೆರೆ.

# 16 ರಿಂದ ಲಸಿಕಾ ಅಭಿಯಾನ

**(3ನೇ ಪುಟದಿಂದ)** ಜನವರಿ 16ರಿಂದ ಲಸಿಕೆ ಆರಂಭಿಸಲು ನಿರ್ಧರಿಸಲಾಗಿದೆ ಎಂದು ಕೇಂದ್ರ ಸರ್ಕಾರದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಆರೋಗ್ಯ ಹಾಗೂ ಮುಂಚೂಣಿ ಕಾರ್ಯಕರ್ತರಿಗೆ ಆದ್ಯತೆಯ ಮೇಲೆ ಲಸಿಕೆ ನೀಡಲಾಗುವುದು. ನಂತರದಲ್ಲಿ 50 ವರ್ಷ ಮೀರಿದವರು ಹಾಗೂ 50 ವರ್ಷದೊಳಗೆ ಇತರೆ ರೋಗಗಳಿಂದ ಬಳಲುತ್ತಿರುವ 27 ಕೋಟಿ ಜನರಿಗೆ ಲಸಿಕೆ ನೀಡಲಾಗುವುದು ಎಂದು ಸರ್ಕಾರದ ಪ್ರಕಟಣೆಯಲ್ಲಿ ತಿಳಿಸಲಾಗಿದೆ. 50 ವರ್ಷದ ಮೇಲಿನವರನ್ನು ಗುರುತಿಸಲು ಇತ್ತೀಚಿನ ಲೋಕಸಭೆ ಹಾಗೂ ವಿಧಾನಸಬಾ ಚುನಾವಣೆಗಳ ಮತದಾರರ ಪಟ್ಟಿಯನ್ನು ಬಳಸಲಾಗುವುದು ಎಂದು ಆರೋಗ್ಯ ಸಚಿವಾಲಯ ತಿಳಿಸಿದೆ.

ಜನವರಿ 16ರಿಂದ ಭಾರತ ಕೊರೊನಾ ಲಸಿಕೆಯಲ್ಲಿ ಮಹತ್ವದ ಹೆಜ್ಜೆ ಇಡಲಿದೆ. ದಿಟ್ಟ ವೈದ್ಯರು, ಆರೋಗ್ಯ ಕಾರ್ಯಕರ್ತರು, ಸಫಾಯಿ ಕರ್ಮಚಾರಿಗಳೂ ಸೇರಿದಂತೆ ಮುಂಚೂಣಿ ಕಾರ್ಯಕರ್ತರಿಗೆ ಲಸಿಕೆ ನೀಡಲಾಗುವುದು ಎಂದು ಪ್ರಧಾನ ಮಂತ್ರಿ ಮೋದಿ ಟ್ವೀಟ್ ಮಾಡಿದ್ದಾರೆ.

ನಾಳೆ ಸೋಮವಾರದಂದು ಪ್ರಧಾನ ಮಂತ್ರಿ ಲಸಿಕೆ ಜಾರಿ ಕುರಿತು ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳ ಜೊತೆ ವಿಡಿಯೋ ಮೂಲಕ ಸಂವಾದ ನಡೆಸುವ ನಿರೀಕ್ಷೆ ಇದೆ. ಆಕ್ಸ್‌ಫರ್ಡ್‌ನ ಕೊವಿಶೀಲ್ಡ್ ಹಾಗೂ ಭಾರತ್ ಬಯೋಟೆಕ್‌ನ ಕೊವ್ಯಾಕ್ಸಿನ್ ಲಸಿಕೆಗಳ ಬಳಕೆಗೆ ಕೇಂದ್ರ ಸರ್ಕಾರ ಈಗಾಗಲೇ ಒಪ್ಪಿಗೆ ನೀಡಿದೆ. ಇನ್ನೂ ಕನಿಷ್ಠ ಏಳು ಲಸಿಕೆಗಳನ್ನು ಭಾರತದಲ್ಲಿ ರೂಪಿಸಲಾಗುತ್ತಿದೆ. ಕೆಲವನ್ನು ವಿದೇಶದಿಂದ ಆಮದು ಮಾಡಿಕೊಳ್ಳಬಹುದಾಗಿದೆ. ಫೈಜರ್ ಈಗಾಗಲೇ ಲಸಿಕೆ ಪೂರೈಕೆಗೆ ತುರ್ತು ಅನುಮತಿ ಕೋರಿ ಅರ್ಜಿ ಸಲ್ಲಿಸಿದೆ.

ಪ್ರಸಕ್ತ ದೇಶದಲ್ಲಿ 2.24 ಲಕ್ಷ ಸಕ್ರಿಯ ಕೊರೊನಾ ಸೋಂಕಿತರಿದ್ದಾರೆ. ಇದುವರೆಗೂ 1.04 ಕೋಟಿ ಜನರಲ್ಲಿ ಸೋಂಕು ಕಾಣಿಸಿಕೊಂಡಿದೆ ಎಂದು ಕೇಂದ್ರ ಸರ್ಕಾರದ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಆದರೆ, ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ಪ್ರತಿದಿನ 98 ಸಾವಿರದವರೆಗೆ ಸೋಂಕುಗಳು ಕಾಣಿಸಿಕೊಳ್ಳುತ್ತಿದ್ದವು. ಈಗ ಪ್ರತಿನಿತ್ಯದ ಸೋಂಕುಗಳ ಸಂಖ್ಯೆ 20 ಸಾವಿರಕ್ಕೂ ಕಡಿಮೆಯಾಗಿದೆ.

ಬ್ರಿಟನ್ ಹಾಗೂ ಅಮೆರಿಕ ಸೇರಿದಂತೆ ಹಲವಾರು ದೇಶಗಳು ಈಗಾಗಲೇ ಕೊರೊನಾ ಲಸಿಕೆ ನೀಡುವ ಅಭಿಯಾನ ಆರಂಭಿಸಿವೆ. ಭಾರತದಲ್ಲಿ ಮೊದಲ ಕೊರೊನಾ ಸೋಂಕು ಕೇರಳದಲ್ಲಿ 2020ರ ಜನವರಿ 30ರಂದು ಕಾಣಿಸಿಕೊಂಡಿತ್ತು. ಇದಾದ ಬಹುತೇಕ ಒಂದು ವರ್ಷದ ನಂತರ ಲಸಿಕೆಯ ಅಭಿಯಾನ ಆರಂಭವಾಗಲಿದೆ.

# ಅವಾಂತರ ಸೃಷ್ಟಿಸಿದ ಅನಿರೀಕ್ಷಿತ ಮಳೆ

**(3ನೇ ಪುಟದಿಂದ)** ಕಂಡು ಬಂತು.

**ಮೇಯರ್ ಅಜಯ್ ಭೇಟಿ:** ಮಳೆಯಿಂದ ಹಾನಿಗೊಳಗಾದ ಪ್ರದೇಶಗಳಾದ ಮಾಗನೂರು ಬಸಪ್ಪ ಶಾಲೆ, ಬೇತೂರು ರಸ್ತೆ, ಭರತ್ ಕಾಲೋನಿ, ಚಾಮರಾಜ ಪೇಟೆ, ಬಿ.ಡಿ ಲೇ ಔಟ್ ಮತ್ತಿತರೆ ಕಡೆ ಮಹಾನಗರ ಪಾಲಿಕೆ ಮೇಯರ್ ಬಿ.ಜಿ. ಅಜಯ್ ಕುಮಾರ್ ಹಾಗೂ ಆಯುಕ್ತ ವಿಶ್ವನಾಥ ಮುದಜ್ಜಿ ಭೇಟಿ ನೀಡಿ ಪರಿಶೀಲಿಸಿದರು.

ರಾಜಕಾಲುವೆ ಕಾಮಗಾರಿ ನಡೆಯುತ್ತಿದ್ದ ಸ್ಥಳದಲ್ಲಿ ಅಕ್ಕ ಪಕ್ಕದ ಮನೆಗಳಿಗೆ ನೀರು ನುಗ್ಗಿದ್ದನ್ನು ಮೇಯರ್ ತಂಡ ಗಮನಿಸಿತು. ಶಿವಕುಮಾರ ಸ್ವಾಮಿ ಬಡಾವಣೆಯಲ್ಲಿ ಸ್ಮಾರ್ಟ್ ಕಾಮಗಾರಿಯಿಂದಾಗಿ ಹಾಳಾಗಿದ್ದ ರಸ್ತೆಯಲ್ಲಿ ಓಡಾಟ ದುಸ್ತರವಾಗಿತ್ತು. ಮಣ್ಣು ಹಾಕಿ ಓಡಾಟಕ್ಕೆ ಅನುಕೂಲ ಮಾಡಿಕೊಡಲಾಯಿತು.

ಮತ್ತೊಂದು ಸ್ಮಾರ್ಟ್ ಕಾಮಗಾರಿ ಸ್ಥಳವಾದ ಎಲ್‌ಐಸಿ ಕಾಲೋನಿಯಲ್ಲಿ ರಾಜಕಾಲುವೆ ನಿರ್ಮಾಣ ಕಾಮಗಾರಿ ವೇಳೆ ಲಿಂಕ್ ಕೊಡದ ಪರಿಣಾಮ ಪ್ರತಿ ಬಾರಿ ಮಳೆ ಬಂದು ಸಮಸ್ಯೆ ಯಾಗುವಂತೆ ಈ ಬಾರಿಯೂ ನೀರು ನಿಂತಿತ್ತು. ಪಾಲಿಕೆ ವತಿಯಿಂದ ನಿಂತ ನೀರು ತೆಗೆಸಲಾಯಿತು.

ಮೇಯರ್ ಭೇಟಿ ವೇಳೆ ಪಾಲಿಕೆ ಸದಸ್ಯರಾದ ಎಸ್. ಟಿ. ವೀರೇಶ್, ಕೆ.ಎನ್. ವೀರೇಶ್, ಮಂಜಾನಾಯ್ಕ, ಮುಖಂಡ ನರೇಂದ್ರ ಕುಮಾರ್ ಇತರರು ಇದ್ದರು.

## 30.97 ಮಿ.ಮೀ. ಮಳೆ

**(3ನೇ ಪುಟದಿಂದ)** ಹಾನಿಯಾಗಿದ್ದು 26 ಸಾವಿರ ರೂ. ನಷ್ಟ ಸಂಭವಿಸಿದೆ. ಹರಿಹರ ತಾಲ್ಲೂಕಿನಲ್ಲಿ 1 ಪಕ್ಕಾ ಮನೆ ಹಾನಿಯಿಂದ 50 ಸಾವಿರ ರೂ., 2 ಕಚ್ಚಾ ಮನೆ ಹಾನಿಯಾಗಿ 70 ಲಕ್ಷ ರೂ. ನಷ್ಟ ಸಂಭವಿಸಿದೆ.

45 ಎಕರೆ ಜೋಳ ಮತ್ತು 7 ಎಕರೆ ಕಡಲೆ ಸೇರಿ ಒಟ್ಟು 52 ಎಕರೆ ಬೆಳೆ ಹಾನಿಯಾಗಿದ್ದು 2.20 ಲಕ್ಷ ರೂ. ನಷ್ಟ ಸಂಭವಿಸಿದೆ. 10 ಕುರಿಗಳು ಸಿಡಿಲು ಬಡಿತದಿಂದ ಮೃತಪಟ್ಟಿದ್ದು 50 ಸಾವಿರ ರೂ. ನಷ್ಟವಾಗಿದೆ.

ನ್ಯಾಮತಿ ತಾಲ್ಲೂಕಿನಲ್ಲಿ 2 ಪಕ್ಕಾ ಮನೆಗೆ ಹಾನಿಯಾಗಿ 70 ಸಾವಿರ ರೂ. ನಷ್ಟ, ಚನ್ನಗಿರಿ ತಾಲ್ಲೂಕಿನಲ್ಲಿ 5 ಪಕ್ಕಾ ಮನೆಗೆ ಹಾನಿಯಾಗಿದ್ದು, 1.30 ಲಕ್ಷ ರೂ. ನಷ್ಟ ಹಾಗೂ ಜಗಳೂರು ತಾಲ್ಲೂಕಿನಲ್ಲಿ 2 ಕಚ್ಚಾ ಮನೆಗೆ ಹಾನಿಯಾಗಿದ್ದರಿಂದ 80 ಸಾವಿರ ರೂ. ನಷ್ಟು ನಷ್ಟ ಸಂಭವಿಸಿದೆ. 3 ಕುರಿಗಳು ಸಿಡಿಲು ಬಡಿತದಿಂದ ಮೃತಪಟ್ಟು 24 ಸಾವಿರ ರೂ. ನಷ್ಟ ಸಂಭವಿಸಿದೆ.

## ನವಜಾತ ಶಿಶುಗಳ ಸಾವು

**(3ನೇ ಪುಟದಿಂದ)** ಮಕ್ಕಳನ್ನು ರಕ್ಷಿಸಿದ್ದಾರೆ. ನಾಲ್ಕು ಮಹಡಿಗಳ ಕಟ್ಟಡದಲ್ಲಿ ಬೆಂಕಿ ಹೇಗೆ ಕಾಣಿಸಿಕೊಂಡಿತು ಎಂಬುದು ಇನ್ನೂ ಪತ್ತೆಯಾಗಿಲ್ಲ. ಎಲೆಕ್ಟ್ರಿಕ್ ಶಾರ್ಟ್ ಸರ್ಕ್ಯೂಟ್ ಇದಕ್ಕೆ ಕಾರಣ ಎಂದು ಹೇಳಲಾಗುತ್ತಿದೆ.

ರಾಷ್ಟ್ರಪತಿ ರಾಮ ನಾಥ ಕೋವಿಂದ್, ಪ್ರಧಾನ ಮಂತ್ರಿ ನರೇಂದ್ರ ಮೋದಿ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮತ್ತಿತರರು ಘಟನೆಯ ಬಗ್ಗೆ ಸಂತಾಪ ವ್ಯಕ್ತಪಡಿಸಿದ್ದಾರೆ.

ವಿದ್ಯುತ್ ಸಮಸ್ಯೆಯ ಬಗ್ಗೆ ಮಕ್ಕಳ ಪೋಷಕರು ತಿಳಿಸಿದ್ದರು. ಆದರೂ, ಸಹ ಕ್ರಮ ತೆಗೆದುಕೊಂಡಿರಲಿಲ್ಲ ಎಂದು ಮಹಾರಾಷ್ಟ್ರದ ಮಾಜಿ ಸಚಿವ ಚಂದ್ರಶೇಖರ್ ಬವಂಕುಲೆ ಆರೋಪಿಸಿದ್ದು, ಘಟನೆಯ ಉನ್ನತ ಮಟ್ಟದ ತನಿಖೆಗೆ ಒತ್ತಾಯಿಸಿದ್ದಾರೆ. ಅಗ್ನಿ ಅವಘಡದಲ್ಲಿ ಸಾವನ್ನಪ್ಪಿದ ಶಿಶುಗಳ ಪೈಕಿ, ಹುಟ್ಟಿದಾಗಲೇ ತಂದೆ - ತಾಯಿಗಳಿಗೆ ಬೇಡವಾದ ಗಂಡು ಮಗುವೂ ಸಹ ಸೇರಿದೆ. ಕೇಶಲವಾಡ ಹಳ್ಳಿಯಲ್ಲಿ ಕಳೆದ ವಾರ ಈ ಮಗು ಪತ್ತೆಯಾಗಿದ್ದು ಸ್ಥಳೀಯ ಪತ್ರಿಕೆಗಳಲ್ಲಿ ಸುದ್ದಿಯಾಗಿತ್ತು.

## ಇಂಡೋನೇಷಿಯಾ ವಿಮಾನ ಪತನ

**(3ನೇ ಪುಟದಿಂದ)** ಇಂಡೋನೇಷಿಯಾದ ನಾಗರಿಕರೇ ಆಗಿದ್ದಾರೆ.

ವಿಮಾನ ಕಣ್ಮರೆಯಾದ ನಂತರ ಬೆಸ್ತರು ವಿಮಾನಗಳ ಕೆಲ ಅವಶೇಷಗಳನ್ನು ಪತ್ತೆ ಮಾಡಿದ್ದಾರೆ. ಇವುಗಳು ಕಣ್ಮರೆಯಾಗಿರುವ ವಿಮಾನದ್ದೇ ಎಂಬುದನ್ನು ಪತ್ತೆ ಮಾಡಲಾಗುತ್ತಿದೆ.

ತಮಗೆ ಸಿಡಿಲಿನಂತಹ ಶಬ್ದ ಕೇಳಿಸಿತು. ನಂತರ ಅವಶೇಷಗಳು ಪತ್ತೆ ಯಾಗಿವೆ ಎಂದು ಬೆಸ್ತರು ಹೇಳಿದ್ದಾರೆ. ಅವಶೇಷ ಪತ್ತೆಯಾದ ಸ್ಥಳದಲ್ಲಿ ವೈಮಾನಿಕ ಇಂಧನವೂ ದೊರೆತಿದೆ.

# ಮಳೆಗೆ ಕೊಚ್ಚಿ ಹೋದ ಇಟ್ಟಿಗೆ ಭಟ್ಟಿ

**(3ನೇ ಪುಟದಿಂದ)** ನಿರ್ಮಾಣ ಕಾರ್ಯಕ್ಕೆ ರಾಜ್ಯದ ನಾನಾ ಭಾಗಗಳಿಗೆ ಪೂರೈಕೆಯಾಗುತ್ತದೆ.

ಇಟ್ಟಿಗೆ ತಯಾರಿಕಾ ಕಾರ್ಯ ದೀಪಾವಳಿ ಹಬ್ಬದ ನಂತರ ಪ್ರಾರಂಭವಾಗಲಿದ್ದು ಬಿಜಾಪುರ, ಗದಗ, ಹಾವೇರಿ ಸೇರಿದಂತೆ ಮುಂತಾದ ಜಿಲ್ಲೆಗಳಿಂದ ಸಾವಿರಾರು ಸಂಖ್ಯೆಯಲ್ಲಿ ಕಾರ್ಮಿಕರು ಕುಟುಂಬ ಸಮೇತ ಬಂದು ಬೀಡು ಬಿಡುತ್ತಾರೆ. ಈಗಾಗಲೇ ಕೋಟ್ಯಾಂತರ ಇಟ್ಟಿಗೆಗಳು ಸಿದ್ಧಗೊಂಡು ಸುಡುವ ಹಂತದವರೆಗೆ ಬಂದಾಗ ದಿಢೀರ್ ಸುರಿದ ಅಕಾಲಿಕ ಮಳೆಯಿಂದಾಗಿ ಎಲ್ಲವೂ ನೀರು ಪಾಲಾಗಿ ಕೋಟ್ಯಾಂತರ ರೂಪಾಯಿ ಮೌಲ್ಯದ ಇಟ್ಟಿಗೆಗಳು ಹಾಳಾಗಿ ಇಟ್ಟಿಗೆ ಉದ್ಯಮಕ್ಕೆ ದೊಡ್ಡ ಕೊಡಲಿ ಪೆಟ್ಟನ್ನು ಪ್ರಕೃತಿ ನೀಡಿದೆ.

ಸಿ.ಎಚ್.ಪಿ ಇಟ್ಟಿಗೆ ಭಟ್ಟಿಯ ಮಾಲೀಕ ಷಣ್ಮುಖ ಪೂಜಾರ್ ಮಾತನಾಡಿ, ನಾವು ಕಳೆದ ಮೂರು ತಿಂಗಳಿಂದ ಬೆಳಗಿನ ಜಾವ ನಾಲ್ಕು ಗಂಟೆಗೆ ಎದ್ದು ಕಷ್ಟ ಪಡುತ್ತಿದ್ದೇವೆ. ಸಾಲಸೋಲ ಮಾಡಿ ಬಡ್ಡಿ ಕಟ್ಟಿ ಹಣ ತಂದು ಇಟ್ಟಿಗೆ ತಯಾರಿಕಾ ಕಾರ್ಯ ಆರಂಭಿಸಿರುತ್ತೇವೆ. ಒಂದು ಇಟ್ಟಿಗೆಗೆ ಕನಿಷ್ಟ ಅಂದರೂ 4 ರಿಂದ 5 ರೂಪಾಯಿ ವೆಚ್ಚವಾಗುತ್ತದೆ. ಕಾರ್ಮಿಕ ಕುಟುಂಬಕ್ಕೆ ಎಲ್ಲಾ ರೀತಿಯ ಆರ್ಥಿಕ ನೆರವು ಸಹ ನೀಡಬೇಕಾಗಿರುತ್ತದೆ. ಆದರೆ ಪ್ರಕೃತಿಯ ವಿಧಿ ಆಟದಿಂದ ನಾವು ಜೀವನ ನಡೆಸುವುದು ಬಹಳ ಕಷ್ಟವಾಗುತ್ತದೆ. ಸಾಲವನ್ನು ಮರುಪಾವತಿ ಮಾಡುವುದು ಕಷ್ಟವಾಗುತ್ತದೆ. ಅಕಾಲಿಕ ಮಳೆಯಿಂದಾಗಿ ಈ ಭಾಗದ ಸುತ್ತಮುತ್ತಲಿನ ಸುಮಾರು 350 ಕ್ಕೂ ಹೆಚ್ಚು ಇಟ್ಟಿಗೆ ಭಟ್ಟಿಗಳಿಂದ ಅಂದಾಜು 30 ಕೋಟಿಗೂ ಹೆಚ್ಚು ರೂ.ನಷ್ಟು ನಷ್ಟವಾಗಿರಬಹುದು. ಇಷ್ಟು ದಿನದ ಶ್ರಮ ಹಾಗೂ ಬಂಡವಾಳ ನೀರಿನಲ್ಲಿ ಕೊಚ್ಚಿ ಹೋಗಿದೆ. ನಮ್ಮ ನೋವು ಕೇಳಲು ಇಲ್ಲಿಯವರೆಗೆ ಯಾವುದೇ ಅಧಿಕಾರಿಗಳು ಮತ್ತು ಜನ ಪ್ರತಿನಿಧಿಗಳು ಬಾರದೆ ಇರುವುದು ಸಹ ನಮ್ಮ ಮನಸ್ಸಿಗೆ ನೋವು ತರಿಸಿದೆ ಎಂದು ಹೇಳಿದರು. ಮುಂದಿನ ದಿನಗಳಲ್ಲಿ ಇಟ್ಟಿಗೆ ದರಗಳು ಸಹ ದುಪ್ಪಟ್ಟು ಆಗುವ ಸೂಚನೆ ಇದ್ದು, ಇದರ ಹೊರೆಯನ್ನು ಮನೆಗಳನ್ನು ನಿರ್ಮಾಣ ಮಾಡುವ ಗ್ರಾಹಕರು ಹೊರಬೇಕಾಗಿದೆ.

ಸತತ ಮೂರು ನಾಲ್ಕು ದಿನಗಳಿಂದ ಸುರಿಯುತ್ತಿರುವ ಮಳೆಯಿಂದಾಗಿ ಅನೇಕ ಮನೆಗಳಿಗೆ ನೀರು ನುಗ್ಗಿ ಮನೆಯಲ್ಲಿ ಇದ್ದ ಪಾತ್ರೆಗಳು ಚರಂಡಿಯಲ್ಲಿ ತೇಲಿಕೊಂಡು ಹೋಗಿವೆ. ಮತ್ತು ಜಮೀನುಗಳಿಗೆ ನೀರು ನುಗ್ಗಿರುವುದರಿಂದ ಬೆಳ್ಳೂಡಿ, ಬನ್ನಿಕೋಡು, ಭಾನುವಳ್ಳಿ ಮುಂತಾದ ಗ್ರಾಮಗಳಲ್ಲಿ ಮೆಕ್ಕೆಜೋಳ ಬೆಳೆ ನೀರಿನಲ್ಲಿ ಕೊಚ್ಚಿಕೊಂಡು ಹೋಗಿವೆ.

ಈ ಸಂದರ್ಭದಲ್ಲಿ ಪೂಜಾರ್ ಈರಣ್ಣ, ಎಂ.ಎಂ.ಪಿ. ನಾಗರಾಜ್, ಎಂ.ಹೆಚ್.ಪಿ. ಬಸವರಾಜ್, ಎಂ.ಹೆಚ್.ಎಸ್. ಭೀಮಣ್ಣ, ಶಂಕ್ರಪ್ಪ ಅಮರಾವತಿ, ನಾಗರಾಜ್ ಗುತ್ತೂರು, ಗುರುಬಸಪ್ಪ ಪೂಜಾರ್, ಅಣ್ಣಪ್ಪ ಪೂಜಾರ, ಬಸವರಾಜ್ ಪೂಜಾರ್, ಹಾಲೇಶಪ್ಪ, ಬಿ.ಆರ್.ಎಸ್. ನಾಗರಾಜ್, ಆನಂದ್, ಈರಣ್ಣ ಬಿಜೆಪಿ , ಚಂದ್ರಪ್ಪ, ಇನ್ನಿತರರಿದ್ದರು.

### ಅಕಾಲಿಕ ಮಳೆಗೆ ಬೆಳೆ-ಆಸ್ತಿಪಾಸ್ತಿಗೆ ನಷ್ಟ

ಹರಿಹರ ತಾಲ್ಲೂಕಿನಲ್ಲಿ ಸರಾಸರಿ 59 ಮಿಲಿ ಮೀಟರ್‌ನಷ್ಟು ಮಳೆಯಾಗಿದೆ ಎಂದು ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ ತಿಳಿಸಿದ್ದಾರೆ.

ಅಕಾಲಿಕ ಮಳೆಗೆ ಗುತ್ತೂರಿನಲ್ಲಿ ಒಂದು ಕಚ್ಚಾ ಮನೆಗೆ ಭಾಗಶಃ ಹಾನಿ ಹಾಗೂ ಕೊಂಡಜ್ಜಿಯಲ್ಲಿ ಒಂದು ಕಚ್ಚಾ ಮನೆಗೆ ಭಾಗಶಃ ಹಾನಿಯಾದ ಪರಿಣಾಮ ತಲಾ 40,000 ರೂಪಾಯಿಯಷ್ಟು ನಷ್ಟವಾಗಿದೆ. ಮಿಟ್ಲಕಟ್ಟೆಯಲ್ಲಿ ಒಂದು ಪಕ್ಕಾಮನೆಗೆ ಭಾಗಶಃ ಹಾನಿಯಾಗಿದ್ದು, 50,000 ರೂಪಾಯಿಯಷ್ಟು ನಷ್ಟವಾಗಿದೆ.

ಹೊಸಹಳ್ಳಿ ಗ್ರಾಮದಲ್ಲಿ 45 ಎಕರೆಯಷ್ಟು ಊಟದ ಜೋಳದ ಬೆಳೆಗೆ ಹಾನಿಯಾಗಿದ್ದು, ಅಂದಾಜು 1.40 ಲಕ್ಷರೂಪಾಯಿಯಷ್ಟು ನಷ್ಟವಾಗಿದೆ. ಸಿರಿಗೆರೆ ಗ್ರಾಮದಲ್ಲಿ 7 ಎಕರೆ ಕಡ್ಲೇಬೇಳೆ ಬೆಳೆಗೆ ಹಾನಿಯಾಗಿದ್ದು, ಅಂದಾಜು 80,000 ರೂಪಾಯಿಯಷ್ಟು ನಷ್ಟವಾಗಿದೆ ಎಂದಿದ್ದಾರೆ.

ಬೆಳ್ಳೂಡಿ ಗ್ರಾಮದಲ್ಲಿ ಸಿಡಿಲಿಗೆ 10 ಕುರಿಗಳು ಸಾವನ್ನಪ್ಪಿದ್ದು, ಅಂದಾಜು 50,000 ರೂಪಾಯಿ ನಷ್ಟವಾಗಿದೆ ಎಂದು ರಾಮಚಂದ್ರಪ್ಪ ತಿಳಿಸಿದ್ದಾರೆ.

# ರಾಶಿ ಭವಿಷ್ಯ

**ದಿನಾಂಕ : 10.01.2021 ರಿಂದ 16.01.2021**
**- ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ) (ಚೂ.ಚೇ.ಚೋ.ಲ.ಲಿ.ಉ.ಲೇ.ಲೊ.ಅ.)ಮೇಷರಾಶಿ**
ವೈಯಕ್ತಿಕ ಸಮಸ್ಯೆಯೊಂದು ಬಗೆಹರಿಯಲಿದೆ. ಮಕ್ಕಳ ಆರೋಗ್ಯದಲ್ಲಿ ಉದಾಸೀನ ಬೇಡ, ಖರ್ಚು-ವೆಚ್ಚಗಳ ಬಾಬ್ತು ಹೆಚ್ಚಾಗಬಹುದು. ಸರ್ಕಾರಿ ನೌಕರರಿಗೆ ಬರಬೇಕಾಗಿರುವ ಸವಲತ್ತುಗಳು ದೊರೆಯಲಿವೆ. ನಿರುದ್ಯೋಗಿ ಪದವೀಧರರಿಗೆ ಇಷ್ಟರಲ್ಲೇ ನೇಮಕಾತಿ ಆದೇಶ ಪತ್ರ ಕೈ ಸೇರಲಿದೆ. ಹಣದ ಹರಿವು ಸಾಧಾರಣ. ಉದ್ಯಮಿಗಳು, ತಮ್ಮ ನೌಕರರ ಮೇಲೆ ಕ್ರಮೇಣ ಹಿಡಿತ ಸಾಧಿಸುವುದು ಲೇಸು. ವ್ಯವಹಾರಗಳಲ್ಲಿ ಒಪ್ಪಂದ ಮಾಡಿಕೊಳ್ಳುವಾಗ ತುಸು ಎಚ್ಚರದಿಂದಿರಿ.ಬರಬೇಕಾಗಿರುವ ಹಣದ ವಿಷಯದಲ್ಲಿ ಸ್ವಲ್ಪ ತಕರಾರು ಉಂಟಾಗಬಹುದು. ಅನಗತ್ಯ ಚಿಂತೆಗಳನ್ನು ಸಾಧ್ಯವಾದಷ್ಟು ಕಡಿಮೆ ಮಾಡುವುದು ಉತ್ತಮ, ಆಸ್ತಿ ಖರೀದಿ ಅಥವಾ ಮಾರಾಟದ ವಿಷಯಗಳನ್ನು ಸದ್ಯಕ್ಕೆ ಮುಂದೂಡುವುದು ಲೇಸು ಭಾನು-ಮಂಗಳ-ಬುಧ ಶುಭ ದಿನಗಳು.

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2) (ಇ.ಉ.ಎ.ಒ.ವ.ವಿ.ವು.ವೆ.ವೋ)**
ಕೆಲವೊಮ್ಮೆ ನಿಮ್ಮ ನಡಾವಳಿಯಿಂದಾಗಿ ಬಂಧು-ಮಿತ್ರರು ನಿಮ್ಮ ಸಹವಾಸದಿಂದ ದೂರವಾಗಬಹುದು. ವಿಜ್ಞಾನಿಗಳ ಸಂಶೋಧನಾ ಕಾರ್ಯಗಳಿಗೆ ಸರ್ಕಾರದಿಂದ ಸಂಪೂರ್ಣ ಬೆಂಬಲ, ರಕ್ಷಣಾ ಇಲಾಖೆಯಲ್ಲಿರುವವರಿಗೆ ಹೆಚ್ಚಿನ ಜವಾಬ್ದಾರಿ ಬೀಳಲಿದೆ. ನಿಮ್ಮಿಂದಾದ ತಪ್ಪನ್ನು, ಮತ್ತೊಬ್ಬರ ಮೇಲೆ ಹೊರಿಸಲು ಹೋಗಿ ನೀವೇ ಅಪಮಾನಕ್ಕೆ ಒಳಗಾಗುವಿರಿ. ವೈಯಕ್ತಿಕ ಆದಾಯದಲ್ಲಿ ಹೆಚ್ಚಿನ ಕಡಿತವಾಗುವುದರಿಂದ ಕೃಷಿಕ ಮಿತ್ರರಿಗೆ, ಕಾರ್ಮಿಕರಿಗೆ ಸಮಸ್ಯೆ ಎದುರಾಗಬಹುದು. ಆರೋಗ್ಯದ ವಿಷಯದಲ್ಲಿ ರಾಜೀಬೇಡ .ಹಿರಿಯರಿಂದ, ಸ್ವಲ್ಪ ಕೃಷಿ ಭೂಮಿ ನಿಮಗೆ, ಬಳುವಳಿಯಾಗಿ ಬರಬಹುದು. ಹೊಂದಾಣಿಕೆ ಅನಿವಾರ್ಯವಾಗಲಿದೆ. ದೂರ ಪ್ರಯಾಣ ಬೇಡ. ಸೋಮ-ಬುಧ-ಶುಕ್ರ ಶುಭ ದಿನಗಳು.

**ಮಿಥುನ (3,4, ಆರಿದ್ರಾ, ಪುನರ್ವಸು 1,2,3) (ಕ.ಕಿ.ಕು.ಘ, ಙ, ಚ.ಕೆ.ಕೋ.ಹ.)**
ನಿಮ್ಮ ಕಾರ್ಯಕ್ಷೇತ್ರಕ್ಕೆ ಸಹನಶೀಲರಾದಂತಹ, ಕ್ರಿಯಾಶೀಲರಾದಂತಹ, ಉತ್ಸಾಹಶಾಲಿಗಳೇ ಸ್ನೇಹಿತರಾಗಿ ಸಿಗಲಿದ್ದಾರೆ. ಅನಿರೀಕ್ಷಿತ ಮೂಲಗಳಿಂದ ಹಣದ ಹರಿವು, ನಿಮ್ಮ ಎಲ್ಲಾ ಯೋಜನೆಗಳಿಗೆ ನೆರವಾಗಲಿದೆ. ಶ್ರಮಜೀವಿಗಳಿಗೆ, ಬಿಡುವಿಲ್ಲದ ಕೆಲಸದಿಂದಾಗಿ, ದೈಹಿಕ ಶ್ರಮ ಹೆಚ್ಚಾಗಲಿದೆ. ಲೆಕ್ಕಪರಿಶೋಧಕರಿಗೆ, ನಿರಂತರ ಕೆಲಸ ಒದಗಿಬರಲಿದೆ. ಆದಾಯದ ಮೂಲದಲ್ಲಿ ಹೆಚ್ಚಳ, ಬ್ಯಾಂಕ್ ನೌಕರರಿಗೆ ಮೇಲಾಧಿಕಾರಿಗಳಿಂದ ಒತ್ತಡ, ಅತಿಯಾದ ಭೋಜನ ಕೂಟ, ಆರೋಗ್ಯದ ಮೇಲೆ ಅಡ್ಡಪರಿಣಾಮ ಬೀರಬಹುದು. ಕಳೆದು ಹೋಗಿದ್ದ, ಹಳೆದಾಖಲೆಗಳು, ಸಿಗಲಿವೆ. ವಾಹನಗಳಲ್ಲಿ ಎಚ್ಚರದಿಂದಿರಿ. ಹಿರಿಯರ ಕೋರಿಕೆಗಳನ್ನು ಈಡೇರಿಸಲು ಪ್ರಯತ್ನಿಸಿ. ಬುಧ-ಗುರು-ಶುಕ್ರ ಶುಭ ದಿನಗಳು.

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ) (ಹಿ.ಹು.ಹೆ.ಹೂ.ಡ.ಡಿ.ಡು.ಡೆ.ಡೋ)**
ಸಾಲವನ್ನು ತೀರಿಸಲು ಅನುಕೂಲವಾದ ಸಮಯ, ಮಂದಗತಿಯಲ್ಲಿ ಸಾಗಿದ್ದ ಕೆಲಸಗಳು, ಇನ್ನು ಮುಂದೆ ಚುರುಕು ಪಡೆಯಲಿವೆ. ವೃಥಾ ಕಾಲ ಕಳೆಯುವುದರಿಂದ ವಿದ್ಯಾರ್ಥಿಗಳು, ಬರಲಿರುವ ಉತ್ತಮ ಅವಕಾಶಗಳನ್ನು ಕಳೆದುಕೊಳ್ಳುವರು, ಮುಂದೆ ಪಶ್ಚಾತ್ತಾಪ ಪಟ್ಟರೂ ಪ್ರಯೋಜನಕ್ಕೆ ಬಾರದು. ಖಾದ್ಯ ತೈಲ, ರಾಸಾಯನಿಕ ದ್ರವ್ಯ ತಯಾರಕರಿಗೆ ಉತ್ತಮ ವಹಿವಾಟು, ಗರ್ಭಿಣಿ ಸ್ತ್ರೀಯರು ತಮ್ಮ ಆರೋಗ್ಯದ ಬಗ್ಗೆ ನಿಗಾವಹಿಸುವುದು ಉತ್ತಮ. ರೈತಾಪಿ ಮಿತ್ರರಿಗೆ ಸರ್ಕಾರದಿಂದ ಸಕಲ ಸೌಲಭ್ಯಗಳು ದೊರೆಯಲಿವೆ. ಮಿತ್ರರೊಂದಿಗೆ ಮೋಜು ಮಾಡಬೇಕೆಂಬ ನಿಮ್ಮ ಆಸೆ ನಿರಾಸೆಯಾಗಬಹುದು. ಎತ್ತರದ ಪ್ರದೇಶದಲ್ಲಿ ನಡೆಯುವಾಗ ಬಹಳ ಎಚ್ಚರದಿಂದಿರಿ. ಭಾನು-ಮಂಗಳ-ಗುರು ಶುಭ ದಿನಗಳು.

**ಸಿಂಹ ( ಮಘ, ಪುಬ್ಬ, ಉತ್ತರ 1) (ಮ.ಮಿ.ಮು.ಮೋ.ವೆ.ಟ.ಟಿ.ಟು.ಟೆ)**
ಊಟೋಪಚಾರದಲ್ಲಿ ಎಚ್ಚರ ವಹಿಸಿ, ಆದಾಯಕ್ಕೆ ತಕ್ಕಂತೆ ಖರ್ಚು-ವೆಚ್ಚಗಳ ಮೇಲೆ ಹಿಡಿತವಿರಲಿ, ಖಾಸಗಿ ಕಂಪನಿ ನೌಕರರು ಮೇಲಾಧಿಕಾರಿಗಳ ಕೋಪಕ್ಕೆ ತುತ್ತಾಗಬಹುದು. ಕೈತಪ್ಪಿ ಹೋಗಿದ್ದ ಹಿರಿಯರ ಆಸ್ತಿಯಲ್ಲಿ, ನಿಮ್ಮ ಪಾಲು ಮಧ್ಯಸ್ಥರ ಮೂಲಕ ದೊರೆಯಲಿದೆ. ಕುಟುಂಬದ ಸದಸ್ಯರ ಬೇಡಿಕೆಯ ಪಟ್ಟಿ ದೊಡ್ಡದಾಗುತ್ತಾ ಹೋಗಲಿದೆ. ಅವುಗಳನ್ನು ಈಡೇರಿಸುವುದು ನಿಮಗೆ ಅನಿವಾರ್ಯವಾಗಬಹುದು. ಅಮೂಲ್ಯ ವಸ್ತುಗಳ ಬಗ್ಗೆ ಎಚ್ಚರವಿರಲಿ, ಬೇರೆಯವರ ಸಮಸ್ಯೆಗಳನ್ನು ಎದುರಿಸಲು ಹೋದರೆ ಆಪಾದನೆ, ಅಪಮಾನಗಳನ್ನು ಎದುರಿಸಬೇಕಾದೀತು. ಕೆಲವು ವಿಷಯಗಳಲ್ಲಿ ಅನುಭವಿಗಳ ಸಲಹೆ ಪಡೆಯುವುದು ಉತ್ತಮ. ಭಾನು-ಸೋಮ-ಮಂಗಳ ಶುಭ ದಿನಗಳು.

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2) (ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**
ಸಂಗೀತ ಕಲಾವಿದರಿಗೆ ಉತ್ತಮ ಅವಕಾಶಗಳು, ಸರ್ಕಾರದಿಂದ ಸನ್ಮಾನ. ಕುಸಿದು ಹೋಗಿದ್ದ ವ್ಯವಹಾರದಲ್ಲಿ ಮತ್ತೆ ಪುನಶ್ಚೇತನ ಕಂಡುಬರಲಿದೆ.ರಕ್ಷಣಾ ತಂತ್ರಜ್ಞಾನ ಸಂಶೋಧಕರಿಗೆ ಕೇಂದ್ರಾಳಿತದಿಂದ ಹೆಚ್ಚಿನ ಬೆಂಬಲ ದೊರೆಯಲಿದೆ. ಹಣಕಾಸು ಅಗತ್ಯಕ್ಕೆ ತಕ್ಕಷ್ಟು ಇರುವುದರಿಂದ ಹೊಸ ಯೋಜನೆಗಳನ್ನು ಸದ್ಯಕ್ಕೆ ಮುಂದೂಡುವುದು ಉತ್ತಮ. ಮಕ್ಕಳೊಂದಿಗಿದ್ದ ಭಿನ್ನಾಭಿಪ್ರಾಯ ದೂರವಾಗಲಿದೆ. ಹಿರಿಯರಿಗೆ ಮೂಳೆ ಸಂಬಂಧಿ ಸಮಸ್ಯೆಗಳು ಕಾಡಬಹುದು. ಬಂಧುಗಳ ಮನೆಯಲ್ಲಿ ನಡೆಯುವ ಶುಭ ಕಾರ್ಯಗಳಲ್ಲಿ ಭಾಗವಹಿಸುವಿರಿ. ಕುಲದೇವತಾ ದರ್ಶನ ಪಡೆಯುವಿರಿ. ಬುಧ-ಗುರು-ಶನಿ ಶುಭ ದಿನಗಳು.

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3) (ರ.ರಿ.ರು.ರೆ.ರೊ.ತ.ತಿ.ತು.ತೆ.)**
ಪ್ರತಿಭಾವಂತರ ಪ್ರತಿಭಾ ಪ್ರದರ್ಶನಕ್ಕೆ ಸೂಕ್ತ ವೇದಿಕೆ ದೊರೆಯಲಿದೆ. ವಾಹನ ಖರೀದಿಯಲ್ಲಿ ಮೋಸ ಹೋಗುವ ಸಂಭವವಿದೆ. ಹಣಕಾಸಿನ ವ್ಯವಹಾರದಲ್ಲಿ ಬಿಗಿ ನಿಲುವು ತಾಳುವುದು ಉತ್ತಮ. ಹಿರಿಯರ ಬಹುದಿನಗಳ ಬಯಕೆ ಈಡೇರಲಿದೆ. ಸರ್ಕಾರಿ ನೌಕರರಿಗೆ ಅನಿರೀಕ್ಷಿತ ವರ್ಗಾವಣೆ, ಬಂಧುಗಳೊಂದಿಗಿದ್ದ ವೈರತ್ವವನ್ನು ಬಹಳ ಜಾಣ್ಮೆಯಿಂದ ಬಗೆಹರಿಸುವಿರಿ. ಆದಾಯದ ಮೂಲದಲ್ಲಿ ಏರಿಕೆ. ಸ್ನೇಹಿತರು ನೀಡುವ ಸಲಹೆ ಸ್ವೀಕರಿಸಿ, ಬೆಲೆಬಾಳುವ ವಸ್ತುಗಳ ಖರೀದಿ, ಅತಿಯಾದ ಬಳಲಿಕೆಯಿಂದ ದೇಹಾರೋಗ್ಯದ ಮೇಲೆ ಅಡ್ಡಪರಿಣಾಮ, ಬೇಳೆಕಾಳು ವ್ಯಾಪಾರಿಗಳಿಗೆ ವಹಿವಾಟು ಜೋರಾಗಿಯೇ ನಡೆಯಲಿದೆ. ಅತಿಯಾದ ತಿರುಗಾಟ ಅಷ್ಟು ಒಳ್ಳೆಯದಲ್ಲ. ಗುರು-ಶುಕ್ರ-ಶನಿ ಶುಭ ದಿನಗಳು.

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ) (ತೊ.ನ.ನಿ.ನು.ನೆ.ನೋ.ಯ.ಯು.)**
ಬಗೆಹರಿಯದ ಸಮಸ್ಯೆಗಳಿಗೆ ಹಿರಿಯರಿಂದ ಪರಿಹಾರ, ಬಿಡುವಿಲ್ಲದ ಕೆಲಸಗಳು ನಿಮ್ಮ ಆದಾಯವನ್ನು ಹೆಚ್ಚಿಸಿದರೂ, ಉಳಿತಾಯ ಮಾತ್ರ ಶೂನ್ಯ. ಸಂಪಾದನೆ ಎಲ್ಲವೂ ಪರೋಪಕಾರಕ್ಕೋಸ್ಕರ ವ್ಯಯವಾಗಲಿದೆ. ಸಂಬಂಧಪಡದ ವಿಚಾರದಲ್ಲಿ ಮಡದಿ-ಮಕ್ಕಳು ಮತ್ತು ನಿಮ್ಮ ನಡುವೆ ವಾಗ್ವಾದ ನಡೆಯಲಿದೆ. ಬರಬೇಕಾಗಿರುವ ಬಾಕಿ ಹಣ ಇಷ್ಟರಲ್ಲೇ ಕೈಸೇರಲಿದೆ. ನ್ಯಾಯವಾದಿಗಳಿಗೆ ಬಿಡುವಿಲ್ಲದ ಕೆಲಸ, ನಿಮ್ಮ ಏಳಿಗೆಗಾಗಿ ಶ್ರಮಿಸುವವರನ್ನು ಗೌರವಿಸಿರಿ. ಸರ್ಕಾರಿ ಕಛೇರಿಗಳಿಗೆ ಲೇಖನಿ ಮೊದಲಾದ ವಸ್ತುಗಳನ್ನು ಪೂರೈಸುವವರು ಬಾಕಿ ಹಣಕ್ಕಾಗಿ ಪರದಾಡಬೇಕಾದೀತು. ರಾಜಕೀಯ ಪ್ರವೇಶ ಮಾಡಲು ಇನ್ನೂ ಕೆಲಕಾಲ ಕಾಯುವುದು ಉತ್ತಮ. ಮಹಿಳೆಯರು, ಲಲಿತ ಸಹಸ್ರನಾಮ ಪಠಿಸುವುದು ಲೇಸು. ಸೋಮ-ಮಂಗಳ-ಶುಕ್ರ ಶುಭ ದಿನಗಳು.

**ಧನಸ್ಸು (ಮೂಲ, ಪೂರ್ವಾಷಾಡ, ಉತ್ತರಾಷಾಡ) (ಯೆ.ಯೋ. ಬ.ಬಿ.ಬು.ಧ.ಫ.ಡ.ಬೆ.)**
ಆದಾಯದ ಮೂಲದಲ್ಲಿ ಹೆಚ್ಚಳ, ಮಕ್ಕಳ ಭವಿಷ್ಯದ ದೃಷ್ಟಿಯಿಂದ ಉಳಿತಾಯ ಸೂಕ್ತ. ಸರ್ಕಾರಿ ಮಟ್ಟದಲ್ಲಿ ಹಿಡಿದ ಕೆಲಸಗಳು ಯಶಸ್ವಿಯಾಗಲಿವೆ, ಪ್ರತಿಯೊಂದು ಕೆಲಸ, ಕಾರ್ಯಗಳಲ್ಲಿ, ಅತ್ಯುತ್ಸಾಹದಿಂದ ಭಾಗವಹಿಸುವಿರಿ. ವ್ಯವಹಾರದಲ್ಲಿ, ಪಾಲುದಾರರ ಸಂಪೂರ್ಣ ಬೆಂಬಲ ದೊರೆಯಲಿದೆ. ಕಾನೂನು ಹೋರಾಟದಲ್ಲಿ ಗೆಲುವು ನಿಮ್ಮದಾಗಲಿದೆ. ಮನೆಯಲ್ಲಿ ಪೂರ್ವಯೋಜಿತ ಮಂಗಳ ಕಾರ್ಯಗಳ ಸಿದ್ಧತೆ, ಬಯಸಿದ ಎಲ್ಲಾ ಸೌಲಭ್ಯಗಳು ದೊರೆಯುವವು. ಹಿರಿಯರೊಂದಿಗೆ ವಿನಾಕಾರಣ ವಾಗ್ವಾದ ಮಾಡಿದಲ್ಲಿ ಸಂಬಂಧಕ್ಕೆ ಧಕ್ಕೆ ಬರಬಹುದು. ಭಾನು-ಮಂಗಳ-ಗುರು ಶುಭ ದಿನಗಳು.

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2) (ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**
ಹಣದ ಹರಿವು ನಿರೀಕ್ಷಿತ ಮಟ್ಟದಲ್ಲಿಲ್ಲದಿದ್ದರೂ, ಬೇರೆ ಮೂಲಗಳಿಂದ ದೊರೆಯಲಿರುವ ಆರ್ಥಿಕ ನೆರವು, ನಿಮ್ಮ ಹೊಸ ಯೋಜನೆಗಳಿಗೆ ನೆರವಾಗಲಿದೆ. ಇದಕ್ಕೆ ಪೂರಕವಾಗಿ, ವಿದೇಶದಲ್ಲಿರುವ ಮಕ್ಕಳಿಂದಲೂ ಅನಿರ್ಬಂಧಿತ ನೆರವು ದೊರೆಯಲಿದೆ. ಸಂಘ-ಸಂಸ್ಥೆಗಳಲ್ಲಿ, ನಿಮ್ಮ ಸ್ಥಾನಮಾನಗಳು ಹೆಚ್ಚಲಿದೆ. ವ್ಯಾಪಾರ-ವ್ಯವಹಾರಗಳಲ್ಲಿ ಪ್ರಗತಿ ಕಂಡರೂ ನಿರೀಕ್ಷಿಸಿದಷ್ಟು ಲಾಭವಿಲ್ಲ. ಮಹಿಳೆಯರು ಅಪರಿಚಿತರೊಂದಿಗೆ ಮಾಡುವ ವ್ಯವಹಾರದಲ್ಲಿ ಹಣ ಕಳೆದುಕೊಳ್ಳುವ ಸಂಭವವಿದೆ. ಚಿನ್ನಾಭರಣ ತಯಾರಕರಿಗೆ, ಹೆಚ್ಚಿನ ಬೇಡಿಕೆ ಬರಲಿದೆ.ಪ್ರತಿಯೊಂದಕ್ಕೂ ಕೊಂಕು ಮಾತಾಡುವುದನ್ನು ಬಿಡಿರಿ. ಸಾಧು, ಸಂತರ ದರ್ಶನ ಭಾಗ್ಯವನ್ನು ಯಾವುದೇ ಕಾರಣಕ್ಕೂ ತಪ್ಪಿಸಿಕೊಳ್ಳಬೇಡಿ. ವಿಷ್ಣು ಸಹಸ್ರನಾಮ ಪಠಿಸಿರಿ, ಸೋದರಿಗೆ ಉದ್ಯೋಗ ಪ್ರಾಪ್ತಿಯಾಗಲಿದೆ. ಮಂಗಳ-ಶುಕ್ರ-ಶನಿ ಶುಭ ದಿನಗಳು.


**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3) (ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**
ಕೆಲವೊಮ್ಮೆ ವಸ್ತು ಸ್ಥಿತಿಯನ್ನು ಅರಿತು ಹೊಂದಿಕೊಂಡು ಹೋಗುವುದು ಉತ್ತಮ. ಗುತ್ತಿಗೆದಾರರು ತಮ್ಮ ಬಾಕಿ ಹಣ ಬಂದ ಮೇಲೆ ಹೊಸ ಕೆಲಸ ಕೈಗೆತ್ತಿಕೊಳ್ಳುವುದು ಲೇಸು. ಚಾಡಿ ಮಾತುಗಳನ್ನು ಕೇಳುವುದರಿಂದ ಕುಟುಂಬದ ನೆಮ್ಮದಿ ಹಾಳು, ವಿದ್ಯಾರ್ಥಿಗಳು ಅಧ್ಯಯನದಲ್ಲಿ ಯಶಸ್ವಿಯಾಗುವರು. ಹಣದ ಹರಿವು ಸಾಧಾರಣ. ಪೂರ್ವನಿರ್ಧರಿತ ದೇವತಾ ಕಾರ್ಯಗಳು ಸುಗಮವಾಗಿ ನೆರವೇರಲಿವೆ. ಮತ್ತೊಬ್ಬರ ಸಾಲಕ್ಕೆ ನೀವು ಜಾಮೀನುದಾರರಾಗಬೇಡಿ. ಇದರಿಂದ ಮುಂದೆ ನಿಮಗೇ ತೊಂದರೆಯಾಗಲಿದೆ. ಆಸ್ತಿ ವಿಭಾಗದ ಚರ್ಚೆ ಫಲಪ್ರದವಾಗಲಿದೆ. ಕಷ್ಟದಲ್ಲಿರುವ ಸ್ನೇಹಿತರಿಗೆ ಸಾಧ್ಯವಾದಷ್ಟು ನೆರವಾಗಿ. ದೂರದ ಪ್ರಯಾಣ ಅಷ್ಟು ಸೂಕ್ತವಲ್ಲ. ಆರೋಗ್ಯದ ವಿಷಯದಲ್ಲಿ ಎಚ್ಚರ, ಗೋ ಸೇವೆಯನ್ನು ಮಾಡಿ. ಗುರು-ಶುಕ್ರ-ಶನಿ ಶುಭ ದಿನಗಳು.

**ಮೀನ (ಪೂರ್ವಾಭಾದ್ರ 4, ಉತ್ತರಾಭಾದ್ರ, ರೇವತಿ) (ದಿ.ದು.ಖ.ಝ.ಥ.ದೆ.ದೋ.ಖ.ಚ.ಚಿ.)**
ಕೆಲಸ ಕೊಡಿಸುವುದಾಗಿ ನಂಬಿಸಿ ವಂಚನೆ ಮಾಡುವವರಿದ್ದಾರೆ ಎಚ್ಚರ, ಅರ್ಧಕ್ಕೇ ನಿಂತಿದ್ದ ವಿದ್ಯಾಭ್ಯಾಸವನ್ನು ಮುಂದುವರೆಸಿ, ಶತ್ರು-ಮಿತ್ರರ ಅರಿವಿಲ್ಲದೆ, ಮತ್ತೊಬ್ಬ ರೊಂದಿಗೆ ವ್ಯವಹರಿಸಬೇಡಿ. ಮಗನಿಗೆ ಉತ್ತಮ ವೇತನದ ನೌಕರಿ ದೊರೆಯಲಿದೆ. ಹೆಚ್ಚಿನ ಬಡ್ಡಿಯಾಸೆಗೆ ಹೋಗಿ ಅಸಲು ಕಳೆದುಕೊಳ್ಳಬೇಡಿ. ಅತಿಯಾದ ದೈಹಿಕ ಶ್ರಮ ಆರೋಗ್ಯವನ್ನು ಹಾಳುಮಾಡೀತು. ನಿವೃತ್ತಿಯಂಚಿನಲ್ಲಿರುವವರು, ತಮ್ಮ ಗಳಿಕೆಯ ಹಣ ಜೋಪಾನ ಮಾಡಿ. ಹಿರಿಯರಿಗೆ ಪ್ರಯಾಣ ಒಳ್ಳೆಯದಲ್ಲ. ನಿಂತುಹೋಗಿದ್ದ ಮಗಳ ವಿವಾಹದ ಮಾತುಕತೆ ಮತ್ತೆ ಮುನ್ನೆಲೆಗೆ ಬರಲಿದೆ. ಕುಲದೇವತಾರಾಧನೆಯಿಂದ ಪುಣ್ಯಪ್ರಾಪ್ತಿ ಭಾನು-ಸೋಮ-ಗುರು ಶುಭ ದಿನಗಳು.

**ವಿಶೇಷ ದಿನಗಳು : ದಿನಾಂಕ : 13.1.2021 ಬುಧವಾರ, ಭೋಗಿಹಬ್ಬ, ಎಳ್ಳಮಾವಾಸ್ಯೆ. ದಿನಾಂಕ:14.1.2021 ಗುರುವಾರ ಮಧ್ಯಾಹ್ನ 2-00 ಘಂಟೆಯಿಂದ ಸೂರ್ಯಾಸ್ತ ಪರ್ಯಂತ ಪರ್ವಕಾಲ, ತಿಲತರ್ಪಣ, ಸಂಕ್ರಾಂತಿ ಹಬ್ಬ, ಉತ್ತರಾಯಣ ಪುಣ್ಯಕಾಲ, ದಿನಾಂಕ 15-1-2021 ಶುಕ್ರವಾರ ಕರಿ ದಿನ.**

## ಪದವಾಣಿ-14

ನಾಗರಾಜು ಗೊಡಬನಹಾಳ್



**ಎಡದಿಂದ ಬಲಕ್ಕೆ :**

1) ಮನೆಯ ಎರಡು ಕಂಬಗಳ ಅಥವಾ ಎರಡು ತೊಲೆಗಳ ನಡುವೆ ಇರುವ ಪ್ರದೇಶದ ಪರಿಮಿತಿ 3
4) ವಿದ್ವಾಂಸ, ಜ್ಞಾನಿ 3
6) ಕನ್ನಡದ ಹೈಡ್ರೋಜನ್ 5
7) ಪಾಪ ಮಾಡಿದವರನ್ನು ಮರಣಾನಂತರ ಯಮ ಶಿಕ್ಷೆಗೆ ಗುರಿಪಡಿಸಬಹುದೆಂದು ಭಾವಿಸಲಾದ ಲೋಕ 3
9) ಯಕ್ಷಿಣಿ, ಯಕ್ಷಸ್ತ್ರೀ 3
11) ಹಾಡುವ ಕಲೆ ಎಂಬರ್ಥದ ಪದ 3
13) ಹೂವಿನ ತೋಟ ಮಾಡುವವ 4
14) ಇನ್ನೊಬ್ಬರ ಪರವಾಗಿ ವಾದಿಸುವ ವಕೀಲನ ಕೆಲಸ 4
15) ಜ್ಯೋತಿಷ್ಯದ ಹನ್ನೆರಡು ರಾಶಿಗಳಲ್ಲಿ ಒಂದು 3
17) ಕೊನೆಗೆ ತೋಟವಿರುವ ಸೌಧ 3
19) ಇದು ಅರವತ್ತು ಸಂವತ್ಸರಗಳಲ್ಲಿ ಕೊನೆಯದು 3
21) ಕೆಲಸಗಳ ವಿವರಣೆ ಎಂಬರ್ಥದ ಪದ 5
22) ಕರಾರುವಕ್ಕಾದ ಎಂಬರ್ಥದ ಪದ 3
23) ಸುಂದರವಾದ ಹೆಂಗಸು, ಚೆಲುವೆ 3

**ಮೇಲಿನಿಂದ ಕೆಳಕ್ಕೆ :**

1) ಕಣ್ಣಿಗೆ ಹಚ್ಚಿಕೊಳ್ಳುವ ಕಪ್ಪು ಕಾಡಿಗೆ 3
2) ಧಾನ್ಯ ಸಂಗ್ರಹಿಸುವ ಸ್ಥಳ ಚೆಲ್ಲಾಪಿಲ್ಲಿಯಾಗಿದೆ 3
3) ಶಿವರಾಜ್‌ಕುಮಾರ್ ನಟಿಸಿದ ಹನುಮಂತನ ಚಿತ್ರ ಕೊನೆಗೆ ದೀರ್ಘವಾಗಿದೆ 4
4) ಕಮಲ, ತಾವರೆ 3
5) ಹರೆಯದ ಯುವತಿ 3
8) ಇಪ್ಪತ್ತೈದು ವರ್ಷ ತುಂಬಿದಾಗ ಆಚರಿಸುವ ಬೆಳ್ಳಿಹಬ್ಬ 5
10) ಕೆನ್ನೆಗೆ ಹೊಡೆಯುವಿಕೆ ಎಂಬರ್ಥದ ಪದ 5
11) ನದಿಗಳು ಕೂಡುವ ಸ್ಥಳ 3
12) ಇದು ಒಂದು ಬಗೆಯ ಲೋಹ 3
16) ಮರುಕದ ಸಮಾನಾರ್ಥಕ ಪದ 4
17) ಒಡಹುಟ್ಟಿದ ಸೋದರಿ 3
18) ಆಗುವುದಿಲ್ಲವೆಂದು ಹೇಳುವಿಕೆ ಎಂಬರ್ಥದ ಪದ 3
19) ಕೊನೆಯಿಲ್ಲದ, ಮಹತ್ತರವಾದ 3
20) ಯಕ್ಷಗಾನದಲ್ಲಿ ಬರುವ ಸ್ತ್ರೀವೇಶ/ಮಾಯಾವಿನಿ. 3

(ಉತ್ತರಗಳು ಮುಂದಿನ ವಾರಕ್ಕೆ)

**ಪದವಾಣಿ - 13ರ ಉತ್ತರಗಳು :**

**ಎಡದಿಂದ ಬಲಕ್ಕೆ :** 1) ಹೊಸವರ್ಷದ ಶುಭಾಶಯ 6) ಕುಂತಿ 7) ಗರಗಸ 8) ಕಾರಂತ 9) ಡಬ್ಬು 10) ಕನ್ನಡ 11) ಸ್ತಿದೋ (ದೋಸ್ತಿ) 14) ಬಳ್ಳಾರಿ 15) ಸಹವಾಸಾ 16) ಹಸ 18) ಇಪ್ಪತ್ತೊಂದು ಹರ್ಷ ತರಲಿ.

**ಮೇಲಿನಿಂದ ಕೆಳಕ್ಕೆ :** 1) ಹೊಸಗನ್ನಡ 2) ವಕ್ರಗತಿ 3) ದತ್ತಿ 4) ಶಕುಂತ 5) ಯತಿ 8) ಕಾರ್ನಾಡ 10) ಕಸ್ತೂರಿ 12) ದೋಣಿ ಸಾಗಲಿ 13) ಸಹಮತ 14) ಬಸಪ್ಪ 16) ಹಇ (ಇಹ) 7) ದಾಹ.

## ರಾಜನಹಳ್ಳಿ ಮಠದಲ್ಲಿ ನಾಳೆ ಸಚಿವರ, ಸಂಸದರ, ಶಾಸಕರ ಸಭೆ



ಮಲೇಬೆನ್ನೂರು, ಜ.9- ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದಲ್ಲಿ ಬರುವ ಫೆಬ್ರವರಿ 8 ಮತ್ತು 9 ರಂದು ಹಮ್ಮಿಕೊಂಡಿರುವ 3ನೇ ವರ್ಷದ ವಾಲ್ಮೀಕಿ ಜಾತ್ರೆಯ ಅಂಗವಾಗಿ ನಾಳೆ ದಿನಾಂಕ 11ರ ಸೋಮವಾರ ಬೆಳಿಗ್ಗೆ 11.30ಕ್ಕೆ ರಾಜನಹಳ್ಳಿ ಮಠದಲ್ಲಿ ವಾಲ್ಮೀಕಿ ಜಾತ್ರಾ ಸಮಿತಿ ಸಭೆಯನ್ನು ಕರೆಯಲಾಗಿದೆ.

ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ದಿವ್ಯ ಸಾನ್ನಿಧ್ಯದಲ್ಲಿ ಮತ್ತು ವಾಲ್ಮೀಕಿ ಜಾತ್ರಾ ಸಮಿತಿ ಅಧ್ಯಕ್ಷರೂ, ನೀರಾವರಿ ಸಚಿವರೂ ಆದ ರಮೇಶ್ ಜಾರಕಿಹೊಳಿ ಅವರ ಅಧ್ಯಕ್ಷತೆಯಲ್ಲಿ ಕರೆದಿರುವ ಈ ಸಭೆಯಲ್ಲಿ ವಾಲ್ಮೀಕಿ ಜಾತ್ರೆಯ ರೂಪು-ರೇಷೆಗಳನ್ನು ಮತ್ತು ಮೀಸಲಾತಿ ಹೆಚ್ಚಳ ವಿಚಾರವಾಗಿ ಚರ್ಚಿಸಲಾಗುವುದು ಎಂದು ಗುರುಪೀಠದ ಆಡಳಿತಾಧಿಕಾರಿ ಟಿ.ಓಬಳಪ್ಪ ತಿಳಿಸಿದ್ದಾರೆ.

## ನಗರದಲ್ಲಿ ಇಂದು ಕವಿಗೋಷ್ಠಿ

ಶಿಕ್ಷಕ ಯೋಗೇಂದ್ರ ನಾಯ್ಕ ಮತ್ತು ಶ್ರೀಮತಿ ವೀಣಾ ದಂಪತಿ ಪುತ್ರನ ನಾಮಕರಣ ಅಂಗವಾಗಿ ರೋಟರಿ ಬಾಲಭವನದಲ್ಲಿ ರಾಜ್ಯಮಟ್ಟದ ಕವಿಗೋಷ್ಠಿ ಇಂದು ಬೆಳಿಗ್ಗೆ 10.30ಕ್ಕೆ ನಡೆಯಲಿದೆ.

ಬಿ. ವಾಮದೇವಪ್ಪ ಅಧ್ಯಕ್ಷತೆಯಲ್ಲಿ ನಡೆಯುವ ಕವಿಗೋಷ್ಠಿಯನ್ನು ಹೆಚ್.ಕೆ. ಲಿಂಗರಾಜ್ ಉದ್ಘಾಟಿಸುವರು. ಗಂಗಾಧರ ಬಿ.ಎಲ್. ನಿಟ್ಟೂರ್ ಆಶಯ ನುಡಿಯಾಡುವರು. ಮುಖ್ಯ ಅತಿಥಿಗಳಾಗಿ ಸುರೇಂದ್ರ ವಾಕ್ಡೋತ್, ಡಾ. ಆನಂದ್ ಋಗ್ವೇದಿ, ಶಿವಯೋಗಿ ಹಿರೇಮಠ, ಮಹಾಂತೇಶ್ ಬಿ. ನಿಟ್ಟೂರು, ಸಂತೇಬೆನ್ನೂರು ಫೈಜ್ನಟ್ರಾಜ್, ಪ್ರಕಾಶ್ ಕೊಡಗನೂರು, ಆನಂದ್ ಕುಮಾರ್ ಹೆಚ್, ಪತ್ರೇಶ್, ಕಲಿವೀರ ಕಳ್ಳಿಮನಿ, ಶ್ರೀಮತಿ ಮಲ್ಲಮ್ಮ ನಾಗರಾಜ್, ಶ್ರೀಮತಿ ವೀಣಾ ಮಹಾಂತೇಶ್ ಭಾಗವಹಿಸುವರು.

## ನಗರದಲ್ಲಿ ಇಂದು ಸನ್ಮಾನ

ಗ್ರಂಥ ಸರಸ್ವತಿ ಪ್ರತಿಭಾ ರಂಗ ಇವರ ಆಶ್ರಯದಲ್ಲಿ ಕನ್ನಡ ನುಡಿಜಾಣ ಪ್ರತಿಭಾ ಪುರಸ್ಕಾರ ಪ್ರಧಾನ ಮತ್ತು ಶತಮಾನದ ಕನ್ನಡ ಕಾವ್ಯ ವಾಚನ ನಿತ್ಯೋತ್ಸವ ಹಾಗೂ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ವಿಜೇತರಿಗೆ ಸನ್ಮಾನ ಸಮಾರಂಭವು ಇಂದು ಬೆಳಿಗ್ಗೆ 11 ಗಂಟೆಗೆ ವಿದ್ಯಾನಗರ 2ನೇ ಬಸ್ ನಿಲ್ದಾಣದ ಬಳಿ ಇರುವ ಉದ್ಯಾನವನದ ಕಾವ್ಯಮಂಟಪದಲ್ಲಿ ನಡೆಯಲಿದೆ.

ಸಾನ್ನಿಧ್ಯವನ್ನು ಡಾ. ಬಸವ ಮರುಳಸಿದ್ಧ ಸ್ವಾಮೀಜಿ (ಚಿಕ್ಕಮಗಳೂರು) ವಹಿಸುವರು. ಡಾ. ಎಂ.ಜಿ. ಈಶ್ವರಪ್ಪ, ಯುಗಧರ್ಮ ರಾಮಣ್ಣ ಅವರುಗಳನ್ನು ಸನ್ಮಾನಿಸಲಾಗುವುದು. ವಿಶೇಷ ಆಹ್ವಾನಿತರಾಗಿ ಡಿಸಿ ಮಹಾಂತೇಶ ಬೀಳಗಿ, ಎಸ್ಪಿ ಹನುಮಂತರಾಯ ಭಾಗವಹಿಸುವರು. ಮುಖ್ಯ ಅತಿಥಿಗಳಾಗಿ ಸಿ.ಆರ್. ಪರಮೇಶ್ವರಪ್ಪ, ಹೆಚ್.ಕೆ. ಲಿಂಗರಾಜ್ ಆಗಮಿಸುವರು. ಅಧ್ಯಕ್ಷತೆಯನ್ನು ಆರ್. ಶಿವಕುಮಾರಸ್ವಾಮಿ ಕುರ್ಕಿ ವಹಿಸುವರು.

## ರಾಣೇಬೆನ್ನೂರಿನಲ್ಲಿ ಇಂದು ಸಾಹಿತ್ಯ ಸಂಗಮ, ರಂಗ ಸಂಭ್ರಮ

ರಂಗ ಕುಸುಮ ಪ್ರಕಾಶನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ಕರ್ನಾಟಕ ಸಂಘದಲ್ಲಿ ಇಂದು ಬೆಳಿಗ್ಗೆ 9.30 ಕ್ಕೆ ಸಾಹಿತ್ಯ ಸಂಗಮ-ರಂಗ ಸಂಭ್ರಮ ನಡೆಯಲಿದೆ.

ಅಧ್ಯಕ್ಷತೆಯನ್ನು ಸುರೇಶ ಜಿ. ಅಂದಾನಪ್ಪನವರ ವಹಿಸುವರು. ಕಾರ್ಯಕ್ರಮವನ್ನು ರಾಜಶೇಖರ ಕದಂಬ ಉದ್ಘಾಟಿಸುವರು. ಚಂದ್ರಪ್ಪ ಬಾರಂಗಿ ಆಶಯ ನುಡಿಗಳನ್ನಾಡುವರು. ಮುಖ್ಯ ಅತಿಥಿಗಳಾಗಿ ಡಾ. ಜಯಪ್ಪ ಹೊನ್ನಾಳಿ, ಶ್ರೀಮತಿ ಶಶಿಕಲಾ ಹುಡೇದ ಆಗಮಿಸುವರು. ಕಾರ್ಯಕ್ರಮದಲ್ಲಿ ಶಿವಾನಂದ ಸೊಂಡೂರು, ಪ್ರಭಾಕರ ಎನ್. ಶಿಗ್ಲಿ ಉಪಸ್ಥಿತರಿರುವರು.


## ಸಾರ್ವಜನಿಕ ಪ್ರಕಟಣೆ

ದಿನಾಂಕ: 10-01-2021

**ಶ್ರೀ ಯಜಮಾನ್ ಮೋತಿ ವೀರಣ್ಣ ಬಿನ್ ಲೇಟ್ ಯಜಮಾನ್ ಮೋತಿ ದೊಡ್ಡಪ್ಪ, ಮತ್ತು ಯಜಮಾನ್ ಮೋತಿ ರಾಜೇಂದ್ರ ಬಿನ್ ಯಜಮಾನ್ ಮೋತಿ ವೀರಣ್ಣ, ವಾಸ: # 2645/3 (2645/1), 2ನೇ ಕ್ರಾಸ್, 1ನೇ ಮೇನ್, ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ** ಆದ ನಾನು ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ,

ಈ ಕೆಳಕಂಡ ಷೆಡ್ಯೂಲ್ ಸೊತ್ತು ನನ್ನ ಹಕ್ಕುದಾರಿ ಹಾಗೂ ಸ್ವಾಧೀನಾನುಭವದಲ್ಲಿರುವ ಸೊತ್ತಾಗಿದ್ದು, ಕೆಳಕಂಡ ಸೊತ್ತಿಗೆ ಸಂಬಂಧವಾಗಿ ಯಾರಾದರೂ ಕ್ರಯ, ಬಾಡಿಗೆ, ಲೀಜ್ ಹಾಗೂ ಇತ್ಯಾದಿಗಳಿಗೆ ವ್ಯವಹರಿಸಬಾರದೆಂದು, ಈ ಕೆಳಕಂಡ ಸೊತ್ತಿನ ಸಂಬಂಧವಾಗಿ ದಾವಣಗೆರೆ ಪ್ರಧಾನ ಸಿವಿಲ್ ನ್ಯಾಯಾಲಯ (ಕಿ.ವಿ.) ದಾವಣಗೆರೆ ಇವರಲ್ಲಿ ಓ.ಎಸ್. ನಂ. 446/2020 ವ್ಯಾಜ್ಯವು ವಿಚಾರಣೆ ಹಂತದಲ್ಲಿರುತ್ತದೆ. ಹಾಗಾಗಿ ಸದರಿ ಕೆಳಕಂಡ ಸೊತ್ತಿಗೆ ಸಂಬಂಧಿಸಿದಂತೆ ಯಾರೂ, ಯಾವ ವಿಧದಿಂದಲೂ ವ್ಯವಹರಿಸಬಾರದೆಂದು ಸಾರ್ವಜನಿಕರ ಗಮನಕ್ಕೆ ಪ್ರಕಟಿಸಲಾಗಿದೆ.

**-: ಷೆಡ್ಯೂಲ್ ಸೊತ್ತು : -**

ದಾವಣಗೆರೆ ತಾಲ್ಲೂಕು ಸಬ್‌ರಿಜಿಸ್ಟ್ರಾರ್‌ರವರ ಅಧಿಕಾರಕ್ಕೆ ಒಳಪಟ್ಟ ದಾವಣಗೆರೆ ಸಿಟಿ, ಚಾಮರಾಜಪೇಟೆ ಮುಖ್ಯರಸ್ತೆಯಲ್ಲಿ ಬರತಕ್ಕ ಡೋರ್ ನಂ. 276/1 ರಲ್ಲಿ ಅಳತೆ : ಪೂರ್ವ - ಪಶ್ಚಿಮ 120 ಅಡಿ, ಉತ್ತರ-ದಕ್ಷಿಣ 10 ಅಡಿ ಉಳ್ಳ ಜಾಗದಲ್ಲಿ ನಿರ್ಮಿಸಿರುವ ವಾಣಿಜ್ಯೋಪಯೋಗಿ ಕಟ್ಟಡಕ್ಕೆ **ಚಕ್ಕುಬಂದಿ:** ಪೂರ್ವಕ್ಕೆ - 20 ರಸ್ತೆ, ಪಶ್ಚಿಮಕ್ಕೆ - ಚಾಮರಾಜಪೇಟೆ ಮುಖ್ಯ ರಸ್ತೆ, ಉತ್ತರಕ್ಕೆ - ಬಿ. ಚನ್ನಬಸಪ್ಪನವರ ಬಿಲ್ಡಿಂಗ್, ದಕ್ಷಿಣಕ್ಕೆ - ಯಲವಟ್ಟಿ ಮಂಜುನಾಥ (ಹಿಂದಿನ ಮಾಲೀಕರು: ವೈ.ಎಂ. ನಾಗರಾಜ & ವೈ.ಎಂ. ವಿಶ್ವನಾಥ) ಇವರ ಸೊತ್ತು, ಈ ಮಧ್ಯದ ಪೂರಾ ಸೊತ್ತು ಒಂದು.

**ಯಜಮಾನ್ ಮೋತಿ ವೀರಣ್ಣ,** ಮಾಜಿ ಶಾಸಕರು,
**ಯಜಮಾನ್ ಮೋತಿ ರಾಜೇಂದ್ರ,** ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.



Aster RV HOSPITAL
J P NAGAR, BANGALORE

ಮೆದುಳಿನ ಮತ್ತು ಬೆನ್ನುಮೂಳೆಯ ವಿಶೇಷ ಒಪಿಡಿ

ಡಾ. ಯದು ಕೆ. ಎಲ್.
ಸಲಹೆಗಾರರು ನರಶಸ್ತ್ರ ಚಿಕಿತ್ಸಕರು ಮತ್ತು ಬೆನ್ನುಮೂಳೆಯ ಶಸ್ತ್ರಚಿಕಿತ್ಸಕರು
ಆಸ್ಟರ್ ಆಸ್ಪತ್ರೆ, ಬೆಂಗಳೂರು

ಯದು ಕಿವಿ-ಮೂಗು-ಗಂಟಲು / ಮೆದುಳು ಮತ್ತು ಬೆನ್ನುಮೂಳೆಯ ಸೆಂಟರ್
#462, 7ನೇ ಕ್ರಾಸ್, ಪಿ.ಜೆ. ಬಡಾವಣೆ, ದಾವಣಗೆರೆ.
10ನೇ ಜನವರಿ 2021, (ಪ್ರತಿ ತಿಂಗಳ 2ನೇ ಭಾನುವಾರ)
ಬೆಳಿಗ್ಗೆ 9:00 ರಿಂದ ಸಂಜೆ 3:00ರ ವರೆಗೆ

ನೀವು ಈ ಕೆಳಗಿನ ಯಾವುದಾದರೂ ಸಮಸ್ಯೆಯಿಂದ ಬಳಲುತ್ತಿದ್ದರೆ ಈ ತಜ್ಞರನ್ನು ಭೇಟಿಮಾಡಿ:

• ಮೆದುಳಿನ ಅಸ್ವಸ್ಥತೆಗಳು • ತಲೆ ನೋವು • ಆಘಾತಕಾರಿ ಮೆದುಳು ಗಾಯಗಳು • ಮೆದುಳಿನ ಗಡ್ಡೆ • ಪಾರ್ಶ್ವವಾಯು • ಅಪಸ್ಮಾರ • ಬೆನ್ನುಮೂಳೆಯ ತೊಂದರೆಗಳು • ಬೆನ್ನು ನೋವು • ಕುತ್ತಿಗೆ ನೋವು • ಕಾಲು ನೋವು • ಆಘಾತಕಾರಿ ಬೆನ್ನುಮೂಳೆ ಗಾಯಗಳು • ಬೆನ್ನುಮೂಳೆಯ ವಿರೂಪ

ಕರೆಮಾಡಿ:
99451 90006, 08192231033, 9483964373



KSS Foundation (R.) Davanagere.

## ಕೆಎಸ್‌ಎಸ್ ಆಂಗ್ಲ ಮಾಧ್ಯಮ (ವಸತಿಯುತ) ಶಾಲೆ

# 1382/5, 6, 'ಮಾತೃ ಕೃಪ' 2ನೇ ಕ್ರಾಸ್, ಸರಸ್ವತಿ ನಗರ, ದಾವಣಗೆರೆ - 577 004.
ಫೋನ್ ನಂ. : 9008487807, 9035110629, 9880127276, 08192-262904, 9845781788

## ವಿವಿಧ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳು ಬೇಕಾಗಿದ್ದಾರೆ

ಈ ಕೆಳಗೆ ತಿಳಿಸಿದ ವಿವಿಧ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅಗತ್ಯ ದಾಖಲೆಗಳೊಂದಿಗೆ ಈ ಜಾಹೀರಾತು ಪ್ರಕಟವಾದ ಒಂದು ವಾರದ ಒಳಗೆ ಮೇಲಿನ ವಿಳಾಸಕ್ಕೆ ಅರ್ಜಿ ಸಲ್ಲಿಸಲು ಅಥವಾ ಖುದ್ದಾಗಿ ಸಂಪರ್ಕಿಸಲು ಕೋರಲಾಗಿದೆ.

Date : 09.01.2021

| ಕ್ರ.ಸಂ. | ಹುದ್ದೆಗಳ ವಿವರ | ಸಂಖ್ಯೆ | ವಿದ್ಯಾರ್ಹತೆ | ಅನುಭವ |
|---|---|---|---|---|
| 1 | Principal | 1 | MA / MSc.<br>BA / BSc. B.Ed. | 2 Years |
| 2 | Academic Co-ordinator | 1 | MA / MSc.<br>BA / BSc. B.Ed. | 2 Years |
| 3 | HRD | 1 | MBA / MSW | 2 Years |
| 4 | Science Teacher | 4 | B.Sc. B.Ed. | 2 Years |
| 5 | Maths Teacher | 4 | B.Sc. B.Ed. | 2 Years |
| 6 | English Teacher | 4 | B.A. B.Ed. | 2 Years |
| 7 | Social Science Teacher | 4 | B.A. B.Ed. | 2 Years |
| 8 | Hindi Teacher | 2 | B.A. Hindi B.Ed. | 2 Years |
| 9 | Physical Edn. Teache | 2 | B.A. BP.Ed. | 2 Years |
| 10 | LKG / UKG Teachers | 6 | D.Ed., B.Ed. / NTC Etc., | 2 Years |
| 11 | Art and Craft Teacher | 2 | BFA / B.V.E. | 1 Years |
| 12 | Computer Teacher | 2 | B.Sc. CS | 1 Years |
| 13 | Music Teacher | 1 | B Music | |
| 14 | Hostel Warden | Male-1,<br>Female-1 | B.A./B.Sc. B.Ed. or MSW | 1 Years |
| 15 | Cooks for Residence Hostel | 2 | Experience in Cooking | |
| 16 | Cooking Assistance | 4 | Experience in Asst. Cooking | |

ಜೇಷ್ಠತಾ ಆಧಾರದನ್ವಯ ನೇಮಕಾತಿ ಪ್ರಕ್ರಿಯೆ ನಡೆಸಲಾಗುವುದು.
ವಿಶೇಷ ಸೂಚನೆ : ಶಿಕ್ಷಕರ ಹುದ್ದೆಗಳಿಗೆ ಕಡ್ಡಾಯವಾಗಿ ಇಂಗ್ಲಿಷ್ ಭಾಷೆಯನ್ನು ನಿರರ್ಗಳವಾಗಿ ಮಾತನಾಡುವಂತಿರಬೇಕು ಹಾಗೂ ಆಂಗ್ಲ ಮಾಧ್ಯಮದಲ್ಲಿ ವಿದ್ಯಾಭ್ಯಾಸ ಮಾಡಿರಬೇಕು.

**ಹೆಚ್.ಕೆ. ಬಸವರಾಜ್,** MBA-Em. ಕಾರ್ಯದರ್ಶಿಗಳು
**ಬಿ. ವಿಕಾಸ್,** BE, BBM ವ್ಯವಸ್ಥಾಪಕ ನಿರ್ದೇಶಕರು
**ಸಿ.ಹೆಚ್. ಹಿರೇಗೌಡರ್,** B.Sc. LL.B. ಆಡಳಿತ ಸಲಹೆಗಾರರು


## ತಾಯಿ, ತಂಗಿಯ ಜೋಡಿ ಕೊಲೆಗೈದಿದ್ದ ಆರೋಪಿ ಬಂಧನ

ಮಲೇಬೆನ್ನೂರು

ದಾವಣಗೆರೆ, ಜ.9- ಆಸ್ತಿ ಪಾಲು ಮಾಡಿಕೊಳ್ಳುವ ವಿಚಾರದಲ್ಲಿ ವೈಷಮ್ಯದ ಹಿನ್ನೆಲೆಯಲ್ಲಿ ನಿನ್ನೆ ತನ್ನ ತಾಯಿ ಮತ್ತು ತಂಗಿಯ ಜೋಡಿ ಕೊಲೆಗೈದಿದ್ದ ಆರೋಪಿತನನ್ನು ಮಲೇಬೆನ್ನೂರು ಠಾಣೆ ಪೊಲೀಸರು ಇಂದು ಬಂಧಿಸಿದ್ದಾರೆ.

ಹರಿಹರ ತಾಲ್ಲೂಕು ಹೊಸ ಪಾಳ್ಯ ಗ್ರಾಮದ ಕೆ. ಭರಮಗೌಡ ಅಲಿಯಾಸ್ ಭರಮನಗೌಡ ಬಂಧಿತ ಆರೋಪಿ. ಬಂಧಿತ ಆರೋಪಿಯು ತನ್ನ ತಾಯಿ ಸರೋಜಮ್ಮ ಮತ್ತು ತಂಗಿ ಜ್ಯೋತಿಯನ್ನು ಕೊಲೆ ಮಾಡಿರುವ ಬಗ್ಗೆ ಮಲೇಬೆನ್ನೂರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು. ಆರೋಪಿ ಪತ್ತೆಗಾಗಿ ಎಸ್ಪಿ ಹನುಮಂತರಾಯ, ಎಎಸ್ಪಿ ಎಂ. ರಾಜೀವ್ ಮಾರ್ಗದರ್ಶನದಲ್ಲಿ ಗ್ರಾಮಾಂತರ ಡಿವೈಎಸ್ಪಿ ನರಸಿಂಹ ತಾಮ್ರಧ್ವಜ, ಹರಿಹರ ವೃತ್ತ ಪ್ರಭಾರ ಸಿಪಿಐ ಜೆ. ಲಕ್ಷ್ಮಣ್ ನೇತೃತ್ವದಲ್ಲಿ ಮಲೇಬೆನ್ನೂರು ಪಿಎಸ್‌ಐ ವೀರ ಬಸಪ್ಪ ಕುಸಲಾಪುರ ಮತ್ತು ಸಿಬ್ಬಂದಿಗಳಾದ ಬಸವರಾಜ್, ಸಂತೋಷ್‌ಕುಮಾರ್, ರಾಜಶೇಖರ್, ಜೆ.ಎಸ್. ಮೂರ್ತಿ, ಕೆ. ಶಿವಕುಮಾರ್, ನಾಗಪ್ಪ ಕಡೆಮನಿ, ಮೊಹ್ಮದ್ ಇಲಿಯಾಜ್, ನಾಗರಾಜ್ ಒಳಗೊಂಡ ವಿಶೇಷ ತಂಡವು ಆರೋಪಿತನನ್ನು ಬಂಧಿಸಿದೆ. ವಿಚಾರಣೆಗೆ ಒಳಪಡಿಸಿದಾಗ ಆಸ್ತಿ ಪಾಲು ಮಾಡಿಕೊಳ್ಳುವ ವಿಚಾರದಲ್ಲಿ ವೈಷಮ್ಯ ದಿಂದ ಕೊಲೆ ಮಾಡಿರುವುದಾಗಿ ಒಪ್ಪಿಕೊಂಡಿದ್ದಾನೆ. ಬಂಧಿತನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

## ಜಿಲ್ಲೆಯಲ್ಲಿ ಇಂದಿನಿಂದ 3 ದಿನ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಪ್ರವಾಸ

ನಗರಾಭಿವೃದ್ಧಿ ಖಾತೆ ಸಚಿವರೂ ಆಗಿರುವ ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ.ಬಸವರಾಜ್ ಅವರು ಇಂದು - ನಾಳೆ ಮತ್ತು ನಾಡಿದ್ದು ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ.

ಇಂದು ಬೆಳಿಗ್ಗೆ 10.30 ಕ್ಕೆ ಹೊನ್ನಾಳಿ ಪ್ರವಾಸಿ ಮಂದಿರಕ್ಕೆ ಆಗಮಿಸುವರು. ಹೊನ್ನಾಳಿ ಮತ್ತು ನ್ಯಾಮತಿ ತಾಲ್ಲೂಕಿನ ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಬಿಜೆಪಿ ಬೆಂಬಲಿತ ಚುನಾಯಿತ ಸದಸ್ಯರು ಹಾಗೂ ಪರಾಜಿತ ಅಭ್ಯರ್ಥಿಗಳಿಗೆ ಹೊನ್ನಾಳಿಯ ಅಗಳ ಮೈದಾನದಲ್ಲಿ ಅಭಿನಂದನಾ ಸಮಾರಂಭ ಮತ್ತು ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳುವರು. ಮಧ್ಯಾಹ್ನ 3 ಗಂಟೆಗೆ ದಾವಣಗೆರೆ ಪ್ರವಾಸಿ ಮಂದಿರಕ್ಕೆ ಆಗಮಿಸುವರು. ಮಧ್ಯಾಹ್ನ 3 ರಿಂದ 5 ಗಂಟೆವರೆಗೆ ಪ್ರವಾಸಿ ಮಂದಿರದಲ್ಲಿ ಜಿಲ್ಲಾ ಹಿರಿಯ ಅಧಿಕಾರಿಗಳೊಂದಿಗೆ ಚರ್ಚೆ ನಡೆಸುವರು ಹಾಗೂ ಅಲ್ಲಿಯೇ ವಾಸ್ತವ್ಯ ಹೂಡುವರು.

ನಾಳೆ ಬೆಳಿಗ್ಗೆ 7 ರಿಂದ 9 ಗಂಟೆವರೆಗೆ ದಾವಣಗೆರೆ ಮಹಾನಗರಪಾಲಿಕೆ ಹಾಗೂ ಸ್ಮಾರ್ಟ್ ಸಿಟಿ, ನಗರಾಭಿವೃದ್ಧಿ ಪ್ರಾಧಿಕಾರ ಮತ್ತು ಕ.ನ.ನೀ.ಸ ಮತ್ತು ಒ.ಚ ಮಂಡಳಿ ಮತ್ತು ಕೆಯುಐಡಿಎಫ್‌ಸಿ ವ್ಯಾಪ್ತಿಯ ಅಭಿವೃದ್ದಿ ಕಾಮಗಾರಿಗಳನ್ನು ವೀಕ್ಷಣೆ ಮಾಡುವರು. ಬೆಳಿಗ್ಗೆ 10.30 ರಿಂದ 11.30 ರವರೆಗೆ ಮಹಾನಗರ ಪಾಲಿಕೆ ಸಭಾಂಗಣದಲ್ಲಿ ಸ್ಮಾರ್ಟ್‌ಸಿಟಿಯ ಅಭಿವೃದ್ದಿ ಕಾಮಗಾರಿಗಳ ಪ್ರಗತಿ ಪರಿಶೀಲನಾ ಸಭೆ ನಡೆಸುವರು. ಬೆಳಿಗ್ಗೆ 11.30 ರಿಂದ ಮಧ್ಯಾಹ್ನ 12.30 ರವರೆಗೆ ಪಾಲಿಕೆ ಸಭಾಂಗಣದಲ್ಲಿ ಪಾಲಿಕೆಯ ಅಭಿವೃದ್ದಿ ಕಾಮಗಾರಿಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಪಾಲ್ಗೊಳ್ಳುವರು. ಮಧ್ಯಾಹ್ನ 12.30 ರಿಂದ ಮಧ್ಯಾಹ್ನ 1.30 ರವರೆಗೆ ಕೆಯುಐಡಿಎಫ್‌ಸಿ ಮತ್ತು ಕ.ನ.ನೀ.ಸ ಮತ್ತು ಒ.ಚ ಮಂಡಳಿ ಕಾಮಗಾರಿಗಳ ಕುರಿತು ಪ್ರಗತಿ ಪರಿಶೀಲನಾ ಸಭೆಯಲ್ಲಿ ಪಾಲ್ಗೊಂಡು, ಮಧ್ಯಾಹ್ನ 3 ರಿಂದ ಸಂಜೆ 4.30 ರವರೆಗೆ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಕಾರ್ಯಕರ್ತರೊಂದಿಗೆ ಸಭೆ ನಡೆಸುವರು.

ದಿನಾಂಕ 12 ರ ಬೆಳಿಗ್ಗೆ ದಾವಣಗೆರೆಯಿಂದ ನಿರ್ಗಮಿಸಿ, 8.30 ಕ್ಕೆ ಹೊನ್ನಾಳಿ ಪ್ರವಾಸಿ ಮಂದಿರಕ್ಕೆ ಆಗಮಿಸುವರು. ಬೆಳಿಗ್ಗೆ 8.30 ರಿಂದ ಮಧ್ಯಾಹ್ನ 12 ರವರೆಗೆ ಹೊನ್ನಾಳಿಯಲ್ಲಿ ಆಯೋಜಿಸಲಾಗಿರುವ 'ರೈತರೊಂದಿಗೆ ಒಂದು ದಿನ' ಕಾರ್ಯಕ್ರಮದಲ್ಲಿ ಭಾಗವಹಿಸುವರು. ಮಧ್ಯಾಹ್ನ 12 ಗಂಟೆಗೆ ಹೊನ್ನಾಳಿಯಿಂದ ನಿರ್ಗಮಿಸುವರು.

## ನಗರದಲ್ಲಿ ಇಂದು ಮೈಲಾರ ಲಿಂಗೇಶ್ವರ ಸ್ವಾಮಿಯ ಕಾರ್ತಿಕ

ಶಿಬಾರದ ಶ್ರೀ ಮೈಲಾರ ಲಿಂಗೇಶ್ವರ ದೇವಸ್ಥಾನ ಟ್ರಸ್ಟ್‌ನಿಂದ ಕೊಂಡಜ್ಜಿ ರಸ್ತೆಯಲ್ಲಿರುವ ಶಿಬಾರ ಮೈಲಾರ ಲಿಂಗೇಶ್ವರ ಸ್ವಾಮಿಯ 35 ನೇ ಕಡೇ ಕಾರ್ತಿಕೋತ್ಸವ, ಲಕ್ಷದೀಪೋತ್ಸವವು ಇಂದು ಸಂಜೆ 7.30ಕ್ಕೆ ನಡೆಯಲಿದೆ.

ಈ ಕಾರ್ಯಕ್ರಮಕ್ಕೂ ಮುನ್ನ ಸಂಜೆ 5 ಕ್ಕೆ ಜಿ.ಶಂಭುಲಿಂಗಪ್ಪ ಮತ್ತು ಕಲಾ ತಂಡದಿಂದ ಸಾಂಸ್ಕೃತಿಕ ಸುಗಮ ಸಂಗೀತ, ರಸಮಂಜರಿ ಜರುಗಲಿದೆ.

## ನಾಳೆ ಯೋಗಾಸನ ತರಬೇತಿ ಶಿಬಿರ

ದಾವಣಗೆರೆ, ಜ.9- ಆಚಾರ್ಯ ಯೋಗ ವಿದ್ಯಾಶಾಲೆ ವತಿಯಿಂದ ಉಚಿತ ಯೋಗಾಸನ ತರಬೇತಿಯು ಆಲೂರ್ ಕನ್ವೆನ್ಷನ್ ಹಾಲ್‌ನಲ್ಲಿ ದಿನಾಂಕ 11 ರಿಂದ 17 ರವರೆಗೆ ನಡೆಯಲಿದೆ. ವಿವರಕ್ಕೆ ಸಂಪರ್ಕಿಸಿ 9036719573.


Coaching Classes For 10th Std

Maths and Science Subjects. classes will begin from 11.01.2021 (Monday)
*contact:* Mr. David
# 2491, MCC 'A' Block, 9th cross,
Bakkeshwara School Road, Davanagere

94482 33494





